"ಕಟ್ಟೀಮನಿಯವರ ಬರೆದಿರುವ 'ಮಾಡಿ ಮಡಿದವರು', ನಿರಂಜನ ಅವರು ಬರೆದಿರುವ 'ಚಿರಸ್ಮರಣೆ' : ತೌಲನಿಕ ಅಧ್ಯಯನ"

(ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಕನ್ನಡ ಎಂ.ಫಿಲ್. ಪದವಿಗಾಗಿ ಸಾದರ ಪಡಿಸಿದ ನಿಬಂಧ)

ಸಂಶೋಧನಾ ವಿದ್ಯಾರ್ಥಿ:

ನಾಗರತ್ನಮ್ಮ.ಎಲ್.

ಮಾರ್ಗದರ್ಶಕರು :

ಡಾ. ಬೋರೇಗೌಡ ಚಿಕ್ಕಮರಳಿ

ಸಹ ಪ್ರಧ್ಯಾಪಕರು

ವಿಜಯ ಪ್ರಥಮ ದರ್ಜೆ ಕಾಲೇಜು,

ಪಾಂಡವಪುರ

ಕರ್ನಾಟಕ ಸಂಘ (ರಿ.), ಮಂಡ್ಯ.

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ,

(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)

೨೦೧೩-೨೦೧೪

"ಕಟ್ಟೀಮನಿಯವರ ಬರೆದಿರುವ 'ಮಾಡಿ ಮಡಿದವರು', ನಿರಂಜನ ಅವರು ಬರೆದಿರುವ 'ಚಿರಸ್ಮರಣೆ' : ತೌಲನಿಕ ಅಧ್ಯಯನ"

(ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಕನ್ನಡ ಎಂ.ಫಿಲ್. ಪದವಿಗಾಗಿ
ಸಾದರ ಪಡಿಸಿದ ನಿಬಂಧ)

ಸಂಶೋಧನಾ ವಿದ್ಯಾರ್ಥಿ:

ನಾಗರತ್ನಮ್ಮ.ಎಲ್.

ಮಾರ್ಗದರ್ಶಕರು :

ಡಾ. ಬೋರೇಗೌಡ ಚಿಕ್ಕಮರಳಿ
ಸಹ ಪ್ರಾಧ್ಯಾಪಕರು
ವಿಜಯ ಪ್ರಥಮ ದರ್ಜೆ ಕಾಲೇಜು,
ಪಾಂಡವಪುರ.

ಕರ್ನಾಟಕ ಸಂಘ (ರಿ.), ಮಂಡ್ಯ.
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ.
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
೨೦೧೩-೨೦೧೪

ಮಾರ್ಗದರ್ಶಕರ ದೃಢೀಕರಣ ಪತ್ರ

2013-14ನೇ ಸಾಲಿನಲ್ಲಿ ನಾಗರತ್ನಮ್ಮ.ಎಲ್. ಎಂ.ಫಿಲ್ ವಿದ್ಯಾರ್ಥಿಯು ಈ ಪರೀಕ್ಷೆಯ ಅಂಗವಾಗಿ **"ಕಟ್ಟೀಮನಿಯವರ 'ಮಾಡಿ ಮಡಿದವರು', ನಿರಂಜನ ಅವರ 'ಚಿರಸ್ಮರಣೆ' : ತೌಲನಿಕ ಅಧ್ಯಯನ"** ಎಂಬ ವಿಷಯ ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಇದನ್ನು ಇವರು ಮೊದಲು ಯಾವುದೇ ಪದವಿ ಡಿಪ್ಲೋಮ ಅಧ್ಯಯನ ಪ್ರಶಸ್ತಿಗಾಗಿ ಯಾವುದೇ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು :

(ಡಾ. ಬೋರೇಗೌಡ ಚಿಕ್ಕಮರಳಿ)
ಸಹ ಪ್ರಾಧ್ಯಾಪಕರು,
ವಿಜಯ ಪ್ರಥಮ ದರ್ಜೆ ಕಾಲೇಜು,
ಪಾಂಡವಪುರ.

ದಿನಾಂಕ : 10-07-2014
ಸ್ಥಳ : ಮಂಡ್ಯ

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ, ಸಂಶೋಧನಾ ಕೇಂದ್ರದಲ್ಲಿ 2013-14ರ ಸಾಲಿಗೆ ಕನ್ನಡ ಎಂ.ಫಿಲ್ . ಅಧ್ಯಯನದ ಅಂಗವಾಗಿ ಸಂಶೋಧನಾ ನಿಂಬಂಧ ರಚಿಸಲು ಕಟ್ಟೀಮನಿಯವರ ಬರೆದಿರುವ **'ಮಾಡಿ ಮಡಿದವರು'**, **ಮತ್ತು ನಿರಂಜನ ಅವರು ಬರೆದಿರುವ 'ಚಿರಸ್ಮರಣೆ'** ಕಾದಂಬರಿಗಳ ತೌಲನಿಕ ಅಧ್ಯಯನವನ್ನು ಆಯ್ಕೆ ಮಾಡಿಕೊಂಡು ಡಾ. ಬೋರೇಗೌಡ ಚಿಕ್ಕಮರಳಿರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯವನ್ನಾಗಲಿ, ಬೇರೆ ಯಾವ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್ (ಕನ್ನಡ) ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸಂಶೋಧನಾ ವಿದ್ಯಾರ್ಥಿ:

ನಾಗರತ್ನಮ್ಮ.ಎಲ್.

(ನಾಗರತ್ನಮ್ಮ.ಎಲ್.)

ರಿ.ನಂ. KRSMKS-00702

ಕನ್ನಡ ವಿಭಾಗ

ಕರ್ನಾಟಕ ಸಂಘ (ರಿ.), ಮಂಡ್ಯ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

ದಿನಾಂಕ : 10-07-2014

ಸ್ಥಳ : ಮಂಡ್ಯ

ಪರಿವಿಡಿ

ಕಟ್ಟೀಮನಿ ಅವರ 'ಮಾಡಿಮಡಿದವರು' ಮತ್ತು ನಿರಂಜನ ಅವರ 'ಚಿರಸ್ಮರಣೆ' ತೌಲನಿಕ ಅಧ್ಯಯನ

ಅಧ್ಯಾಯ-೧

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಸ್ವಾತಂತ್ರ್ಯದ ಬಗ್ಗೆ ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿ ಬಗ್ಗೆ ಸೃಜನಶೀಲ ಕೃತಿಗಳನ್ನು ರಚಿಸಿ ಜನಮನದಲ್ಲಿ ಉಳಿಯುವಂತೆ ಮಾಡಲು ಕನ್ನಡದ ಹಲವಾರು ಲೇಖಕರು ಪ್ರಯತ್ನಿಸಿದ್ದಾರೆ. ಅಂತಹವರಲ್ಲಿ ಕಟ್ಟೀಮನಿ ಮತ್ತು ನಿರಂಜನರವರು ಪ್ರಮುಖರಾಗಿದ್ದಾರೆ. ಬಸವರಾಜ ಕಟ್ಟೀಮನಿಯವರು ಬರೆದ 'ಮಾಡಿಮಡಿದವರು' ಹಾಗೂ ನಿರಂಜನರವರು ಬರೆದ 'ಚಿರಸ್ಮರಣೆ' ಕೃತಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಕೃತಿಗಳಾಗಿವೆ. ಈ ಕೃತಿಗಳಲ್ಲಿ ತಮ್ಮದೇ ಆದ ಭಿನ್ನತೆ, ಸಾಮ್ಯತೆ, ಸಂಬಂಧ ಪರಸ್ಪರ ಹೊಂದಾಣಿಕೆಗಳಿದ್ದು ಅವುಗಳನ್ನು ಚರ್ಚಿಸುವ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡ ಈ ಎರಡು ಕೃತಿಗಳ ತೌಲನಿಕ ಅಧ್ಯಯನಕ್ಕೆ ಅನುಕೂಲವಾಗುವಂತೆ ಕೆಳಕಂಡ ರೀತಿಯಲ್ಲಿ ಅಧ್ಯಾಯಗಳನ್ನು ವಿಂಗಡಿಸಲಾಗಿದೆ. ಈ ಎರಡೂ ಕೃತಿಗಳಲ್ಲಿ ಬರುವ ಲೇಖಕರ ಚಿಂತನೆಗಳನ್ನು ವಿಶ್ಲೇಷಿಸಲಾಗಿದೆ.

ಬಸವರಾಜಕಟ್ಟೀಮನಿಯವರ ಮಾಡಿಮಡಿದವರು ಕೃತಿಯಲ್ಲಿ ನೇರವಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಸ್ವಾತಂತ್ರ್ಯ ಪಡೆಯಲು ಸಂದರ್ಭವಿದೆ ಹಾಗೂ ಚಿರಸ್ಮರಣೆ ಕೃತಿಯಲ್ಲಿ ಆಂತರಿಕವಾಗಿ ಸ್ವಾತಂತ್ರ್ಯ ಪಡೆಯುವ ಸಂದರ್ಭವಿದೆ ಈ ಎರಡು ಕೃತಿಗಳು ಜನರ ಮನಸ್ಸಿನಲ್ಲಿ ಹೇಗೆ ಸ್ವಾತಂತ್ರ್ಯ ಕಲ್ಪನೆ ಮೂಡಿಸಿದವು ಹಾಗೂ ವಸಾಹತುಶಾಹಿಗಳು ಬಂಡವಾಳಶಾಹಿಗಾರರ ವಿರುದ್ಧ ಜನರು ತಿರುಗಿಬಿದ್ದಿದ್ದು ಏಕೆ ಎಂಬುದನ್ನು ತಿಳಿಸಿರುವುದನ್ನು ವಿಮರ್ಶಿಸುತ್ತಾ, ವಿಶ್ಲೇಷಿಸುತ್ತಾ ಲೇಖಕರ ಚಿಂತನೆಗಳನ್ನು ವಿಶ್ಲೇಷಿಸಲಾಗಿದೆ.

ಬಸವರಾಜ ಕಟ್ಟೀಮನಿ ಮತ್ತು ನಿರಂಜನರವರ ಕೃತಿಗಳಾದ ಕ್ರಮವಾಗಿ ಮಾಡಿಮಡಿದವರು ಹಗೂ ಚಿರಸ್ಮರಣೆಯ ಕಾದಂಬರಿಗಳ ಸಂಶೋಧನಾ ದೃಷ್ಟಿಯಿಂದ ಹಾಗೂ ತೌಲನಿಕ ಅಧ್ಯಯನದ ದೃಷ್ಟಿಯಿಂದ ಕೆಳಕಂಡ ಅಧ್ಯಯನದ ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ :

೧) ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೨) ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭ

೩) 'ಮಾಡಿಮಡಿದವರು' ಕಾದಂಬರಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಣ ಮತ್ತು

ಜೀವನದ ಚಿಂತನೆ.

೪) 'ಚಿರಸ್ಮರಣೆ' ಕಾದಂಬರಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಣ ಮತ್ತು ಜೀವನ ಚಿಂತನೆ.

೫) ಎರಡೂ ಕಾದಂಬರಿಗಳ ಸ್ವಾತಂತ್ರ್ಯ ಸಂಗ್ರಾಮದ ತೌಲನಿಕ ವಿಶ್ಲೇಷಣೆ

೬) ಉಪಸಂಹಾರ

ಇವುಗಳು ಬಸವರಾಜ ಕಟ್ಟೀಮನಿ ಮತ್ತು ನಿರಂಜನರವರ ಕ್ರಮವಾಗಿ ಮಾಡಿಮಡಿದವರು ಮತ್ತು ಚಿರಸ್ಮರಣೆ ಕೃತಿಗಳ ತೌಲನಿಕ ಅಧ್ಯಯನ ಅಥವಾ ಸಂಶೋಧನಾ ಅಧ್ಯಯನದ ಅಧ್ಯಾಯಗಳಾಗಿವೆ.

ಕನ್ನಡ ಎಂ.ಫಿಲ್. ಪದವಿಗಾಗಿ ನಡೆಸುತ್ತಿರುವ ಅಧ್ಯಯನದ ಅಂಗವಾಗಿ ರಚಿಸಬೇಕಾಗಿರುವ ಸಂಶೋಧನಾ ನಿಬಂಧಕ್ಕೆ ವಿಷಯವಾಗಿ ಕಟ್ಟೀಮನಿರವರು ರಚಿಸಿರುವ ಮಾಡಿಮಡಿದವರು ಮತ್ತು ನಿರಂಜನರವರು ಬರೆದಿರುವ ಚಿರಸ್ಮರಣೆ ಕಾದಂಬರಿಗಳನ್ನು ಆರಿಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಈ ಎರಡೂ ಕೃತಿಗಳ ಭಿನ್ನತೆ ಸಾಮ್ಯತೆ, ಸಂಬಂಧ, ಇವುಗಳು ಕುರಿತು ಚರ್ಚಿಸಲಾಗುವುದು. ಅಲ್ಲದೆ, ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಗಳು ನಡೆದು ಬಂದ ದಾರಿಯನ್ನು ತಿಳಿಸಲಾಗುವುದು. ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಸಾಕಾರಗೊಳಿಸಿದ ಮಾಡಿಮಡಿದವರು ಕೃತಿ ಅಸದೃಶ್ಯ ಪಾತ್ರ ಚಿತ್ರಣದಿಂದ ಮತ್ತು ಸಮರ್ಪಕವಾದ ಸನ್ನಿವೇಶಗಳನ್ನು ಇಂದಿನ ಸಮಾಜದಲ್ಲಿ ರಾಷ್ಟ್ರೀಯತೆಯ ಕಲ್ಪನೆಯ ಅವಶ್ಯಕತೆ ಏಕೆ ಇದೆ ಎಂಬುದನ್ನು ಸಾಕಾರಗೊಳಿಸುತ್ತದೆ. ಸಾಮಾಜಿಕ ಕಾದಂಬರಿ ಧ್ಯೇಯಯ ಸಮಾನತೆಯುವಳ್ಳ ಸಮಾಜದ ರಚನೆ ಸರಿಯಾಗಿದೆಯೇ ಎಂದು ಗುರ್ತಿಸುವುದು ಹಾಗೂ ಮಾಡಿಮಡಿದವರು ಕಾದಂಬರಿಯಲ್ಲಿನ ಸ್ವಾತಂತ್ರ್ಯ ಚಳುವಳಿಯು ದೇಶಕ್ಕೆ ಯಾವ ರೀತಿ ನೆರವಾಯಿತು ಎಂಬುದನ್ನು ತಿಳಿಸುವುದು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಣವನ್ನು ಮತ್ತು ಸಂದರ್ಭವನ್ನು ವಿವರವಾಗಿ ಚಿತ್ರಿಸಿ. ಇಂದಿನ ಸಮಾಜದಲ್ಲಿ ರಾಷ್ಟ್ರೀಯತೆ ಏಕೆ ಅವಶ್ಯಕ ಎಂಬುದನ್ನು ತಿಳಿಸುವ ಉದೇಶವನ್ನು ಈ ಅಧ್ಯಯನ ಒಳಗೊಂಡಿದೆ.

ಕಟ್ಟೀಮನಿಯವರು ಮಾಡಿ ಮಡಿದವರು ಕೃತಿಯಲ್ಲಿ ಯಾವ ರೀತಿ ಸ್ವಾತಂತ್ರ್ಯ ಚಳುವಳಿಯು ಜನರ ಮನಸ್ಸಿನಲ್ಲಿ ಬೃಹದ್ಧಾಕಾರವಾಗಿ ಬೆಳೆಯಿತು. ಹಾಗೂ ಕಟ್ಟೀಮನಿಯವರು ಸ್ವಾತಂತ್ರ್ಯದ ಚಳುವಳಿಯು ಹಳ್ಳಿಹಳ್ಳಿಗೂ ಯಾವ ರೀತಿ ಹಬ್ಬಿತು ಎಂಬುದರ ವಿವರವಾಗಿ ತಿಳುಸುವ ಉದ್ದೇಶವನ್ನು ಹೊಂದಿದೆ.

ನಿರಂಜನರವರು ಬರೆದಿರುವ ಚಿರಸ್ಮರಣೆ ಕೃತಿಯ ವಿರುದ್ಧ ರೈತರ ಶೋಷಣೆಯ ಸ್ವಾತಂತ್ರ್ಯ ಪೂರ್ವದಲ್ಲಿ ಸಂಘಟನೆಗಳು, ಪ್ರಾರಂಭವಾದವು ಎಂಬುದನ್ನು ತಿಳಿಸುವ ದಿನಗಳಲ್ಲಿ

ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಸಮ್ಮಿಳಿಸಿ ರೈತರ ಹೋರಾಟಕ್ಕೆ ಸ್ಫೂರ್ತಿಯನ್ನು ನೀಡುವ ಅಂಶಗಳನ್ನು ತಿಳಿಸುವ ಕಮ್ಯೂನಿಸ್ಟ್ ಧೋರಣೆಯನ್ನು ತಿಳಿಸುವ ಉದ್ದೇಶವನ್ನು ಹೊಂದಿದೆ.

ಈ ಅಧ್ಯಯನದ ವ್ಯಾಪ್ತಿಯನ್ನು ನೋಡಿದಾಗ ಈ ಅಧ್ಯಯನವು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಡೆದ ೧೮೫೭ರ ದಂಗೆಯ ಅಂದರೆ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಅಂಶಗಳು ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆ, ಬ್ರಿಟಿಷರೊಂದಿಗಿನ ರಾಜರ ಹೋರಾಟಗಳು, ಸ್ವಾತಂತ್ರ್ಯ ಚಳುವಳಿಯಲ್ಲಿ ಮಂದಗಾಮಿ, ತೀವ್ರಗಾಮಿಗಳ ಪಾತ್ರ, ಸಮಾಜ ವಾದಿ ಚಳುವಳಿಗಳು, ಭಾರತ ಬಿಟ್ಟು ತೊಲಗಿ ಚಳುವಳಿ, ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯಲ್ಲಿನ ಪಾತ್ರ ಹಾಗೂ ಮಾಡು ಇಲ್ಲವೆ ಮಡಿ ಎಂದು ಗಾಂಧೀಜಿಯವರ ಕರೆ ಕೊಟಿದ್ದು, ಇವುಗಳನ್ನು ತಿಳಿಸಲಾಗುವುದು.

ಈ ಅಧ್ಯಯನವು ಬಸವರಾಜ ಕಟ್ಟೀಮನಿಯವರು ಬರೆದಿರುವ 'ಮಾಡಿಮಡಿದವರು' ಕಾದಂಬರಿಯಲ್ಲಿನ ರಾಷ್ಟ್ರೀಯತೆ ಕಲ್ಪನೆ ಮೂಡಿಸುತ್ತದೆ. ಅಲ್ಲದೆ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಗ್ರಾಮೀಣ ಜನರು ದೇಶ ಭಕ್ತಿಯಿಂದ ಪಾಲ್ಗೊಂಡ ರೀತಿಯನ್ನು ವಿವರಿಸುತ್ತದೆ ಅಲ್ಲದೆ ಮಾಡಿ ಮಡಿದವರು ಕೃತಿ ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಮನೋಭಾವನೆ ರೂಪುಗೊಳಿಸುವಲ್ಲಿ ಅಲ್ಲಿನ ಪಾತ್ರಗಳು ಹೇಗೆ ಸಹಕಾರಿಯಾಗಿವೆ ಎಂಬುದನ್ನು ತಿಳಿಸುತ್ತದೆ.

ಅಲ್ಲದೆ ಶೇಖರಪ್ಪನ ದೇಶಭಕ್ತಿ ಗಾಂಧಿನಿಷ್ಠೆ ಮತ್ತು ರಾಷ್ಟ್ರೀಯತೆ ಕಲ್ಪನೆ ಮತ್ತು ಶೇಖರಪ್ಪನ ಜೀವನವನ್ನು ವಿವರವಾಗಿ ತಿಳಿಸಲಾಗುತ್ತದೆ ಹಾಗೂ ಸ್ವಾತಂತ್ರ್ಯ ಚಳುವಳಿಯಲ್ಲಿ ಅವನ ಪಾತ್ರವನ್ನು ವಿಶ್ಲೇಷಿಸುವ ಸಂದರ್ಭವನ್ನು ಚಿತ್ರಿಸುವುದು. ಬಾಳಪ್ಪ ಮತ್ತು ಸಾಗಣ್ಣನು ಸ್ವಾತಂತ್ರ್ಯ ಚಳುವಳಿಗೆ ಅವರ ಅಳಿಲು ಸೇವೆಯನ್ನು ನೆನಪಿಸುವ ವಿಚಾರಗಳನ್ನು ತಿಳಿಸಲಾಗುತ್ತದೆ. ವಿಶ್ವನಾಥ ದೇಸಾಯಿಯು ದೇಶಭಕ್ತಿಯಲ್ಲಿ ತೊಡಗಿದ್ದು ಹೇಮಾವತಿಯಲ್ಲಿ ಬೆಳೆದ ದೇಶಭಕ್ತಿ ಹೇಮಾವತಿ ಭಾಗವಹಿಸಿದ ರೀತಿ ಅದೂ ಅಲ್ಲದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಇವರೆಲ್ಲರ ಕೊಡುಗೆಗಳನ್ನು ತಿಳಿಸುವ ಆಶಯವನ್ನ ಈ ಅಧ್ಯಯನವು ಒಳಗೊಂಡಿದೆ.

ಚಿರಸ್ಮರಣೆಯ ಕೃತಿಯಲ್ಲಿನ ಶ್ರಮಿಕ ವರ್ಗದ-ಹೋರಾಟದ ಚಿತ್ರಣವನ್ನು ವಿಮರ್ಶೆಗೆ ಒಳಪಡಿಸಿ ಹಾಗೂ ಅಲ್ಲಿನ ಪಾತ್ರಗಳಾದ ಅಪ್ಪು, ಮಾಸ್ತರರು, ಕುಞಂಬು, ಅಬೂಬಕರ್, ದೇವಕಿಯವರ ಪಾತ್ರವನ್ನು ವಿವರಿಸುತ್ತ ಶ್ರಮಿಕ ವರ್ಗದ ಹೋರಾಟವನ್ನು ವಿಮರ್ಶಾತ್ಮಕವಾಗಿ ಚಿಂತಿಸಿ ಅವರ ಹೋರಾಟದ ಚಿಂತನೆಗಳನ್ನು ವಿಶ್ಲೇಷಿಸುವುದು.

ಬಸವರಾಜ ಕಟ್ಟೀಮನಿರವರ ಬದುಕು–ಬರಹ

ಕಟ್ಟೀಮನಿಯವರು ಹುಟ್ಟಿದ್ದು ೧೯೧೯ನೇ ವರ್ಷದ ಅಕ್ಟೋಬರ್ ೫ ರಂದು

ಅವರ ಆಗಿನ ಹೆಸರು ಬಸವಣ್ಣ. ಗುದ್ದವನ ಬೇನೆಯಿಂದ ಹಣ್ಣಾಗಿದ್ದ ಅವರ ತಾಯಿ ಬಾಳವ್ವ ಮಣ್ಣಿನ ಮಕ್ಕಳ ಸಹಜ ನಂಬಿಕೆಯಿಂದ ಮಲಾಮರಡಿಯ ಬಸವಣ್ಣನಿಗೆ ಅರಿಕೆಹೊತ್ತು, ಹೆತ್ತ ನಂತರ ಇಟ್ಟ ಹೆಸರದು. ಆ ಬಸವಣ್ಣ ಬೆಳೆದಂತೆ ಅದು ಬಸಣ್ಣ, ಬಸಪ್ಪ, ಬಸವೇಶ್ವರ, ಬಸ್ಯಾ ಕೂಡ ಆಗುತ್ತ ಬಂದು, ೧೯೩೭ರಲ್ಲಿ ಪತ್ರಿಕಾ ಸಂಪಾದಕರೊಬ್ಬರಿಂದ ಬಸವರಾಜ" ಎಂದು ತಿದ್ದುಪಡಿ ಹೊಂದಿದೆ. ಕಟ್ಟೀಮನಿ ಎಂಬುದು ಅವರ ಅಡ್ಡ ಹೆಸರು ಕಾಮ ಅಂದರೆ ಅವರ ಮನೆತನದ ಹೆಸರು.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಶಿರೂರು ಕಟ್ಟೀಮನಿಯವರ ತಂದೆ ಅಪ್ಪಣ್ಣನ ಊರಾದರೆ, ಅದೇ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಮಲಾಮರಡಿ ತಾಯಿ ಬಾಳವ್ವನ ಊರು. ಇಬ್ಬರೂ ನಿಕಷರಿಗಳು. ಈ ಕಾರಣಕ್ಕಾಗಿಯೇ ಮೋಸಹೋದ ಅಪ್ಪಣ್ಣ, ಇದ್ದ ಒಂದಿಷ್ಟು ಹೊಲವನ್ನೂ ಕಳೆದುಕೊಂಡು, ಸಶಸ್ತ್ರ ಪೊಲೀಸ್ ಪಡೆಯಲ್ಲಿ ಸಿಪಾಯಿಯಾಗಿ ಸೇರುತ್ತಾನೆ. ಶಿಶೂರಿನ ಕಡೆಯ ಸಂಬಂಧವನ್ನೇ ಕಡಿದುಕೊಂಡು ಆತನಿಗೆ ಮಾನವ ಊರು ಮಲಾಮರಡಿಯೇ ಒಂದು ನೆಲೆಯಾಗುತ್ತದೆ. ಮೂಲತಃ ರೈತಾಪಿ ಜನಾಂಗಕ್ಕೆ ಸೇರಿದ್ದ ಅಪ್ಪಣ್ಣ–ಬಾಳವ್ವ ಇಬ್ಬರಲ್ಲೂ ಮಣ್ಣಿನ ಮಕ್ಕಳಿಗೆ ಸಹಜವಾದ ಒರಟು, ಬಿರುಸು, ಔದಾರ್ಯ, ಪ್ರಾಮಾಣಿಕತೆ, ಸರಳತೆ, ನೇರ ನುಡಿ–ನಡೆ ಮೊದಲಾದ ಗುಣಗಳು ರಕ್ತಗತವಾಗಿದ್ದವು. ಇವುಗಳ ಜೊತೆಗೆ ಕುಂದರನಾಡಿನ ಗುಣವಿಶೇಷಗಳಾದ ಸ್ವಾಭಿಮಾನ, ಧೈರ್ಯ, ಸ್ಪಷ್ಟವಾದಿತ್ವಕ, ಕ್ರಾಂತಿಕಾರಿ ಮನೋಭಾವ, ಕೆಟ್ಟದ್ದನ್ನು ಕಟುವಾಗಿ ಪ್ರತಿಭಟಿಸುವುದು ಇವೆಲ್ಲವೂ ಅವರಲ್ಲಿ ಸಹಜವಾಗಿದ್ದವು.

ಬಾಲ್ಯದಿಂದಲೂ ಬಸವಣ್ಣನಿಗೆ ಶಿಕ್ಷಣದಲ್ಲಿ ಎಲ್ಲಿಲ್ಲದ ನಿರಾಸಕ್ತಿಯಿತ್ತು. ಶೈಕ್ಷಣಿಕವಾಗಿ ಹಿಂದುಳಿದಿದ್ದ ಪರಿಸರ, ತಂದೆಯ ನಿರಂತರ ವರ್ಗಾವರ್ಗಿ, ವರ್ಗವಾಗಿ ಹೋದಲ್ಲೆಲ್ಲ ಎದುರಾದ ಭಾಷಾ ಸಮಸ್ಯೆ– ಇವೆಲ್ಲವುಗಳಿಂದಾಗಿ ಅವರ ಶೈಕ್ಷಣಿಕ ನಿರಾಸಕ್ತಿ ಹೆಚ್ಚಾಗುತ್ತಲೇ ಹೋಯಿತು. ಆದರೂ ಅವರ ತಾಯಿಯ ಪ್ರಯತ್ನದಿಂದಾಗಿ ಅಲ್ಪ–ಸ್ವಲ್ಪಾದರೂ ಶಿಕ್ಷಣ ದೊರೆಯಿತೆನ್ನಬೇಕು. 'ನಿನ್ನಂಗ ಇವರೂ ಪೊಲೀಸ್ ಸಿಪಾಯಿ ಆಗೂದು ಬ್ಯಾಡ. ನಮ್ಮ ಶಕ್ತಿಯಿದ್ದಷ್ಟು ಕಲಿಸೋಣ' ಎಂಬ ಅವಳ ಹಪಾಹಪಿಯೇ ಇದಕ್ಕೆ ಕಾರಣ.

ಕಟ್ಟೀಮನಿಯವರ ಬದುಕು ಪತ್ರಿಕೋದ್ಯಮದ ಮೂಲಕ ಆರಂಭವಾಯಿತು. ಅವರು 'ಸಂಯುಕ್ತ ಕರ್ನಾಟಕ', 'ತರುಣ ಕರ್ನಾಟಕ' ನಂತರ 'ಕರ್ನಾಟಕ ಬಂಧು' ಎಂಬ ಪತ್ರಿಕೆಗಳಲ್ಲಿ ಕೆಲಸ ಮಾಡಿದರು. ಈ ಅನುಭವದಿಂದ ಕಟ್ಟೀಮನಿಯವರು ಬದುಕಿನ ಹಲವು ಮುಖಗಳ ಪರಿಚಯ ಮಾಡಿಕೊಂಡರು. ಇವರ ಪರಿಶ್ರಮದಿಂದ ಪ್ರಕಟವಾಗುತ್ತಿದ್ದ 'ಉಷಾ'ದಂತಹ ಪತ್ರಿಕೆಗಳು ಕರ್ನಾಟಕದಲ್ಲಿ ಪ್ರಗತಿ ಶೀಲ ಚಳವಳಿಯನ್ನು ಪ್ರಾರಂಭದಲ್ಲಿ ಪೋಷಿಸಿದವು. ಆಗಸ್ಟ್ ೧೯೪೨ರಲ್ಲಿ ನಡೆದ ಚಳವಳಿಯಲ್ಲಿ ಭಾಗವಹಿಸಿ ಸೆರೆವಾಸ

ಅನುಭವಿಸಿದರು. ಇಲ್ಲಿಂದಲೆ ಇವರ ಬರವಣಿಗೆ ಆರಂಭವಾಯಿತು. ಈ ವೇಳೆಗಾಗಲೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಾರಂಭವಾಗಿದ್ದ ಪ್ರಗತಿಶೀಲ ಚಳವಳಿಗೆ ಇದರಿಂದ ಒಂದು ಖಚಿತ ರೂಪ ಬಂದಿತು ಎಂದು ಹೇಳಬಹುದು. ಇವರ ಮೊದಲ ಕೃತಿ 'ಕಾರವಾನ್' (ಕಥಾ ಸಂಕಲನ) ೧೯೪೪ರಲ್ಲಿ ಪ್ರಕಟವಾಯಿತು. 'ಸುಂಟರಗಾಳಿ', 'ಸೈನಿಕ ಹೆಂಡತಿ', 'ಸೆರೆಯಿಂದ ಹೊರಗೆ', 'ಹುಲಿಯಣ್ಣನ ಮಗಳು', 'ಆಗಸ್ಟ್ ಒಂಬತ್ತು', 'ಗುಲಾಬಿ ಹೂ' ಇತ್ಯಾದಿ ಇವರ ಇತರ ಕಥಾಸಂಕಲನಗಳು. ನಾಟಕ : ಪಟ್ಟಣದ ಹುಡುಗಿ. ಕಾದಂಬರಿ : 'ಸ್ವಾತಂತ್ರ್ಯದೆಡೆಗೆ', 'ಮಾಡಿಮಡಿದವರು', 'ಮೋಹದಬಲೆಯಲ್ಲಿ', 'ಖಾನಾವಳಿಯ ನೀಲಾ', 'ನೀ ನನ್ನ ಮುಟ್ಟಬೇಡ', 'ಜನಿವಾರ ಮತ್ತು ಶಿವದಾರ', 'ದ್ರೋಹಿ', 'ಗೆಳೆಯನ ಮಡದಿ', 'ಸಾಕ್ಷಾತ್ಕಾರ', 'ಕತ್ತರಿ ಪ್ರಯೋ', 'ಪಾತರಗಿತ್ತಿ', 'ಚಕ್ರವ್ಯೂಹ' ಮುಂತಾದವು. ಕವಿತೆ : 'ಕಂಪೋಜಿಟರ್ ಮತ್ತು ಸ್ವತಂತ್ರವ್ವ' ಪ್ರವಾಸ ಕಥನ : 'ನಾನು ಕಂಡ ರಶಿಯಾ', ಮಕ್ಕಳ ಸಾಹಿತ್ಯ : 'ಸಂಗೊಳ್ಳಿ ರಾಯಣ್ಣ', 'ಕುಮಾರರಾಮ'. ಆತ್ಮಕಥೆ : 'ಕಾದಂಬರಿಕಾರನ ಬದುಕು', ಜೀವನ ಚರಿತ್ರೆ : 'ಸೇನಾಪತಿ ಚೆನ್ನಪ್ಪವಾಲಿ'. ಸಂಪಾದನೆ : 'ನವಿಲೂರ ಮನೆಯಿಂದ', 'ರಸಿಕರಂಗ ದರ್ಶನ' (ಇತರರೊಡನೆ). ಇವರ ಕಾದಂಬರಿಗಳಲ್ಲಿ ನೇರ ನಿರೂಪಣಾ ತಂತ್ರ ಕಂಡುಬರುತ್ತದೆ. ತಾವು ಕಂಡ ಸಮಾಜವನ್ನು ಖಂಡಿಸುವುದಕ್ಕಾಗಿಯೇ ಬಳಸಿಕೊಂಡಿದ್ದಾರೆ. ಅವರ ಕಾದಂಬರಿಗಳನ್ನು. ಇವರ ಕೆಲವು ಕಾದಂಬರಿಗಳಲ್ಲಿ (ಮಾಡಿಮಡಿದವರು, ಸ್ವಾತಂತ್ರದೆಡೆಗೆ) ರಾಷ್ಟ್ರೀಯ ಪ್ರಜ್ಞೆ ಇರುವುದನ್ನು ಕಾಣಬಹುದು. ಪ್ರಗತಿಶೀಲ ಚಳುವಳಿಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇವರು ಪ್ರಗತಿಶೀಲತೆಯ ಬಗ್ಗೆ ತಮ್ಮದೇ ಆದ ವಿಚಾರಗಳನ್ನೊಂದಿದ್ದರು.ಲ ಇವರ 'ಮಾಡಿ ಮಡಿದವರು' ಕಾದಂಬರಿ, ಸಿನಿಮಾ ಆಗಿ ಕೂಡ ಯಶಸ್ಸು ಗಳಿಸಿತು. ಇದರ ನಿರ್ದೇಶಕರು ಕೆ.ಎಂ.ಶಂಕರಪ್ಪ.[೧]

ಸ್ವಾತಂತ್ರ ಚಳುವಳಿ ಮತ್ತು ಬಸವರಾಜ ಕಟ್ಟೀಮನಿ

೧೯೪೨ರ ಆಗಸ್ಟ್ ೮ ರಂದು ಅಖಿಲಭಾರತ ಕಾಂಗ್ರೆಸ್ ಸಮಿತಿಯು ಕೊಟ್ಟ ಕರೆಯ ಮೇರೆಗೆ, ಸ್ವಾತಂತ್ರ್ಯದ ಕೊನೆಯ ಹೋರಾಟವೆಂದೇ ಪ್ರಸಿದ್ಧವಾಗಿರುವ 'ಕ್ವಿಟ್ ಇಂಡಿಯಾ' ಚಳುವಳಿ ಆರಂಭವಾಯ್ತು. ಪ್ರಮುಖ ನಾಯಕರೆಲ್ಲರ ಬಂಧನದಿಂದಾಗಿ ಇಡೀ ದೇಶವೇ ಉದ್ರಿಕ್ತಗೊಂಡು ಒಟ್ಟು ಚಳುವಳಿಯನ್ನು ಉಗ್ರರೂಪಕ್ಕೇರಿಸಿತು. ಸ್ವಾತಂತ್ರ್ಯ ಚಳುವಳಿಂಯು ಬಗ್ಗೆ ವಿದ್ಯಾರ್ಥಿಂಯಾಗಿದ್ದಾಗಿನಿಂದಲೂ ಉತ್ಸಾಹ ಹೊಂದಿದ್ದ ಕಟ್ಟೀಮನಿಯವರನ್ನು ೧೯೪೨ರ ಈ ಚಳುವಳಿ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೇರೇಪಿಸಿತು. 'ಇಂಕ್ವಿಲಾಬ್ ಜಿಂದಾಬಾದ್' ಎಂದು ಕೂಗುತ್ತ ಸ್ನೇಹಿತರೊಂದಿಗೆ ಅವರು ಧಾರವಾಡದ ಬೀದಿ ಬೀದಿಗಳಲ್ಲಿ ಸುತ್ತಾಡಿ ಪ್ರತಿಭಟನೆ ವ್ಯಕ್ತಪಡಿಸಿದರು. ಆಗಸ್ಟ್ ೯, ೧೯೪೨ರಂದು ಕಡಪಾ ಮೈದಾನದಲ್ಲಿ, 'ಧಾರವಾಡದ ಹಿಟ್ಲರ್' ಎಂದೇ ಖ್ಯಾತರಾಗಿದ್ದ ಡಾ. ಕಬ್ಬೂರ ಅರ ಭಾಷಣ ನಡೆದಾಗ ಅದನ್ನು ಭಂಗಗೊಳಿಸಲು ಪೊಲೀಸರು ಅದುದುರಿಂದಾಗಿ

ಲಾಠಿಚಾರ್ಜ್ ಮಾಡಿದರು. ಅದರಲ್ಲಿ ಕಟ್ಟೀಮನಿಯವರ ಕೈಗೆ ಬಲವಾದ ಏಟು ಬಿದ್ದಿತ್ತಲ್ಲದೇ ಅವರ ಬಂಧನವೂ ಆಯಿತು. ಯಾವ ಅಪರಾಧವನ್ನು ಮಾಡಿರದ ಕಾರಣ ಅಂದೇ ಅವರ ಬಿಡುಗಡೆಯಾಯಿತಾದರೂ ಪತ್ರಕರ್ತರಾಗಿದ್ದರಿಂದ ಅವರ ಹಿಂದೆ ಸಿ.ಐ.ಡಿ. ಒಬ್ಬ ನಿಗಾ ಇಟ್ಟು ಓಡಾಡತೊಡಗಿದ. ಇದಕ್ಕಾಗಿ "ವಾಹವಾ! ಇದೀಗ ನಾನೂ ಕ್ರಾಂತಿಕಾರನಾದಂತಾಯಿತು!" ಎಂದು ಕಟ್ಟೀಮನಿ ಹೆಮ್ಮೆಪಟ್ಟರು.

ಬಿಡುಗಡೆಯ ನಂತರ ಕಟ್ಟೀಮನಿ ಸುಮ್ಮನೆ ಕುಳಿತುಕೊಳ್ಳದೆ ತಮ್ಮ ಕೊಠಡಿಯಲ್ಲೇ 'ರಣಭೇರಿ' ಎಂಬ ಹಸ್ತಪತ್ರಿಕೆಯನ್ನು ಬರೆದು, ಅದರ ಪ್ರತಿಗಳನ್ನು ರಾತ್ರೋರಾತ್ರಿ ಗೆಳೆಯರೊಂದಿಗೆ ಧಾರವಾಡದ ಗೋಡೆಗಳ ಮೇಲೆ ಅಂಟಿಸತೊಡಗಿದರು.೮ ೧೯-೮-೧೯೪೨ರಂದು ವಿದ್ಯಾರ್ಥಿಗಳ ಸಭೆಯೊಂದರಲ್ಲಿ ಅವರು ಸರಕಾರದ ದಮನ ನೀತಿಯನ್ನು ಖಂಡಿಸಿ ಭಾಷಣ ಮಾಡಿದ್ದಕ್ಕೆ ಮತ್ತೆ ಬಂಧನಕ್ಕೊಳಗಾದರು. ವಿಚಾರಣೆ ನಡೆದು ಆರು ತಿಂಗಳ ಕಠಿಣ ಶಿಕ್ಷೆಯಾಗಿ ಅವರು ಹಿಂಡಲಗಿ ಕಾರಾಗೃಹಕ್ಕೆ ಕಳಿಸಲ್ಪಟ್ಟರು.೮ ೧೯೪೩ ಜನರಿ ೨೭ರಂದು ಬಿಡುಗಡೆಯಾಗಿ ಕಟ್ಟೀಮನಿಯವರು 'ಸೆರೆಯಿಂದ ಹೊರಗೆ' ಬಂದರು.

ಸೆರೆಯಲ್ಲಿದ್ದಾಗ ವೃಥಾ ಕಾಲಹರಣ ಮಾಡದೇ ಕಟ್ಟೀಮನಿಯವರು ಸಮಾಜವಾದ, ಸಾಮ್ಯವಾದ, ನೆಹರೂ ಅವರ ಕಿಸಾನ್ ಮಜದೂರ್ ಸಮಸ್ಯಾಕ, ಗಾಂಧೀಜಿಯವರ ಆತ್ಮಕಥೆ, ವೇಣಿಪ್ರಸಾದರ ಹಿಂದೂ-ಮುಸ್ಲಿಂ ಸಮಸ್ಯಾಕ, ಮೊದಲಾದವುಗಳ ಆಳವಾದ ಅಧ್ಯಯನ ಮಾಡಿದರು. ಸೆರೆಮನೆಯಲ್ಲಿದಾಗಲೇ ಕಟ್ಟೀಮನಿ 'ಅವನು ಕೊನೆಯುಸಿರು ಹಾಕಿದ ಬಳಿಕ', 'ಎರಡು ಗುಲಾಬಿ', 'ಬರದ ದೇವಿ', ಮೊದಲಾದ ಹತ್ತು ಹನ್ನೊಂದು ಕಥೆಗಳನ್ನು ಬರೆದರು. "ಮಾನವ ಸ್ವಭಾವದ ನೂರಾರು ಮಾದರಿಗಳ, ವೈಚಿತ್ರ್ಯಗಳ ಅನುಭವ ಬಂದುದು ಸೆರೆಮನೆಯಲ್ಲಿಯೇ. ಆನಂತರ ನಾನು ಕಥೆ-ಕಾದಂಬರಿ ಬರೆಯಲು ಅನುಭವಗಳು ತುಂಬಾ ಉಪಯುಕ್ತವೆನಿಸಿದವು." ಎನ್ನುವ ಕಟ್ಟೀಮನಿಯವರು ಹೋರಾಟ, ಚಳುವಳಿ, ಸೆರೆವಾಸ ಮೊದಲಾದವುಗಳಿಂದ ತಮ್ಮ ಬರವಣಿಗೆಯಲ್ಲಿ ಹೊಸ ದಿಕ್ಕೊಂದನ್ನು ಕಂಡುಕೊಂಡರು. 'ಸ್ವಾತಂತ್ರ್ಯದೆಡೆಗೆ', 'ಮಾಡಿಮಡಿದವರು' ಕಾದಂಬರಿಗಳು 'ಆಗಸ್ಟ್ ಒಂಬತ್ತು' ಮತ್ತು ಇತರ ಹಲವಾರು ಕಥೆಗಳೂ ಕಟ್ಟೆಯಾಗಿ ಮೂಡಿಬಂದದ್ದು ಈ ಅನುಭವದ ಹಿನ್ನೆಲೆಯಲ್ಲೆ.

ನಿರಂಜನರವರ ಬದುಕು-ಬರಹ

'ಮೃತ್ಯುಂಜಯ' ಎಂದ ಕೂಡಲೇ ನೆನೆಪಾಗುವುದು 'ನಿರಂಜನ' ಎಂಬ ಹೆಸರು. ಹೋರಾಟವನ್ನೇ ಬದುಕಿನ ಆದರ್ಶವಾಗಿಸಿಕೊಂಡು ಬಹರವನ್ನೇ ಬದುಕಾಗಿಸಿಕೊಂಡ ಪುತ್ತೂರಿನ ಕುಳಕುಂದದಲ್ಲಿ. ೧೯೩೮ರಲ್ಲಿ ಹೈಸ್ಕೂಲ್ ಮುಗಿಸಿದ ಕೂಡಲೆ ಎಡಪಂಥೀಯ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಇವರು ಕಮ್ಯೂನಿಸಂ ಕ್ರಾಂತಿಕಾರಿ

ನಿಲುವಿನಲ್ಲಿ ಅಗಾಧ ಒಲವುಳ್ಳವರಾಗಿದ್ದು, 'ಆಳುತ್ತಿದ್ದ ಬ್ರಿಟಿಷ್ ಸರ್ಕಾರಕ್ಕೆ ಕಮ್ಯೂನಿಸ್ಟ್ ಕ್ರಾಂತಿಕಾರಿ ಆಗ ಸಿಂಹಸ್ವಪ್ನ' ಎಂದು ಒಂದು ಕಡೆ ಹೇಳಿದ್ದಾರೆ. ಹೀಗೆ, ದಟ್ಟವಾಗಿ ಹರಡಿದ್ದ ಕ್ರಾಂತಿಯ ಗಂಧ ಹೀರಿದ ನಿರಂಜನರ 'ಚಿರಸ್ಮರಣೆ' ಕಾದಂಬರಿಗೆ ಕೈಯ್ಯಾರ ರೈತ ಸಂಘಟನೆಯೇ ವಸ್ತುವಾಗಿದೆ. ಕನ್ನಡನಾಡಿನ ಪ್ರಮುಖ ಪತ್ರಿಕೆಗಳಾದ 'ರಾಷ್ಟ್ರಬಂಧು', 'ತಾಯಿನಾಡು', 'ಜನವಾಣಿ', 'ಸಂಯುಕ್ತ ಕರ್ನಾಟಕ', 'ಪ್ರಜಾವಾಣಿ'ಯಲ್ಲಿ ಅಂಕಣಕಾರರಾಗಿ ಉನ್ನತ ಸ್ಥಾನವೂ ಮೀಸಲಾಗಿದೆ. ಇವರ ಅಂಕಣಗಳು 'ಅಂಕಣ', 'ದಿನಚರಿ' ಎಂಬ ಹೆಸರುಗಳಿಂದ ಪ್ರಕಟಗೊಂಡಿವೆ. ಕರ್ನಾಟಕ ಸಹಕಾರೀ ಪ್ರಕಾಶನ ಎಂಬ ಸಂಸ್ಥೆಯಿಂದ ಪ್ರಕಟಗೊಂಡ ಕಿರಿಯರ ವಿಶ್ವಕೋಶ– 'ಜ್ಞಾನಗಂಗೋತ್ರಿ' ಮತ್ತು ವಿಶ್ವಕಥಾ ಕೋಶಗಳನ್ನು ನವಕರ್ನಾಟಕ ಪ್ರಕಾಶನಗಳಿಗೆ ಪ್ರಧಾನ ಸಂಪಾದಕತ್ವದಲ್ಲಿ ನಿರ್ವಹಿಸಿಕೊಟ್ಟ ನಿರಂಜನರದು ವಿಸ್ತಾರವಾದ ಜ್ಞಾನಕ್ಷೇತ್ರ. ಹೀಗೆ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡಿರುವ ನಿರಂಜನರು ಈವರೆಗೆ, ೮೮ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ೯ ಕಥಾಸಂಕಲನ ೨೫ ಕಾದಂಬರಿಗಳು, ೩ ನಾಟಕಗಳು ಉಳಿದಂತೆ ಸಂಪಾದನೆ, ಹಾಗೂ ೩೦೦ ಪುಟಕ್ಕು ಮೀರಿದ ಅಪ್ರಕಟಿತ ಬಿಡಿಬರಹಗಳು ಅವರ ಬಳಿ ಇವೆ. ಸಾಮಾಜಿಕ ಪ್ರಜ್ಞೆಯನ್ನು ದುಡಿಸಿಕೊಳ್ಳುವ ನಿರಂಜನರು ತಮ್ಮ ಕಾದಂಬರಿಗಳಾದ 'ಕಲ್ಯಾಣಸ್ವಾಮಿ', 'ಸ್ವಾಮಿ ಅಪರಂಪರ', 'ವಿಮೋಚನೆ', 'ರಂಗಮ್ಮನ ವಠಾರ' 'ಅಭಯ', 'ನಂದಗೋಕುಲ', 'ಬನಶಂಕರಿ' ಮುಂತಾದವುಗಳಲ್ಲಿ ಇತಿಹಾಸ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಬಹು ಎಚ್ಚರದಿಂದ ಸಾಂಸ್ಕೃತಿಕ ಆವರಣದಲ್ಲಿಯೆ ಹಿಡಿದಿಟ್ಟಿದ್ದಾರೆ. 'ಚಿರಸ್ಮರಣೆ' ಮತ್ತು 'ಮೃತ್ಯುಂಜಯ' ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷ ಅಥವಾ ಕ್ರಾಂತಿತತ್ವ ಬೆನ್ನೆಲುಬಾಗಿವೆ. ಪ್ರಗತಿಶೀಲ ಚಳುವಳಿಯ ಉತ್ತುಂಗ ಸ್ಥಿತಿಯಲ್ಲಿ ಬರೆಯುತ್ತಿದ್ದ ತ.ರಾ.ಸು, ಕಟ್ಟೀಮನಿ, ಅನಕೃರವರು ಕೇವಲ ಪ್ರತಿಭಟನೆಯ ಘೋಷಣೆಯನ್ನೇ ವಸ್ತುವಾಗಿ ಉಳ್ಳ ಕೃತಿಗಳನ್ನು ರಚಿಸುತ್ತಿದ್ದ ಹೊತ್ತಿಗೆ ನಿರಂಜನರು ನಿಜವಾದ ಕಾಳಜಿಯಿಂದ ಪ್ರತಿಭಟನೆಯನ್ನೇ ವಸ್ತವಾಗುಳ್ಳ ಕೃತಿರಚನೆಯಲ್ಲಿ ತೊಡಗಿದ್ದನ್ನು ನಾವು ಕಾಣಬಹುದು. ಆದ್ದರಿಂದ ಅ.ನಕೃ. ಪ್ರಗತಿಶೀಲ ಪಂಥದ ಒಂದು ತುದಿಯಾದರೆ, ಮತ್ತೊಂದು ತುದಿಯಲ್ಲಿ ನಿರಂಜನರಿದ್ದಾರೆ. ಇವರ ಶ್ರೀಮತಿ ಅನುಪಮಾ ನಿರಂಜನ ಅವರು ಕನ್ನಡದ ಪ್ರಸಿದ್ಧ ಲೇಖಕಿ ಆಗಿದ್ದರು. ಮಕ್ಕಳಾದ ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ ಸಹ ಕನ್ನಡದ ಬರಹಗಾರರಾಗಿ ಹೆಸರು ಮಾಡಿದ್ದಾರೆ.[೨]

ನಿರಂಜನರ ಕಾದಂಬರಿಗಳಂತೆ ಅವರ ಸಣ್ಣಕತೆಗಳು ವರ್ಗಸಂಘರ್ಷದ ನೆಲೆಗಳನ್ನು ಸ್ಪಷ್ಟವಾಗಿ ತೋರುವುದಿಲ್ಲವಾದರೂ ಅನೇಕ ಸಣ್ಣಕತೆಗಳಲ್ಲಿ ಅಂತಹ ಪ್ರಯತ್ನಗಳು ನಡೆದಿರುವುದನ್ನು ಗಮನಿಸಬಹುದಾಗಿದೆ. ಇವರ ಅನೇಕ ಸಣ್ಣಕತೆಗಳಲ್ಲಿ ಕಾರ್ಮಿಕರು, ವೇಶ್ಯೆಯರು, ಪತ್ರಿಕಾ ಕೆಲಸಗಾರರು, ಕೂಲಿಗಳು, ನಾಯಕರಾಗಿದ್ದಾರೆ. ಪ್ರತಿಷ್ಠಿತ ವರ್ಗದಿಂದ ಶೋಷಣೆಗೊಳಗಾದ ಅನೇಕ ಮುಖಗಳನ್ನು ಇಲ್ಲಿ ಕಾಣಬಹುದಾಗಿದೆ. ತಮಗಿರುವ ಬಾಳುವ

ಹಕ್ಕನ್ನು ಸ್ಥಾಪಿಸಲು ಇಂತಹ ಪಾತ್ರಗಳು ಪ್ರಯತ್ನಿಸುತ್ತವೆ.

ನಿರಂಜನರ ಕೃತಿಗಳಲ್ಲಿ ಮೂರು ರೀತಿಯ ವರ್ಗ ಹೋರಾಟದ ಪರಿಕಲ್ಪನೆಗಳನ್ನು ಕಾಣಬಹುದಾಗಿದೆ. ಸಣ್ಣರೈತರು ಮತ್ತು ಭೂಮಾಲೀಕರೊಡನೆ ನಡೆದ ಹೋರಾಟ ಒಂದು ರೀತಿಯಾದಾದರೆ, ಕಾರ್ಮಿಕರು ಹಾಗೂ ಮಿಲ್ ಮಾಲೀಕರೊಡನೆ ನಡೆದ ಹೋರಾಟ ಇನ್ನೊಂದು ರೀತಿಯದಾಗಿದೆ. ಗುಲಾಮರು ಮತ್ತು ಗುಲಾಮರೊಡೆಯರೊಡನೆ ನಡೆದ ಹೋರಾಟ ಮತ್ತೊಂದು ರೀತಿಯದಾಗಿದೆ. ಭಾರತದಲ್ಲಿ ರೈತಚಳುವಳಿ ಸ್ವಾತಂತ್ರ್ಯ ಸಂಗ್ರಾಮದ ಜೊತೆಯಲ್ಲಿಯೇ ಹುಟ್ಟಿಕೊಂಡಿತು. ತೆಲಂಗಾಣ ರೈತರ ಹೋರಾಟ, ಚಿತ್ತಗಾಂಗ್ ಹೋರಾಟ ಹಾಗೂ ಪುನ್ನ ಪುವಯಲಾರ್ ಹೋರಾಟಗಳೊಂದಿಗೆ ಹೋಲಿಸಬಹುದಾದ ಮತ್ತೊಂದು ಪ್ರಮುಖ ರೈತ ಹೋರಾಟವೆಂದರೆ ಕಯ್ಯಾರು ರೈತರ ಹೋರಾಟವಾಗಿದೆ. ೧೯೩೭ ರಿಂದ ೧೯೪೩ರವರೆಗೆ ನಡೆದ ಈ ರೈತ ಹೋರಾಟದಲ್ಲಿ ಸಂಘಟಿತ ರೈತರು ಜಮೀನ್ದಾರಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ದನಿಯೆತ್ತಿದರು. ಈ ಸಂಘರ್ಷ ತೀವ್ರ ಸ್ವರೂಪವನ್ನು ಪಡೆದು, ೧೯೪೩ ಮಾರ್ಚ್ ೨೯ ರಂದು ನಾಲ್ವರು ರೈತ ನಾಯಕರು ಗಲ್ಲು ಶಿಕ್ಷೆಗೊಳಗಾದರು. ಈ ಸಂದರ್ಭದಲ್ಲಿ ಕೈಯೂರದಲ್ಲಿ ನಡೆದ ರೈತ ಹೋರಾಟವನ್ನು ನೀಲೇಶ್ವರದ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದ ನಿರಂಜನು ಕಣ್ಣಾರೆ ಕಂಡರು. ಭೂಗತರಾಗಿದ್ದ ಕಮ್ಯೂನಿಸ್ಟ್ ರೈತ ಚಳವಳಿಗಾರರ ಸಂಪರ್ಕದಿಂದ ಗಾಂಧಿವಾದಿಯಾಗಿದ್ದ ನಿರಂಜನರು ಕ್ರಮೇಣ ಮಾರ್ಕ್ಸ್‌ವಾದಿಯಾಗಿ ಬೆಳೆದರು. ಮುಂದೆ ಇದೇ ಅನುಭವವನ್ನು ಅವರು ೧೯೫೫ರಲ್ಲಿ 'ಚಿರಸ್ಮರಣೆ' ಕಾದಂಬರಿ ಮೂಲಕ ವ್ಯಕ್ತಪಡಿಸಿದರು. 'ಚಿರಸ್ಮರಣೆ' ಕಾದಂಬರಿಯ ಮುನ್ನುಡಿಯಲ್ಲಿ ಈ ಬಗೆಗೆ ನಿರಂಜನರು ಹೀಗೆ ಹೇಳಿದ್ದಾರೆ.[೩]

ಅಡಿಟಿಪ್ಪಣಿ

೧. ರಾಜಪ್ಪ ದಳವಾಯಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೧೯೯೬- ೧೫೧-೧೫೨

೨. ರಾಜಪ್ಪ ದಳವಾಯಿ, ಕನ್ನಡ ಸಾಹಿತ್ಯ ಕೋಶ ೧೯೯೬, ಪುಟ ೧೩೨, ೧೩೩

೩. ಡಾ. ಬಸವರಾಜ ಸಬರದ, ಸಾಹಿತ್ಯ ಸಿಂಚನ-೨೦೧೩, ಪು. ೧೮೫-೧೮೭

ಅಧ್ಯಾಯ–೨

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸಂದರ್ಭ

ಬಸವರಾಜ ಕಟ್ಟೀನಿಯವರ 'ಮಾಡಿಮಾಡಿದವರು' ಹಾಗೂ ನಿರಂಜನರವರು ಬರೆದಿರುವ ಚಿರಸ್ಮರಣೆಯ ತೌಲನಿಕ ಅಧ್ಯಯನವು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಕಾರಣದಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭವನ್ನು ಕುರಿತು ಚರ್ಚಿಸುವುದು ಉತ್ತಮವಾದುದಾಗಿದೆ ಮೊದಲಿಗೆ

ಬ್ರಿಟಿಷರೊಂದಿಗಿನ ರಾಜರ ಹೋರಾಟಗಳು

ಭಾರತವನ್ನು ೨೦೦ ವರ್ಷಗಳ ಕಾಲ ಆಳಿದ ಬ್ರಿಟೀಷರು ಭಾರತೀಯರನ್ನು ಶೋಷಿಸಲ್ಪಡುತ್ತಿದ್ದರು. ಈ ಶೋಷಣೆಯನ್ನು ತಾಳಲಾರದೆ ಹಲವಾರು ರಾಜರು ಬ್ರಿಟೀಷರ ವಿರುದ್ಧ ಹೋರಾಟ ಮಾಡಿ ಸ್ವಾತಂತ್ರ್ಯವನ್ನು ಪಡೆಯುವಲ್ಲಿ ಹೋರಾಟವನ್ನು ಮಾಡತೊಡಗಿದರು. ಹಲವಾರು ಯುದ್ಧಗಳನ್ನು ಕೈಗೊಂಡರು ಅವುಗಳಲ್ಲಿ ಬಂಗಾಳದಲ್ಲಿ ನಡೆದ ಪ್ಲಾಸಿಕದನ, ಬಕ್ಸಾರ್ ಕದನಗಳು ಬ್ರಿಟೀಷರ ವಿರುದ್ಧ ಹೋರಾಟಕ್ಕೆ ನಾಂದಿಯಾದ ಎರಡು ಪ್ರಮುಖ ಘಟನೆಗಳಾಗಿವೆ. ಇವುಗಳಲ್ಲದೆ ಇನ್ನಿತರ ಸಂಸ್ಥಾ ಯುದ್ಧಗಳು ಕೂಡ ಜನರ ಮನಸ್ಸಿನಲ್ಲಿ ಸ್ವಾತಂತ್ರ್ಯ ಕಲ್ಪನೆ ಮೂಡಿಸಿ ಬ್ರಿಟೀಷರ ವಿರುದ್ಧ ಹೋರಾಟ ಮಾಡುವ ಮನೋಭಾವನೆಯನ್ನು ಬೆಳೆಸಿ ಬ್ರಿಟೀಷರ ಶೋಷಣೆಯನ್ನು ಹತ್ತಿಕ್ಕುವ ಮನೋಭಾವನೆ ಮೂಡತೊಡಗಿತು. ಅಲ್ಲದೆ ಹಲವಾರು ರಾಜರು ಬ್ರಿಟೀಷರ ವಿರುದ್ಧ ದಂಗೆ ಎದ್ದು ಜನರಲ್ಲಿ ರಾಷ್ಟ್ರೀಯತೆಯ ಮನೋಭಾವನೆಯನ್ನು ಮೂಡಿಸತೊಡಗಿದರು. ಅವರುಗಳಲ್ಲಿ ನಾನಾ ಸಾಹೇಬ್, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ತಾತ್ಯಾಟೋಪಿ ಮುಂತಾದ ಮಹಾನ್ ಪುರುಷರು ಬ್ರಿಟೀಷರ ಶೋಷಣೆಯ ವಿರುದ್ಧ ಹೋರಾಟ ಮಾಡುತ್ತಾ ತಮ್ಮ ಪ್ರಾಣವನ್ನೇ ನೀಡಿ ಜನರಲ್ಲಿ ರಾಷ್ಟ್ರೀಯತೆ ಮನೋಭಾವನೆ, ಸ್ವಾತಂತ್ರ್ಯದ ಕಿಚ್ಚನ್ನು ಹತ್ತಿಸಿದರು ಈ ವ್ಯಕ್ತಿಗಳಲ್ಲದೆ ಟಿಪ್ಪುಸುಲ್ತಾನ್ ಮತ್ತು ಹೈದರಾಲಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಬ್ರಿಟಿಷರಿಂದ ಆಳ್ವಿಕೆಯನ್ನು ಮುಕ್ತಗೊಳಿಸಬೇಕೆಂಬ ಕಾರಣದಿಂದ ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಪಾಲ್ಗೊಂಡು ಬ್ರಿಟೀಷರ ವಿರುದ್ಧ ಕೆಚ್ಚೆದೆಯಿಂದ ಹೋರಾಟ ಮಾಡಿ ಅಸುನೀಗಿದರು ಸಹ ಜನರ ಮನಸ್ಸಿನಲ್ಲಿ ಸ್ವಾತಂತ್ರ್ಯದ ಬೀಜವನ್ನು ಬಿತ್ತಿದ್ದರು. ಮರಾಠರು ಸಹ ಬ್ರಿಟೀಷರ ವಿರುದ್ಧ ಹೋರಾಟ ಮಾಡಿ ಸ್ವಾತಂತ್ರ್ಯತೆಯ ಹಣತೆಯನ್ನು ಬೆಳಗಿಸುವತ್ತ ಮರಾಠರು ಸಹ ಪ್ರಯತ್ನ ಪಟ್ಟರು.

೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

ಭಾರತದ ಇತಿಹಾಸದಲ್ಲಿ ೧೮೫೭ರ ಮಹಾದಂಗೆಯು ಬಹಳ ಪ್ರಮುಖ ಘಟನೆಯಾಗಿವೆ. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಸಾಕಷ್ಟು ರೀತಿಯ ತೊಂದರೆಗಳಿಗೆ ಜನರು ಸಿಲುಕಿದ್ದರು ಹಾಗೂ ಬೇಸತ್ತು ಬದಲಾವಣೆಗೆ ಕಾಯುತ್ತಿದ್ದರು

ಬದಲಾವಣೆ ಎಂದರೆ ಸ್ವಾತಂತ್ರ್ಯ ಜೀವನ ನಡೆಸುವ ಮನಸ್ಸು ಜನರಲ್ಲಿ ಮೂಡಲು ಲಾರ್ಡ್‌ಡಾಲ್‌ಹೌಸಿ ಜಾರಿಗೆ ತಂದಿದ್ದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಜನರು ತಮ್ಮ ಆಸ್ತಿಯು ಬ್ರಿಟೀಷ್ ಕಂಪನಿಗೆ ಸೇರುವುದನ್ನು ಸರಹಿಸದಾದರೂ ಅಲ್ಲದೆ ತಮ್ಮ ಉತ್ತರಾಧಿಕಾರತ್ವದ ವಿಚಾರದಲ್ಲಿ ಬ್ರಿಟೀಷರ ಮೂಗು ತೂರಿಸುವಿಕೆಯ ಕಾರಣದಿಂದ ಜನರಲ್ಲಿ ತಮ್ಮ ತನವನ್ನು ಕಳೆದುಕೊಳ್ಳುವತ್ತ ಸಾಗುತ್ತಿದ್ದೇವೆ ಎಂಬುದನ್ನು ಅರಿತು ಬ್ರಿಟೀಷರಿಂದ ಆಳ್ವಿಕೆಯನ್ನು ಕಿತ್ತುಕೊಳ್ಳಲು ಅಥವಾ ಕಸಿದುಕೊಳ್ಳಲು ಸ್ವಾತಂತ್ರ್ಯ ಬೀಜವು ಮೊಳಕೆಯಾಗತೊಡಗಿತು. ಅಲ್ಲದೆ ಜಮೀನ್ದಾರಿ ಶೋಷಣೆ ಹಾಗೂ ಬ್ರಿಟೀಷರು ಜಾರಿಗೆ ತಂದ ಖಾಯಂ ಗುತ್ತಿದಾರಿ ಪದ್ಧತಿ, ಮಹಲ್‌ವಾರಿ ಪದ್ಧತಿ ಮತ್ತು ರೈತವಾರಿ ಪದ್ಧತಿ ಈ ಪದ್ಧತಿಗಳು ಜನರ ಜೀವನವನ್ನು ಸುಧಾರಿಸುವುದಕ್ಕಿಂತ ಜನರ ಜೀವನವನ್ನು ಹದೆಗೆಡಿಸಿದವು. ಇದರಿಂದ ಭಾರತದಲ್ಲಿದ್ದ ಜಾತಿ ಪದ್ಧತಿ ಬೇರೂರಿದ್ದು ಜಾತಿ ಪದ್ಧತಿಯಲ್ಲಿ ಯಾರು ಯಾವುದೇ ರೀತಿಯಲ್ಲಿ ತಲೆ ಹಾಕುವುದನ್ನು ಜನರು ಸಹಿಸುತ್ತಿರಲಿಲ್ಲ. ಆದರೆ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ ಜಾತಿಪದ್ಧತಿಯಲ್ಲಿ ತಲೆಹಾಕಲು ಪ್ರಾರಂಭಿಸಿತು. ಕ್ರಿಶ್ಚಿಯನ್ ಮಿಷನರಿಗಳು ತಮ್ಮ ಪ್ರಚಾರದ ಮೂಲಕ ಹಿಂದೂ ಧರ್ಮೀಯರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುತ್ತಿದ್ದರು. ಇದರಿಂದ ಜನರು ಬೇಸತ್ತು ತಮ್ಮ ಧಾರ್ಮಿಕ ಭಾವನೆಗಳನ್ನು ಕೆರಳಿಸಿದ್ದರಿಂದ ಚಳುವಳಿಗಳನ್ನು ಮಾಡಿ ತಮ್ಮ ಸಿಟ್ಟನ್ನು ತೀರಿಸಿಕೊಳ್ಳಲು ಹಲವಾರು ಚಳುವಳಿಗಳಲ್ಲಿ ಭಾಗವಹಿಸಿದ್ದು ಅಲ್ಲದೆ ಬ್ರಿಟಿಷ್ ಕಂಪನಿ ಹಾಕುತ್ತಿದ್ದ ಭೂ ತೆರಿಗೆ ಇನಾಂ ಕಮೀಷನ್ ನೇಮಕ, ಗುಡಿಕೈಗಾರಿಕೆಗಳ ನಾಶದಿಂದ ಜನರು ಬೇಸತ್ತು ಹಾಗೂ ಸೇನೆಯಲ್ಲಿ ನಡೆಸುತ್ತಿದ್ದ ತಾರತಮ್ಯ ಹಾಗೂ ಧಾರ್ಮಿಕ ವಿರೋಧದ ಹಲವಾರು ಸಂಗತಿಗಳು ಜನರಲ್ಲಿ ರಾಷ್ಟ್ರೀಯತೆಯನ್ನು ಹೊಂದಬೇಕೆಂದು ಜನರಲ್ಲಿ ಪ್ರಬಲ ಮನೋಭಾವನೆ ಬೆಳೆಯಿತು. ಹೀಗೆ ೧೮೫೭ರ ದಂಗೆಯು ಜನರಲ್ಲಿ ಸ್ವಾತಂತ್ರ್ಯ ಚಿಲುಮೆ, ಸ್ವಾತಂತ್ರ್ಯದ ಮೊಳಕೆಯೊಡೆಯಿತು. ಇದರ ಪರಿಣಾಮವಾಗಿ ಭಾರತೀಯರಲ್ಲಿ ರಾಷ್ಟ್ರೀಯತೆಯ ಭಾವನೆಗಳು ಬೆಳೆಯಲು ಕಾರಣವಾಯಿತು.

ರಾಷ್ಟ್ರೀಯತೆ ಭಾವನೆ ಬೆಳೆಯಲು ಕಾರಣವಾದ ಅಂಶಗಳು

ಭಾರತೀಯ ರಾಷ್ಟ್ರೀಯತೆಯು ಒಂದೇ ದಿನದಲ್ಲಿ ಪ್ರಾರಂಭವಾಗಲಿಲ್ಲ. ಇದು ಬಹಳಷ್ಟು ದಿನಗಳಿಂದ ನಡೆದು ಬಂದ ವಿಷಯವಾಗಿದೆ. ರಾಷ್ಟ್ರೀಯತೆಯ ಭಾವನೆಯು ಭಾರತದಲ್ಲಿ ಬೆಳೆಯಲು ಹಲವಾರು ಕಾರಣಗಳಿವೆ. ಇವುಗಳನ್ನು ಈ ಕೆಳಗೆ ವಿಸ್ತಾರವಾಗಿ ಅಧ್ಯಯನ ಮಾಡೋಣ.

ಮೂಲಭೂತ ಏಕತೆ : ಭಾರತದಲ್ಲಿ ಈ ರಾಷ್ಟ್ರೀಯತೆಯು ಬ್ರಿಟೀಷರು ಬರುವ ಮುನ್ನವೇ ಅಭಿವೃದ್ಧಿ ಹೊಂದಿತು. ಬಹಳ ಹಿಂದಿನಿಂದಲೂ ಈ ರಾಷ್ಟ್ರೀಯತೆಯ ಮನೋಭಾವನೆಯು ಆಳವಾಗಿ ಬೇರೂರಿದ್ದಿತು. ಸಾಂಸ್ಕೃತಿಕ ಏಕತೆ, ಜನಾಂಗೀಯ ಏಕತೆ, ಭೌಗೋಳಿಕ ಏಕತೆ, ಮಾತೃಭೂಮಿಯ ವಿಷಯ, ಭರತವರ್ಷ, ಧಾರ್ಮಿಕ ವಿಧಿಗಳು, ರಾಜಕೀಯ ಅಂಶಗಳು

ಇತಿಹಾಸದ ಪರಿಣಾಮಗಳು ಇವೆಲ್ಲವುಗಳು ಒಂದು ಮೂಲಭೂತ ಏಕತೆಗೆ ಕಾರಣವಾದುವೆನ್ನಬಹುದು. ಈ ಸ್ವಾಭಾವಿಕ ಏಕತೆಯ ಮನೋಭಾವನೆಯು ಮುಸ್ಲಿಂರು ಭಾರತಕ್ಕೆ ಬಂದುದ್ದರಿಂದ ಒಡೆದುಹೋಯಿತು. ೧೭ನೇ ಶತಮಾನದ ಮರಾಠರ ಏಳ್ಗೆ, ಕಿತ್ತೂರು ಚನ್ನಮ್ಮ, ಸಂಗೊಳ್ಳಿರಾಯಣ್ಣ, ಹೈದರ್ ಮತ್ತು ಟಿಪ್ಪು, ಇವರೆಲ್ಲರೂ ಹಿಂದೂ ರಾಷ್ಟ್ರೀಯತೆಯ ಪ್ರತೀಕವಾಗಿದ್ದರು. ಹಾಗಾಗಿ ಈ ರಾಷ್ಟ್ರೀಯತೆಯ ಭಾರತದಲ್ಲಿ ಸನಾತನವಾಗಿತ್ತೆಂದು ಹೇಳಬಹುದು.

ಆಧುನಿಕ ರಾಜ್ಯ ಪದ್ಧತಿ : ಇಂಗ್ಲೀಷರು ಭಾರತಕ್ಕೆ ಬಂದದ್ದರಿಂದ ಭಾರತದಲ್ಲಿ ಆಧುನಿಕ ರಾಜ್ಯ ಪದ್ಧತಿಯ ಅಭಿವೃದ್ಧಿಯು ಕಾಣಿಸಿತೆನ್ನಬಹುದು. ಭಾರತವು ಭಾರತೀಯರ ಭಾರತ ಮತ್ತು ಬ್ರಿಟಿಷ್ ಇಂಡಿಯಾ ಎಂಬುದಾಗಿ ಒಡೆದುಹೋಗಿತ್ತು. ಭಾರತದಲ್ಲಿ ಸುಮಾರು ೫೬೨ ದೇಶೀಯ ರಾಜರು ಆಳುತ್ತಿದ್ದರು. ಇವರೆಲ್ಲರೂ ಬ್ರಿಟಿಷ್ ಕ್ರೌನ್‌ನ ಅಧಿಕಾರದ ನಿಯಂತ್ರಣವನ್ನು ಒಪ್ಪಿಕೊಂಡಿದ್ದರು. ಬ್ರಿಟೀಷರು ಮತ್ತು ಭಾರತೀಯ ರಾಜರುಗಳ ಸಂಬಂಧವೂ ಭಾರತ ರಾಜ್ಯಗಳಲ್ಲಿ ರಾಜಕೀಯ ಪದ್ಧತಿಯನ್ನು ಹುಟ್ಟಿಹಾಕಿದರೆಂದು ಹೇಳಬಹುದು. ನೇರ ಬ್ರಿಟೀಷ್ ಅಧಿಕಾರವನ್ನು ಇಲ್ಲಿ ಅಸ್ತಿತ್ವಕ್ಕೆ ತರಲಾಯಿತು. ಸೈನಿಕ ಮತ್ತು ರಾಜಕೀಯ ಕಾರಣದಿಂದಾಗಿ ಪ್ರಥಮವಾಗಿ ಕಂಪನಿಯು ನಿರಂಕುಶ ಪ್ರಭುತ್ವವನ್ನು ಅಳವಡಿಸಿಕೊಂಡಿದ್ದರು. ನಂತರ ಕಾನೂನಿನ ಆಡಳಿತ ಪ್ರಾತಿನಿಧಿಕ ಸಮಿತಿಗಳು ಮುಂತಾದವುಗಳ ಮೂಲಕ ಆಳ್ವಿಕೆ ನಡೆಸಿದರು. ಈ ಆಧುನಿಕ ರಾಜ್ಯ ಪದ್ಧತಿಯು ಮುಂದೆ ಬ್ರಿಟೀಷರು ಸಾಮ್ರಾಜ್ಯಶಾಹಿತ್ವವನ್ನು ಕೊನೆಗೊಳಿಸಿತು.

ಕೇಂದ್ರೀಕೃತ ಆಡಳಿತ : ಬ್ರಿಟೀಷರ ಸಬಲ ಕೇಂದ್ರೀಕೃತ ಆಡಳಿತವು ಭಾರತೀಯರನ್ನು ಒಂದುಗೂಡಿಸಿತು. ಭಾರತೀಯ ನಾಗರೀಕ ಸೇವೆ, ಕಾನೂನು ಕ್ರೋಢೀಕರಣ ಇವುಗಳು ಒಂದು ದೇಶದ ನಿರ್ಮಾಣಕ್ಕೆ ಕಾರಣವಾಯಿತೆನ್ನಬಹುದು. ವೇಗಸಹಿತ ಸಂಪರ್ಕ ಮಾಧ್ಯಮಗಳಾದ ರೈಲ್ವೆಮಾರ್ಗ, ಅಂಚೆ ಮತ್ತು ತಂತಿ ಸಂಪರ್ಕದಿಂದಾಗಿ ಜನರು ಸುಲಭವಾಗಿ, ಕ್ಷೇಮವಾಗಿ, ದೇಶದ ಒಂದು ಬದಿಯಿಂದ ಇನ್ನೊಂದು ಕಡೆಗೆ ತಲುಪುವುದು ಮತ್ತು ಸಂಪರ್ಕವೇರ್ಪಡುವುದು ಜನರಲ್ಲಿ ಒಂದು ಏಕತೆಯ ಭಾವನೆಯನ್ನು ಸೃಷ್ಟಿಸಿತು. ಇದು ವಿವಿಧ ಜನಾಂಗವನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಒಂದುಗೂಡಿಸಿತು. ವಿವಿಧ ಪ್ರಾಂತ್ಯದ ಜನರು ಪರಸ್ಪರ ಸೇರಿಕೊಂಡು ಅವರಲ್ಲಿ ತಾವೆಲ್ಲ ಒಂದೇ ಎಂಬ ಭಾವನೆ ಮತ್ತ ದೇಶದ ಬಗ್ಗೆ ಪ್ರೀತಿ ಉಂಟಾಯಿತು.

ಪಶ್ಚಿಮದೊಂದಿಗೆ ನಿಕಟತೆ ಮತ್ತು ಇಂಗ್ಲೀಷ್ ಶಿಕ್ಷಣದ ಪ್ರಸರಣ : ಬ್ರಿಟೀಷರ ಆಳ್ವಿಕೆಯು ಭಾರತೀಯರನ್ನು ಪಶ್ಚಿಮ ರಾಷ್ಟ್ರಗಳೊಡನೆ ನಿಕಟತೆಯನ್ನು ಬೆಳೆಸಲು ಕಾರಣವಾಯಿತು. ಯುರೋಪಿನ ೧೯ನೇ ಶತಮಾನವು ರಾಷ್ಟ್ರೀಯತೆ ಶತಮಾನವಾಗಿದ್ದು ಶಿಕ್ಷಿತ ಭಾರತೀಯರು ಈ ಭಾವನೆಗಳನ್ನು ತಮ್ಮದಾಗಿಸಿಕೊಂಡರು. ಇಟಲಿ, ಜರ್ಮನಿಗಳು, ೧೯ನೇ ಶತಮಾನದ ದ್ವಿತೀಯಾರ್ಧದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆದರು. ಇದು ಭಾರತೀಯರನ್ನು ತಮ್ಮ

ದೇಶವನ್ನು ಬಿಡುಗಡಗೊಳಿಸಿ ಸ್ವತಂತ್ರ ತರಬೇಕೆಂಬ ಮನಸ್ಸನ್ನು ಇವರಲ್ಲಿ ಉಂಟುಮಾಡಿತು. ಈ ಪಾಶ್ಚಿಮಾತ್ಯ ಸಾಹಿತ್ಯವು ರಾಷ್ಟ್ರೀಯ ಧ್ವನಿಯನ್ನು ಕೊಟ್ಟಿತು ಮತ್ತು ಇದರ ಅಧ್ಯಯನವು ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಿತು.

ಇಂಗ್ಲೀಷ್ ಶಿಕ್ಷಣ ಮತ್ತು ಭಾಷೆಯು ಭಾರತೀಯ ರಾಷ್ಟ್ರೀಯತೆಯನ್ನು ಬೆಳೆಸಿತು. ಇದು ೧೯ನೇ ಶತಮಾನದಲ್ಲಿ ಭಾರತದಲ್ಲಿ ಬಹುದೊಡ್ಡ ಬದಲಾವಣೆಗಳನ್ನು ತಂದಿತು. ಪಾಶ್ಚಿಮಾತ್ಯ ಚಿಂತನೆಗಳು ಭಾರತದಲ್ಲಿ ಬ್ರಿಟೀಷರ ಆಳ್ವಿಕೆಯಿಂದ ಏನೇನು ಪ್ರಗತಿ ಸಾಧಿಸಿತು ಎಂಬುದನ್ನು ಜನರಿಗೆ ತಿಳಿಸಿದವು. ಇದು ಹೊಸದಾಗಿ ಶಿಕ್ಷಣವನ್ನು ಪಡೆದ ವಿದ್ಯರ್ಥಿಗಳಲ್ಲಿ ಯುರೋಪ್ ಸ್ವಾತಂತ್ರ್ಯದ ಚಿಂತನೆಗಳನ್ನುಬೋದಿಸಿತು. ಬೆಂಥಮ್, ಲಾಕ್, ಹಾಬ್ಸ್‌ಮಿ, ಸ್ಪೆನ್ಸರ್, ಬರ್ಕ್‌ರೂಸ್ಸೊ, ವಾಲ್ಟೈರ್ ಇವರ ಚಿಂತನೆಗಳಿಂದ ಸ್ವಾತಂತ್ರ್ಯ, ಏಕತೆಕ, ಸಹೋದರತ್ವ, ರಾಷ್ಟ್ರೀಯತೆ ಮತ್ತು ಸ್ವರಾಜ್ಯ ಮುಂತಾದವುಗಳನ್ನು ತಿಳಿಸಿದ್ದುದಲ್ಲದೇ ಪಾಶ್ಚಿಮಾತ್ಯ ತತ್ವಶಸ್ತ್ರ, ಇತಿಹಾಸಗಲೂ ಸಹ ಜನರಲ್ಲಿ ಭಾವನೆಗಳನ್ನು ಕೆರಳಿಸಿದವು. ತಮ್ಮ ದೇಶವು ದಾಸ್ಯದಿಂದ ಕೂಡಿದೆ ಎಂಬುದನ್ನು ಅರಿತರು. ಇದರಿಂದ ಸ್ಪೂರ್ತಿಪಡೆದ ಭಾರತೀಯರು ರಾಷ್ಟ್ರೀಯತೆಯನ್ನು ಬೆಳೆಸಿಕೊಂಡರು. ವಿವಿಧ ಪ್ರದೇಶದ ಜನರು ಒಂದುಗೂಡಿದರು. ಇದು ಭಾರತೀಯರೆಲ್ಲರನ್ನು ಸೇರಿಸುವ ಕೊಂಡಿಯಾಯಿತೆನ್ನಬಹುದು. ಎಲ್ಲರೂ ಒಂದೇ ದೇಶ ಒಂದೇ ಎನ್ನುವ ಭಾವನೆಯನ್ನು ಇಂಗ್ಲೀಷ್ ಭಾಷೆ ಮತ್ತು ತಂತ್ರಜ್ಞಾನಗಳು ತಿಳಿಸಿದವು.

ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ : ಭಾರತೀಯರ ರಾಷ್ಟ್ರೀಯತೆಯನ್ನು ಬೆಳೆಸಲು ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವವು ಕಾರಣವಾಯಿತು. ಪಶ್ಚಿಮ ಸಂಸ್ಕೃತಿಯು ವಿಚಾರಶೀಲತೆ, ಸ್ವಾತಂತ್ರ್ಯ ಚಿಂತನೆ, ವ್ಯಕ್ತಿತ್ವ ಮುಂತಾದವನ್ನು ಬೆಳೆಸಿತೆನ್ನಬಹುದು ಇದು ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಹಕ್ಕುಗಳನ್ನು ತಿಳಿಸಿತು. ಇದು ಜನರಲ್ಲಿ ರಾಷ್ಟ್ರೀಯತೆ ಬೆಳೆಯಲು ಕಾರಣವಾಯಿತು. ಸಾಮಾಜಿಕ ಧಾರ್ಮಿಕ ಚಳುವಳಿಗಳು ಭಾರತದಲ್ಲಿ ಪ್ರಾರಂಭವಾಗಲು ಕರಣವಾಯಿತು. ರಾಷ್ಟ್ರೀಯ ಚಳುವಳಿಗಳು, ಕ್ರಾಂತಿಗಳು, ಪ್ರಿಂಟಿಂಗ್‌ಪ್ರೆಸ್ ಮುಂತಾದವುಗಳು ಇವರನ್ನು ಎಚ್ಚರಿಸಿದವು. ಇದು ಭಾರತದಲ್ಲಿ ಆಧುನಿಕ ಯುಗವನ್ನು ಹುಟ್ಟಿಹಾಕಿತು.

ವಿದ್ವಾಂಸರು ಮತ್ತು ಸುಧಾರಕರ ಕೊಡುಗೆ : ಹಲವು ವಿದ್ವಾಂಸರು ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಸಂಶೋಧನೆ ನಡೆಸಿದರು. ಇದರಿಂದಾಗಿ ಭಾರತದ ಹಿಂದಿನ ವೈಭವದ ಬಗ್ಗೆ ತಿಳಿಯಲು ಕಾರಣವಾಯಿತು. ವಿಲಿಯಂಜೋನ್ಸ್‌ಕ, ಪ್ರಿನ್ಸೆಪ್, ಮ್ಯಾಕ್ ಮುಲ್ಲರ್, ಪರ್ಗುಸನ್ ಮುಂತಾದವರು. ಇದಕ್ಕೆ ಕಾರಣರಾದರು. ಪ್ರಾಕ್ತನ ಸಂಶೋಧನೆಗಳೂ ಸಹ ಪ್ರಾಚೀನ ಭಾರತದ ಹೆಗ್ಗಳಿಕೆಯನ್ನು ತಿಳಿಸಿದವು. ಇದು ಗ್ರೀಕ್ ಮತ್ತು ರೋಮನ್ನರ ವಿದ್ವತ್ತಿಗೆ ಸಮವೆಂದು ತಿಳಿಸಿದರು. ಇದರಿಂದ ಭಾರತೀಯರು ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸಿಕೊಂಡರು.

ಧಾರ್ಮಿಕ ಮತ್ತು ಸಾಮಾಜಿಕ ನಾಯಕರಾದ ರಾಜಾರಾಂ ಮೋಹನ್‌ರಾಯ್, ದೇವೇಂದ್ರನಾಥ ಟಾಗೋರ್, ಈಶ್ವರಚಂದ್ರ ವಿದ್ಯಾಸಾಗರ್,ಕ ದಯಾನಂದ ಸರಸ್ವತಿ,

ರಾಮಕೃಷ್ಣ, ವಿವೇಕಾನಂದ, ಮುಂತಾದವರು ಪ್ರಾಚೀನ ಭಾರತವನ್ನು ನಿದರ್ಶನವಾಗಿ ಪ್ರಪಂಚಕ್ಕೆ ತೋರಿದರು. ಇವರೆಲ್ಲರಿಂದ ಪ್ರೇರೇಪಿತರಾದ ಜನರು ರಾಷ್ಟ್ರೀಯತೆ ಬೆಳೆಸಿಕೊಂಡರು.

ಭಾರತೀಯ ಪತ್ರಿಕೆಗಳ ಕೊಡುಗೆ : ಭಾರತೀಯ ಪತ್ರಿಕೆ, ಇಂಗ್ಲೀಷ್ ಮತ್ತು ಸ್ಥಳೀಯ ಭಾಷೆಗಳ ಪತ್ರಿಕೆಗಳು ಜನರಲ್ಲಿ ರಾಷ್ಟ್ರೀಯ ಭಾವನೆಗಳನ್ನು ತಳೆಸಿದವು. ವೃತ್ತಪತ್ರಿಕೆಗಳಾದ ದಿ ಇಂಡಿಯನ್ ಮಿರ್ರರ್, ಬಾಂಬೆ ಸಮಾಚಾರ್, ಅಮೃತ್‌ಬಜಾರ್ ಪತ್ರಿಕಾ, ದಿ ಹಿಂದೂ, ಪೇಟ್ರಿಯಟ್, ದಿ ಬಂಗಾಲೀ, ದಿ ಕೇಸರಿ ಮುಂತಾದವು ಪ್ರಮುಖವಾದ ಪತ್ರಿಕೆಗಳು ದೇಶೀಯ ಸಾಹಿತ್ಯದ ಬೆಳವಣಿಗೆಯು ಪಾಶ್ಚಿಮಾತ್ಯ ಸಾಹಿತ್ಯದ ಪ್ರಾಭವವೆಂದು ಹೇಳಬಹುದು. ಈ ಸಂಬಂಧವು ಭಾರತೀಯ ಭಾಷೆಗಳ ಬೆಳವಣಿಗೆಗೆ ಕಾರಣವಾದವು. ಬಂಕಿಮಚಂದ್ರ ಚಟರ್ಜಿಯವರು, ಆನಂದಮಠ, ನೀಲದರ್ಪಣ, ರವೀಂದ್ರನಾಥ ಟಾಗೋರ್ ಮುಂತಾದವರು ಕೃತಿಗಳು ಭಾರತೀಯರಲ್ಲಿ ಸ್ಫೂರ್ತಿ ತುಂಬಿದವು.

ಹೊಸ ಆರ್ಥಿಕ ವರ್ಗದ ಏಳ್ಗೆ : ವ್ಯಾಪಾರಿಗಳು, ಏಜೆಂಟರು, ಕಾಂಟ್ರಾಕ್ಟರುಗಳು, ಬ್ಯಾಂಕರುಗಳು, ಕೈಗಾರಿಕೋದ್ಯಮಿಗಳು, ಪ್ಲಾಂಟೇಷನ್ ಮಾಸ್ಟರ್‌ಗಳು ಭೂಮಾಲೀಕರು ಹೊಸ ಆರ್ಥಿಕ ವರ್ಗವಾಗಿ ಏಳ್ಗೆ ಹೊಂದಿದರು. ಇವರೂ ಸಹ ರಾಷ್ಟ್ರೀಯತೆಗೆ ಕಾರಣಕರ್ತರಾದರು.

ಆರ್ಥಿಕ ದೌರ್ಜನ್ಯ : ಬ್ರಿಟೀಷರು ತಮ್ಮ ಕುತಂತ್ರದಿಂದ ಭಾರತದ ಯಜಮಾನರಾಗಿದ್ದರು. ತಮ್ಮ ಕೈಗಾರಿಕೆ ಮತ್ತು ಸಾಮ್ರಾಜ್ಯ ಶಾಹಿತ್ಯಕ್ಕೆ ಭಾರತೀಯರ ಮೇಲೇ ದೌರ್ಜನ್ಯ ನಡೆಸುತ್ತಿದ್ದರು. ಭಾರತದ ಕಚ್ಚಾ ವಸ್ತುಗಳು ಇಂಗ್ಲೇಂಡಿಗೆ ಹೋಗಿ ಸಿದ್ಧವಸ್ತುಗಳು ಇಲ್ಲಿ ಬಂದು ಬ್ರಿಟೀಷರಿಗೆ ಹೆಚ್ಚಿನ ಲಾಭ ಕೊಡುತ್ತಿದ್ದವು. ನಮ್ಮ ಕಸುಬುದಾರರು, ಕಾರ್ಮಿಕರು ಕೆಲಸ ಕಳೆದುಕೊಂಡರು ಕೃಷಿಕರು ವೈಜ್ಞಾನಿಕ ಬೇಸಾಯದ ಮುಂದೆ ಇಲ್ಲವಾದರು. ಬಂಡವಾಳದಾರರು, ಹಣಗಾರರು, ಹಡಗುಕಟ್ಟುವವರು ಭಾರತೀಯರನ್ನು ಚೆನ್ನಾಗಿ ದುಡಿಸಿಕೊಂಡರು. ಇವೆಲ್ಲವುಗಳಿಂದ ಭಾರತೀಯರು ನೊಂದು ರಾಷ್ಟ್ರೀಯತೆ ಮನೋಭಾವನೆ ಬೆಳೆಸಿಕೊಂಡರು.

ಜನಾಂಗೀಯ ದೌರ್ಜನ್ಯ : ಭಾರತೀಯರನ್ನು ಐರೋಪ್ಯರು ಕೀಳಾಗಿ ನೋಡುತ್ತಿದ್ದು, ಕರಿಯರೆಂದೂ, ನಿಗ್ಗರರು ಎಂದೂ, ಹೋಟೆಲುಗಳು, ರೈಲ್ವೆ, ಬಂಗಲೆಗಳು, ಸಾರ್ವಜನಿಕರ ಕಛೇರಿಗಳಲ್ಲಿ ಗೌರವ ಕೊಡುತ್ತಿರಲಿಲ್ಲ. ಶಿಕ್ಷಿತ ಭಾರತೀಯರಿಗೂ ಸಹ ಗೌರವವಿರಲಿಲ್ಲ ಇದರಿಂದ ಎಚ್ಚೆತ್ತ ಭಾರತೀಯರು ರಾಷ್ಟ್ರೀಯತೆ ಭಾವನೆ ಬೆಳೆಸಿಕೊಂಡು ತಿರುಗಿಬಿದ್ದರು.

ಲಾರ್ಡ್ ಲಿಟ್ಟನ್ನನ ದೌರ್ಜನ್ಯ : ವೈಸ್‌ರಾಯ್ ಲಿಟ್ಟನ್ ಇಂಡಿಯನ್ ಆರ್ಮ್ಸ್ ಆಕ್ಟ್, ಐ.ಸಿ.ಎಸ್. ಪರೀಕ್ಷೆಯ ವಯಸ್ಸು, ಹತ್ತಿಯ ಆಮದು ನಿಷೇದ ಮುಂತಾದವುಗಳು ಭಾರತೀಯರಿಗೆ ಮಾರಕವಾಗಿದ್ದು, ಇದನ್ನು ವಿರೋಧಿಸಿದರು. ಇದಲ್ಲದೇ ಪ್ರಾದೇಶಿಕ ಭಾಷೆಗಳ ಪತ್ರಿಕೆಗಳ ಕಾಯ್ದೆಯನ್ನು ಜಾರಿಗೆ ತಂದು ಪತ್ರಿಕೆಯು ಪ್ರಕಟವಾಗುವ ಮುನ್ನ ಸರ್ಕಾರದ ಮುಂದೆ ಸೆನ್ಸಾರ್ ಆಗುವುದನ್ನು ಜಾರಿಗೆ ತಂದದ್ದು ಜನರು ರಾಷ್ಟ್ರೀಯತೆಗೆ ಹೆಚ್ಚು ಒತ್ತನ್ನು ಕೊಡಲು ಕಾರಣವಾಯಿತು.

ಇಲ್ಬರ್ಟ್ ಬಿಲ್ ಹಗರಣ : ವರ್ನಾಕ್ಯಲರ್ ಪ್ರೆಸ್ ಆಕ್ಟ್‌ನ್ನು ರದ್ದುಗೊಳಿಸಿದ್ದು ಒಳ್ಳೆಯದಾದರೂ ಇಲ್ಬರ್ಟ್ ಬಿಲ್ ಹಗರಣವು ಭಾರತೀಯರನ್ನು ನೋವಿಗೀಡುಮಾಡಿತು. ಈ ಬಿಲ್ ಪ್ರಕಾರ ಭಾರತೀಯ ನ್ಯಾಯಾಧೀಶರನ್ನು ಸಹ ವಿಚಾರಣೆ ಮಾಡುವುದಕ್ಕೆ ಈ ಬಿಲ್‌ನಲ್ಲಿ ಅವಕಾಶವಿತ್ತು. ಇದರ ಪ್ರಕಾರ ಕಲ್ಕತ್ತಾದ ಮುಖ್ಯ ನ್ಯಾಯಾಧೀಶರಾಗಿ ಸರ್ ರಮೇಶ್‌ಚಂದ್ರ ಮಿತ್ತರ್‌ನ್ನು ರಿಪ್ಪನ್ ನೇಮಕ ಮಾಡಿದರು. ಅವರು ಯೂರೋಪಿಯನ್ನರನ್ನೂ ಸಹ ವಿಚಾರಣೆಗೆ ಗುರಿಮಾಡಿದರು. ಇದನ್ನು ಬ್ರಿಟೀಷರು ವಿರೋಧಿಸಿದ್ದು ಭಾರತೀಯರು ಸಹಿಸದೇ ರಾಷ್ಟ್ರೀಯತೆಯ ವಾದವನ್ನು ಮುಂದೂಡಿ ಚಳುವಳಿಗೆ ಧುಮುಕಿದರು.[೧]

ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆ

ಹತ್ತೊಂಬತನೆಯ ಶತಮಾನದ ಉತ್ತಾರಾರ್ಧದಲ್ಲಿ ರಾಷ್ಟ್ರೀಯವಾದ ರಾಜಕೀಯ ಪ್ರಜ್ಞೆ ಅರಳಿತು. ಒಂದು ವ್ಯವಸ್ಥಿತವಾದ ರಾಷ್ಟ್ರೀಯ ಚಳುವಳಿಯ ಸ್ಥಾಪನೆ ಹಾಗೂ ಬೆಳವಣಿಗೆ ಕಂಡುಬಂದದ್ದು ಆಗಲೇ. ಆಧುನಿಕ ಭಾರತದ ವಿದ್ಯಾವಂತ ವರ್ಗದ ಜನರು ದೇಶದಲ್ಲಿ ರಾಜಕೀಯ ಶಿಕ್ಷಣವನ್ನು ಹರಡಲು ಹಾಗೂ ರಾಜಕೀಯ ಚಟುವಟಿಕೆಯನ್ನು ಪ್ರಾರಂಭಿಸಲು ರಾಜಕೀಯ ಸಂಸ್ಥೆಗಳನ್ನು ಸ್ಥಾಪಿಸಿದರು. ಈ ಕೆಲಸಕ್ಕೆ ಹೊಸ ರಾಜಕೀಯ ವಿಚಾರಗಳು, ವಾಸ್ತವತೆಯ ಬುದ್ಧಿಪೂರ್ವಕ ಅರಿವು, ನೂತನ ಸಾಮಾಜಿಕ ಮತ್ತು ರಾಜಕೀಯ ಧ್ಯೇಯಗಳು, ಹೋರಾಟ ಮತ್ತು ಪ್ರತಿಭಟನೆಗೆ ನೂತನ ಶಕ್ತಿ ಸಾಮರ್ಥ್ಯಗಳು, ರಾಜಕೀಯ ವ್ಯವಸ್ಥೆಯ ನೂತನ ತಂತ್ರ, ಇತ್ಯಾದಿ ಅಂಶಗಳು ಆಧಾರವಾಗಲಿದ್ದವು. ಆದರ್ಶ, ನೀತಿ, ಸಂಘಟನೆ ಮತ್ತು ನಾಯಕತ್ವಗಳಲ್ಲಿ ಒಂದು ತಿರುವನ್ನೇ ಅದು ತೋರಿಸಲಿತ್ತು. ಕೆಲಸವೇನೋ ಬಹಳ ಕಷ್ಟದ್ದು. ಏಕೆಂದರೆ ಭಾರತೀಯರಿಗೆ ಆಧುನಿಕ ರಾಜಕೀಯ ಚಟುವಟಿಕೆಗಳು ಸಂಪೂರ್ಣವಾಗಿ ಅವಲಂಭಿತವಾಗಿದ್ದವು. ಜನರು ತಮ್ಮ ಆಳುಗರಿಗೆದುರಾಗಿ ರಾಜಕೀಯವಾಗಿ ಸಂಘಟಿತರಾಗಬಹುದು ಎಂಬ ಕಲ್ಪನೆಯೇ ನೂತನವಾಗಿತ್ತು. ಆದ್ದರಿಂದ ಈ ಮೊದಲಿನ ಸಂಸ್ಥೆಗಳ ಮತ್ತು ರಾಜಕೀಯ ಕಾರ್ಯಕರ್ತರ ಕಾರ್ಯಚಟುವಟಿಕೆಗಳು ಬಹುಮಂದಗತಿಯಿಂದ ಸಾಗಿದುವು. ಸಾಮಾನ್ಯ ಜನರನ್ನು ಆಧುನಿಕ ರಾಜಕೀಯದ ಪ್ರಭಾವದೊಳಕ್ಕೆ ತರಲು ಅರ್ಧಶತಮಾನಕ್ಕಿಂತಲೂ ಹೆಚ್ಚು ಕಾಲವೇ ಬೇಕಾಯಿತು.

ರಾಜಕೀಯ ಸುಧಾರಣೆಗಳಿಗಾಗಿ ಚಳುವಳಿಯನ್ನು ಪ್ರಾರಂಭಿಸಿದ ಮೊದಲ ಭಾರತೀಯ ನಾಯಕರಲ್ಲಿ ರಾಜರಾಮಮೋಹನ ರಾಯ್ ಒಬ್ಬರು. ಪತ್ರಿಕಾ ಸ್ವಾತಂತ್ರ್ಯ, ನ್ಯಾಯದರ್ಶಿ ಮಂಡಲಿಯಿಂದ ವಿಚಾರಣೆ, ಕಾರ್ಯಾಂಗ ಮತ್ತು ನ್ಯಾಯಾಂಗ ಮತ್ತು ನ್ಯಾಯಾಂಗಗಳ ಬೇರ್ಪಡಿಕೆ, ಉನ್ನತ ಅಧಿಕಾರಿಗಳಿಗೆ ಭಾರತೀಯರ ನೇಮಕ, ಜಮೀನ್ದಾರರ ದಬ್ಬಾಳಿಕೆಯಿಂದ ರೈತನ ರಕ್ಷಣೆ–ಭಾರತೀಯ ವಾಣಿಜ್ಯ ಮತ್ತು ಕೈಗಾರಿಕೆಗಳ ಅಭಿವೃದ್ಧಿ – ಇವುಗಳಿಗಾಗಿ ಅವರು ಹೋರಾಡಿದರು. ಬ್ರಿಟಿಷ್ ಆಳ್ವಿಕೆಯ ಸಮಯ ಮುಗಿದು ಸ್ವತಂತ್ರ ಭಾರತವು ಉದಯವಾಗುತ್ತದೆ ಎಂಬ ಆಸೆಯ ಆಧಾರದ ಮೇಲೆಯೇ ತಮ್ಮ ಸಮಸ್ತ ಚಟುವಟಿಕೆಗಳನ್ನು ನೆಲೆಗೊಳಿಸಿದರು. ಅವರು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ತೀವ್ರವಾದ

ಆಸಕ್ತಿವಹಿಸಿದರು. ಎಲ್ಲೆಲ್ಲೂ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯತೆಗಳನ್ನೇ ಬೆಂಬಲಿಸಿದರು.

ರಾಮ ಮೋಹನ್‌ರ ಪರಂಪರೆಯನ್ನು ಅವರ ಮರಣಾನಂತರ ದರೋಜಿಯನ್ನರು ಎಂಬ ತೀವ್ರಗಾಮಿಗಳಾದ ಯುವಕರು ಮುಂದುವರಿಸಿದರು. ಅವರಿಗೆ ಆ ಹೆಸರು ಅವರು ಪ್ರಸಿದ್ಧ ಆಂಗ್ಲೋ–ಇಂಡಿಯನ್ ಉಪಧ್ಯಾಯ ಹೆನ್ರಿವಿನಿಯನ್ ಡೆರಜಿಯೋನಿಂದ, ಅವನು ತನ್ನ ಶಿಷ್ಯರಲ್ಲಿ, ಫ್ರಾನ್ಸಿನ ಮಹಾಕ್ರಾಮತಿ, ಟಾಮ್ ಪೇಯ್ನ್ ಮತ್ತು ಚೆರ್ರಿ ಬೆಂಥಾಮ್‌ರ ಭಾವನೆಗಳಿಂದ ಆಧಾರಗೊಂಡ ಸ್ವಾತಂತ್ರ್ಯ ಮತ್ತು ರಾಷ್ಟ್ರಭಕ್ತಿಗಳ ಉಜ್ವಲವಾದ ಪ್ರೇಮವನ್ನು ಪ್ರಚೋದಿಸಿದನು. ಆಧುನಿಕ ಭಾವನೆಗಳನ್ನೂ ಭಾರತಕ್ಕೆ ಅವುಗಳ ಅನ್ವಯವನ್ನು ಚರ್ಚಿಸಲು ಅಸಂಖ್ಯಾತವಾದ ಸಾರ್ವಜನಿಕ ಸಂಸ್ಥೆಗಳಿದ್ದು, ಈ ವಿಚಾರಗಳನ್ನು ಪ್ರಸಾರ ಮಾಡಲು ಅನೇಕ ವರ್ತಮಾನ ಪತ್ರಿಕೆಗಳು ಮತ್ತು ನಿಯತಕಾಲಿಕಗಳನ್ನು ಡೆರೋಜಿಯನ್ನರು ಪ್ರಾರಂಭಿಸಿದರು. ಹೀಗೆ ಆಧುನಿಕ ರಾಜಕೀಯ ಪ್ರಜ್ಞೆಯ ಬೀಜವನ್ನು ರಾಜರಾಮಮೋಹನ್ ರಾಯ್ ಮತ್ತು ಡೆರೋಜಿಯನ್ನರು ೧೮೨೦ ಮತ್ತು ೧೮೩೦ರ ಸುಮಾರಿನಲ್ಲಿ ಬಿತ್ತಿದರು.

೧೮೫೭ರಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಗೆ ಯಾವುದೇ ರೂಪುರೇಷೆಯಿಲ್ಲದೆ ಯಶಸ್ವಿಯಾಗಲಿಲ್ಲ ಜನರಲ್ಲಿ ಸ್ವಾತಂತ್ರ್ಯ ಪಡೆಯುವ ಹಂಬಲವಿದ್ದರೂ ಜನರಿಗೆ ಉತ್ಸಾಹ ತುಂಬುವ ಸಂಘಟನೆಗಳನ್ನೊಳಗೊಂಡ ಯಾವುದೇ ಸಂಸ್ಥೆಯಿರಲಿಲ್ಲ ಹಾಗೂ ಯಾವುದೇ ರೀತಿಯ ಸಂಘಟನೆಗಳಿರಲಿಲ್ಲ. ಮೇಲ್ಮವರ್ಗದ ಜಮೀನ್ದಾರರು, ರಾಜರು ಮತ್ತು ಭೂಮಾಲೀಕರ ನೇತೃತ್ವದಲ್ಲಿ ಬ್ರಿಟೀಷ್ ಆಳ್ವಿಕೆಯ ವಿರುದ್ಧವಾಗಿ ನಡೆಯುತ್ತಿದ್ದ ಸಾಂಪ್ರದಾಯಿಕ ರೀತಿಯ ರಾಜಕೀಯ ಪ್ರತಿಭಟನೆ ಯಶಸ್ವಿಯಾಗಲಾರದು. ವಸಾಹತುಶಾಹಿಗೆ ದೂರಾದ ಆ ಪತ್ರಿಭಟನೆ ನೂತನವಾದ ಕಾಲುವೆಗಳಲ್ಲಿ ಹರಿಯುವಂತಾಗಬೇಕೆಂಬ ಆಶಯ ವಿದ್ಯಾವಂತವರ್ಗವು ಬ್ರಿಟೀಷ್ ನೀತಿಗಳನ್ನು ಟೀಕಿಸತೊಡಗಿತು. ಬ್ರಿಟೀಷ್ ಆಳ್ವಿಕೆಯ ಸುಲಿಗೆಯ ಸ್ವರೂಪವನ್ನು ಗ್ರಹಿಸತೊಡಗಿತು. ವಸಾಹತುಶಾಹಿಗೆ ವಿರುದ್ಧವಾಗಿ ಆಧುನಿಕ ಸುಶಿಕ್ಷಿತ ವರ್ಗವು ತೋರಿಸಿದ ಪ್ರತಿಕ್ರಿಯೆ. ಕೃಷಿ ವರ್ಗವು ಸಹಜ ಪ್ರವೃತ್ತಿಯಿಂದ ತೋರಿಸಿದ ಪ್ರತಿಕ್ರಿಯೆಯಂತಲ್ಲದೆ ಶಂಕೆಯಿಂದ ಕೂಡಿದುದಾಗಿತ್ತು. ಅದರ ಕಾದಾಟದ ಸ್ವಭಾವ ಮೃದುವಾಗಿತ್ತು. ಅಷ್ಟು ವೈಜ್ಞಾನಿಕವು ಆಗಿರಲಿಲ್ಲ. ಭಾರತೀಯ ಬುದ್ಧಿ ಜೀವಿವರ್ಗದ ಅರಿವು ಬೆಳೆಯುವುದಕ್ಕೆ ಬಹಳ ಕಾಲ ಹಿಡಿಯಿತು. .ಅರಿವು ಬೆಳೆಸಲು ಒಂದು ಸ್ಪಷ್ಟ ಸಂಸ್ಥೆ ಇರಲಿಲ್ಲ. ಕಾಲ ಕಳೆದಂತೆ ರಾಜಕೀಯ ಪ್ರಜ್ಞೆಯಿದ್ದ ಭಾರತೀಯರಿಗೆ ಆಗ ಇದ್ದ ರಾಜಕೀಯ ಸಂಸ್ಥೆಗಳು ಬದಲಾದ ಪರಿಸ್ಥಿತಿಗಳಲ್ಲಿ ಸಹಾಯವಾಗುವುದಕ್ಕೆ ಸಾಧ್ಯವಿಲ್ಲದಷ್ಟು ಮಟ್ಟಿಗೆ ಸಂಕುಚಿತವಾಗಿ ಕಲ್ಪಿತವಾಗಿವೆ ಎಂಬ ವಿಷಯ ಮನವರಿಕೆಯಾಗಿ ಮೊದಲಿಗೆ ಬ್ರಿಟೀಷ್ ಇಂಡಿಯಾ ಅಸೋಸಿಯೇಷನ್ ಸಂಘವು ಹೆಚ್ಚಾಗಿ ಜಮೀನ್ದಾರರ ಆಸಕ್ತಿಗಳನ್ನು ಇಟ್ಟುಕೊಂಡು ಪರಿಣಾಮ ಆಳುಗ ಶಕ್ತಿಯೊಂದಿಗೆ ತನ್ನನ್ನು ಸಮೀಕರಿಸಿಕೊಂಡಿತ್ತು. ಆದರೆ ನೂತನ ರಾಜಕೀಯವು ಅಧಿಕವಾಗಿ ಬ್ರಿಟೀಷ್ ಆಳ್ವಿಕೆಯ ವಿಮರ್ಶಕ ಮನೋಭಾವದ ಆಧಾರದ ಮೇಲೆ ನಿಲ್ಲಬೇಕಾಗಿತ್ತು. ಆದ್ದರಿಂದ ಅವರು ಹೊಸ ಮಾದರಿಯ ರಾಷ್ಟ್ರೀಯತಾ ರಾಜಕೀಯ

ವ್ಯವಸ್ಥೆಯ ಕಡೆಗೆ ತಡವರಿಸುತ್ತಾ ನಡೆದರು. ೧೮೬೬ರಲ್ಲಿ ದಾದಾಬಾಯಿ ನವರೋಜಿ ಅವರು ಲಂಡನ್ನಿನಲ್ಲಿ ಸ್ಥಾಪಿಸಿದ ಈಸ್ಟ್ ಇಂಡಿಯಾ ಅಸೋಷಿಯೇಷನ್ ಎಂಬ ಸ್ಥಾಪಿಸಿ ಸ್ವಾತಂತ್ರ್ಯ ಚಳುವಳಿಗಳ ಸಂಘಟಿಸುವಲ್ಲಿ ದಾಪುಗಾಲು ಹಾಕಿದರು. ಇವರಲ್ಲದೆ ಗಣೇಶ, ವಾಸುದೇವ, ಜ್ಯೋತಿ, ಎಸ್.ಎಚ್.ಚಿಪ್ಳಾಣಕರ್ ಮತ್ತು ಇತರರು ೧೮೭೦ರಲ್ಲಿ "ಪೂನ ಸಾರ್ವಜನಿಕ ಸಭೆಯನ್ನು ರೂಪಿಸಿ ಸ್ವಾತಂತ್ರ್ಯ ಸಂಘಟನೆಗಳ ಬಗ್ಗೆ ಬಹುಮುಖ್ಯವಾದ ಪಾತ್ರವನ್ನು ವಹಿಸಿತು. ೧೮೭೬ರ ಜುಲೈ ತಿಂಗಳಲ್ಲಿ ಇಂಡಿಯನ್ ಅಸೋಸಿಯೇಷನನ್ನು ಆನಂದ್ ಮೋಹನ್‌ದಾಸ್ ಸುರೇಂದ್ರನಾಥ ಬ್ಯಾನರ್ಜಿ ಇವರ ನೇತೃತ್ವದಲ್ಲಿ ಅವರು ೧೮೭೬ರ ಜುಲೈ ತಿಂಗಳಲ್ಲಿ ಸ್ಥಾಪಿಸಿ ಸಾಮಾನ್ಯ ಜನರಲ್ಲಿ ಸ್ವಾತಂತ್ರ್ಯ ನಮ್ಮ ಹಕ್ಕು ಎಂಬುದರ ಕಲ್ಪನೆಯನ್ನು ಮೂಡಿಸಿತು. ಕ್ರಿ.ಶ. ೧೮೮೪ರಲ್ಲಿ ವೀರರಾಘವಾಚಾರಿ, ಜಿ.ಸುಬ್ರಮಣಿ ಅಯ್ಯರ್ ಆನಂದ್‌ಚಾರ್ಲು ಮತ್ತಿತ್ತರರು "ಮದರಾಸ್ ಮಹಾಜನ ಸಭಾ" ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸ್ವಾತಂತ್ರ್ಯ ಚಳುವಳಿಯ ನೆಲೆಗಟ್ಟನ್ನು ಭದ್ರಪಡಿಸುವಲ್ಲಿ ಸಹಕಾರಿಯಾಗಿತ್ತಾದಾದರೂ ರಾಜಕೀಯ ಪ್ರಜ್ಞೆಯಿದ್ದ ಭಾರತೀಯರಿಗೆ ಹೆಚ್ಚು ಹೆಚ್ಚಾಗಿ ಅಖಿಲ ಭಾರತ ವ್ಯಾಪ್ತಿಯುಳ್ಳ ಸಂಸ್ಥೆಯೊಂದರ ಅಗತ್ಯ ಮನವರಿಕೆಯಾಯಿತು. ಇದು ವಿವಿಧ ಮನೋಭಾವವಗಳ ಸಂಗಮಕ್ಕೆ ಸಮಾನವಾದ ಒಂದು ರಂಗವನ್ನು ನಿರ್ಮಿಸಿ ಕಾರ್ಯಚಟುವಟಿಕೆಗಳಿಗೆ ಒಂದು ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಮಾತ್ರವಲ್ಲ ವಿಶಾಲ ತಳಹದಿಯ ಸ್ವಾತಂತ್ರ್ಯ ಹೋರಾಟವನ್ನು ರೂಪಿಸಲು ಅಗತ್ಯವಾದ ಸಾರ್ವಜನಿಕ ಶಿಕ್ಷಣವನ್ನು ವ್ಯಾಪಕವಾಗಿ ಕೈಗೊಳ್ಳುವುದಕ್ಕೂ ಅಗತ್ಯವಾಗಿತ್ತು ಇವೆಲ್ಲವುಗಳನ್ನು ಸಾಧಿಸುವುದಕ್ಕೆ ಒಂದು ಸಂಸ್ಥೆಯ ಅವಶ್ಯಕತೆಯಿತ್ತು. ಆದ್ದರಿಂದಲೇ ಮಹಾನ್ ನಾಯಕರಾದ ದಾದಾಬಾಯಿ ನವರೋಜಿ, ಜಸ್ಟಿಸ್‌ರಾನಡೆ, ಫರೋಜ್ ಮಹಾಮೆಹತಾ, ಕೆ.ಟಿ.ತೆಲಂಗ್, ರಹಿಮುತ್ತುಲ್ಲಾ ಮಹಮ್ಮದ್ ಸಯನಿ ಝುವೇರಿಲಾಲ್, ಉಮಶಂಕರ್ ಯಾಜ್ಞಿಕ್ ಮತ್ತು ಬದ್ರಾದ್ದಿನ್, ತ್ಯಾಬ್ಜಿ, ಜಿ. ಸುಬ್ರಮಣೀಯ ಅಯ್ಯರ್, ಉಸ್-ಸುಬ್ರಮಣೀಯ ಅಯ್ಯರ್ ಮತ್ತು ಆನಂದ ಚಾರ್ಲು ಪೂರ್ವ ಭಾರತದ ಡಬ್ಲ್ಯೂ.ಸಿ. ಬ್ಯಾನರ್ಜಿ, ಸುರೇಂದ್ರ ಬ್ಯಾನರ್ಜಿ ಅನಂತ ಮೋಹನ್ ಬೋಸ್, ಲಾಲ್ ಮೋಹನ್ ಘೋಸ್ ಮತ್ತು ಕಾಳೀಚರಣ ಬ್ಯಾನರ್ಜಿ ಇವರೆಲ್ಲರೂ ಏಕಕಾಲಕ್ಕೆ ಅಖಿಲ ಭಾರತ ರಾಷ್ಟ್ರೀಯ ಸಂಸ್ಥೆಯೊಂದನ್ನು ರೂಪಿಸುವ ಆಲೋಚನೆ ಮಾಡತೊಡಗಿದರು. ಈ ವಿಚಾರಕ್ಕೆ ರಾಷ್ಟ್ರೀಯವಾದಿ ರಾಜಕೀಯ ನಾಯಕರ ಬೊಂಬಾಯಿ ಗುಂಪು ಹೆಚ್ಚು ಖಚಿತವಾದ ರೂಪುಕೊಟ್ಟಿತು. ಇಂಗ್ಲಿಷಿನವನು ನಿವೃತ್ತ ಸಿವಿಲ್ ಅಧಿಕಾರಿಯು ಆಗಿದ್ದ ಎ.ಓ.ಹ್ಯೂಮ್ ಎಂಬುವವನ ಸಹಕಾರದೊಂದಿಗೆ ಕ್ರಿ.ಶ. ೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆ ಮಾಡಿದರು. ಮೊದಲಿಗೆ ಡಬ್ಲ್ಯೂ.ಸಿ. ಬ್ಯಾನರ್ಜಿಯವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದರು ಈ ಸಂಸ್ಥೆಯ ಹಲವಾರು ನಾಯಕರು ಸ್ವಾತಂತಕ್ರ್ಯದ ಅವಶ್ಯಕತೆಯ ಬಗ್ಗೆ ವಿದ್ಯಾರ್ಥಿಗಳು ಶಿಕ್ಷಿತರು ಗ್ರಾಮೀಣ ಜನಾಂಗದವರು ನಗರದ ಜನತೆ ಎಲ್ಲರೂ ಪಾಲ್ಗೊಳ್ಳುವಂತೆ ಅರಿವು ಮೂಡಿಸಿ. ಭಾರತದ ಸ್ವಾತಂತ್ರ್ಯ ಚಳುವಳಿಯ ಆಗು ಹೋಗುಗಳನ್ನು ಚರ್ಚಿಸಿ ನಿರ್ಧಾರ ಕೈಗೊಳ್ಳಲು ಒಂದು ಸಂಸ್ಥೆ ಹುಟ್ಟಿ ಎಲ್ಲಾ ಕಡೆ ಸ್ವಾತಂತ್ರ್ಯ ಚಳುವಳಿ ಪ್ರಸರಣಗೊಳ್ಳಲು ಅನುವು ಮಾಡಿಕೊಟ್ಟಿತ್ತು.

ಮಂದಗಾಮಿ ಮತ್ತು ತೀವ್ರಗಾಮಿಗಳು ಸ್ವಾತಂತ್ರ್ಯ ಚಳುವಳಿಯಲ್ಲಿನ ಪಾತ್ರ

ಮಂದಗಾಮಿ ಭಾರತ ರಾಷ್ಟ್ರೀಯ ನಾಯಕರ ಅಭಿಪ್ರಾಯದಲ್ಲಿ ಆಗ ಇನ್ನೂ ರಾಷ್ಟ್ರದ ರಾಜಕೀಯ ವಿಮೋಚನೆಗಾಗಿ ನೇರವಾದ ಹೋರಾಟ ನಡೆಸುವುದು ಇತಿಹಾಸದ ಕಾರ್ಯನಿಯೋಜನೆಯಲ್ಲಿ ಇರಲಿಲ್ಲ. ಆ ನಿಯೋಜನೆಯಲ್ಲಿದ್ದುದ್ದು ರಾಷ್ಟ್ರೀಯತಾಭಾವನೆಯ ಉದ್ಬೋಧನೆ ಈ ಭಾವನೆಯ ಕ್ರೋಢೀಕರಣ ರಾಷ್ಟ್ರೀಯತಾ ರಾಜಕೀಯದ ಶಿಖರ ಸ್ಥಿತಿಗೆ ಭಾರೀ ಸಂಖ್ಯೆಯ ಭಾರತೀಯರನ್ನು ತರುವುದು ಮತ್ತು ರಾಜಕೀಯ ಚಳುವಳಿ ಹಾಗೂ ಹೋರಾಟದ ವಿಷಯಗಳಲ್ಲಿ ಅವರಿಗೆ ಶಿಕ್ಷಣ ಕೊಡುವುದು ಈ ವಿಚಾರಗಳು ಈ ನಿಟ್ಟಿನಲ್ಲಿ ಮೊದಲನೆಯ ಮುಖ್ಯ ಕರ್ತವ್ಯ. ರಾಜಕೀಯ ಪ್ರಶ್ನೆಗಳಲ್ಲಿ ಸಾರ್ವಜನಿಕ ಆಸಕ್ತಿಯನ್ನು ಮೂಡಿಸುವುದು ಹಾಗೂ ದೇಶದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು ಎರಡನೆಯದಾಗಿ ಜನತಾ ಬೇಡಿಕೆಗಳನ್ನು ರಾಷ್ಟ್ರವ್ಯಾಪ್ತಿ ಆಧಾರದ ಮೇಲೆ ಖಚಿತಪಡಿಸಿ ಮೂಡುವ ಸಾರ್ವಜನಿಕ ಅಭಿಪ್ರಾಯವು ಅಖಿಲ ಭಾರತ ದೃಷ್ಟಿಯನ್ನು ಹೊಂದಿರುವಂತೆ ಮೂಡುವುದು ದೇಶದ ಬೇರೆ ಬೇರೆ ಭಾಗಗಳ ಸಕ್ರೀಯ ರಾಷ್ಟ್ರೀಯತಾ ವಾದಿಗಳ ನಿಕಟ ಸಂಪರ್ಕ ಮತ್ತು ಸ್ನೇಹಯುತ ಸಂಬಂಧಗಳನ್ನು ಸಾಧಿಸಲು ಪ್ರಯತ್ನಿಸಿತು ಅಂದಿನ ರಾಷ್ಟ್ರೀಯತಾವಾದಿಗಳ ನಿಕಟ ಸಂಪರ್ಕ ಮತ್ತು ಸ್ನೇಹಯುತ ಸಂಬಂಧಗಳನ್ನು ಪ್ರಯತ್ನಿಸಿದರು.

ಮಂದಗಾಮಿಗಳಲ್ಲದೆ ತೀವ್ರಗಾಮಿಗಳು ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ೧೯ನೇ ಶತಮಾನದ ಕೊನೆಯ ವೇಳೆಗೆ ಕ್ಷೋಭೆ ಅತೃಪ್ತಿಗಳು ಹಳ್ಳಿಗಳಲ್ಲಿನ ಶ್ರೀಮಂತರು ರೈತರು ಹಾಗೂ ಕಾರ್ಮಿಕರುಗಳಲ್ಲಿ ಕಂಡು ಬಂದವು. ಆದ್ದರಿಂದ ಸರಕಾರವನ್ನು ಸುಧಾರಣೆಗಳಿಗಾಗಿ ಒತ್ತಾಯ ಮಾಡುತ್ತಾ ಬೇಡಿಕೆಗಳನ್ನು ಸಲ್ಲಿಸುತ್ತಲೇ ಮುಂದುವರೆದಿದ್ದ ಮಿತಗಾಮಿನಾಯಕರ ಜನಪ್ರಿಯತೆ ಕಡಿಮೆಯಾಗುತ್ತಾ ಬಂದಿತು. ಆದ್ದರಿಂದ ಹೆಚ್ಚು ಹೋರಾಟ ಸ್ವರೂಪದ ರಾಷ್ಟ್ರೀಯತೆಯಲ್ಲಿ ನಂಬಿಕೆ ತಳೆದ ಅನೇಕಾನೇಕ ನಾಯಕರು ಕಾಣಿಸಿಕೊಂಡರು ಇವರನ್ನು ಉಗ್ರಗಾಮಿಗಳೆಂದು ಕರೆಯಲಾಯಿತು.

ವಿದ್ಯಾವಂತವರ್ಗ ಹಾಗೂ ನಗರಗಳ ಮಾಧ್ಯಮ ವರ್ಗಗಳ ಜನ ಬೆಂಬಲಕೊಟ್ಟಿದ್ದರೆ ಇವರಿಗೆ ಅಂದರೆ ಕೆಳ ಮಧ್ಯಮ ವರ್ಗದಲ್ಲಿ ಅಪಾರವಾದ ಜನಪ್ರಿಯತೆ ದೊರಕಿತು ಅದೇ ರೀತಿ ವಿದ್ಯಾರ್ಥಿಗಳು ಕಾರ್ಮಿಕರು ಮತ್ತು ಕೃಷಿಕರ ಒಂದು ವರ್ಗವೂ ಇವರಿಗೆ ಅಂದರೆ ತೀವ್ರಗಾಮಿಗಳಿಗೆ ಬೆಂಬಲ ದೊರಕಿತು. ಪ್ರಾರಂಭದಲ್ಲಿ ಇದಕ್ಕೆ ಬಂಗಾಳದಲ್ಲಿ ರಾಜನಾರಾಯಣ್‌ಬೋಸ್ ಮತ್ತು ಬಂಕಿಮಚಂದ್ರ ಚಟರ್ಜಿ ಮಹಾರಾಷ್ಟ್ರದಲ್ಲಿ ಚಿಪ್ಪಣಕರ್, ಲಾಲಾ ಲಜಪತ್‌ರಾಯ್, ಬಾಲಗಂಗಾಧರ್ ತಿಲಕ್ ಇವರುಗಳೆಲ್ಲ ಸ್ವಾತಂತ್ರ್ಯದ ಚಿಂತನೆಯ ಬಗ್ಗೆ.

ಭಾರತದ ಸ್ವಾತಂತ್ರ ಚಳುವಳಿಯಲ್ಲಿ ಕ್ರಾಂತಿಕಾರಿಗಳ ಪಾತ್ರ

ರಾಷ್ಟ್ರೀಯ ಚಳುವಳಿಯ ರಭಸ, ವ್ಯಾಪಕತೆಗಳು ಎಷ್ಟೇ ಇದ್ದರೂ ಬಂಗಾಳದ ವಿಭಜನೆಯನ್ನು ಸರಕಾರ ಹಿಂತೆಗೆದುಕೊಳ್ಳಲಿಲ್ಲ. ಬದಲಿಗೆ ಮೊದಲಿಗಿಂಗಲೂ ಹೆಚ್ಚು ದಬ್ಬಾಳಿಕೆ ನಡೆಸತೊಡಗಿತು. ಈ ಎರಡೂ ಅಂಶಗಳು ಕ್ರಾಂತಿಯೇಳುವ ಮನೋಧರ್ಮವಿದ್ದ ಅಸಹಿಷ್ಣುಗಳಾದ ಯುವಕರ ಮನಸ್ಸಿನ ಮೇಲೆ ತತ್‌ಕ್ಷಣವೇ ಪರಿಣಾಮ ಮಾಡಿದುವು. ಉಗ್ರಗಾಮಿ ಪಂಗಡದ ನಾಯಕರಾಗಿದ್ದ ತಿಲಕರು ಮೊದಲೇ, ಅಂದರೆ ಬಂಗಾಳ ವಿಭಜನಾ ಚಳುವಳಿಗೂ ಮುಂಚೆಯೇ ತಮ್ಮ ಕೆಲವು ಯುವಕ ಅನುಯಾಯಿಗಳ ಮನೋಭಾವಗಳನ್ನು ಕೆರಳಿಸಿದ್ದರು. ಅವರು ವೈಯಕ್ತಿಕವಾಗಿ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗುವುದಕ್ಕೆ ಅದಷ್ಟೇ ಸಾಕಾಗಿತ್ತು. ೧೮೯೭ರಷ್ಟು ಮೊದಲೇ ಪೂನಾದ ಇಬ್ಬರು ಸೋದರರು ದಾಮೋದರ್ ಮತ್ತು ಬಾಲಕೃಷ್ಣ ಚಾಪೇಕರ್ ಎನ್ನುವವರು ಇಬ್ಬರು ಬ್ರಿಟಿಷ್ ಅಧಿಕಾರಿಗಳನ್ನು ಕೊಂದು ಹಾಕಿದರು. ಮುಂದೆ ಅರವಿಂದ ಘೋಷರೇ ಕೆಲವು ಕ್ರಾಂತಿಕಾರೀ ಚಳುವಟಿಕೆಗಳ ಹಂಚಿಕೆ ಹಾಕಿದರು. ಬಂಗಾಳದ ವಿಭಜನೆಯಾದ ನಂತರದ ಘಟನೆ, ಅನೇಕ ಯುವಕ ಭಾರತೀಯರ ಕ್ರಾಂತಿಕಾರೀ ಭಾವನೆಗಳನ್ನು ಚುರುಕುಗೊಳಿಸಿದುವು. ಸಾಂವಿಧಾನಿಕ ಚಳುವಳಿ ಅಥವಾ ಪ್ರತಿಭಟನೆಗಳಲ್ಲಿ ಅವರಿಗೆ ಶ್ರದ್ಧೆ ಇಲ್ಲವಾಯಿತು. ಬ್ರಿಟಿಷರನ್ನು ಬಲಾತ್ಕಾರವಾಗಿ ಕಿತ್ತೊಗೆಯಬೇಕು ಎಂದು ಅವರು ಭಾವಿಸಿದರು. ೧೯೦೬ ಏಪ್ರಿಲ್ ೨೨ರಂದು ಪ್ರಕಟಿಸಿದ ಸಂಪಾದಕೀಯದಲ್ಲಿ 'ಜುಗಾಂತರ' ಈ ಪಂಥವನ್ನು ಅಭಿವ್ಯಕ್ತಪಡಿಸಿತು. ಇದು ಬಾರಿಸಾಲ್ ಸಮ್ಮೇಳನವನ್ನು ಪೊಲೀಸರು ಒಡೆದು ಚೂರುಚೂರು ಮಾಡಿದ ನಂತರ "ಪರಿಹಾರ ಜನಗಳ ಕೈಯಲ್ಲೇ ಇದೆ" ಭಾರತದಲ್ಲಿ ವಾಸಿಸುವ ಮೂವತ್ತು ಕೋವಿ ಜನರು, ಈ ದಬ್ಬಾಳಿಕೆಯ ಶಾಪವನ್ನು ನಿಲ್ಲಿಸಲು ತಮ್ಮ ಅರವತ್ತು ಕೋಟಿ ಕೈಗಳನ್ನು ಮೇಲೆತ್ತಬೇಕು, ಬಲವನ್ನು ಬಲದಿಂದಲೇ ತಡೆಯಬೇಕು.

ಖುದೀರಾಮ್ ಬೋಸ್ ಮತ್ತು ಪ್ರಫುಲ್ಲ ಚಕ್ಕಿ ಎಂಬ ಇಬ್ಬರು ಯುವಕರು ಮುಜಫರ್‌ಪುರದ ಜಿಲ್ಲಾ ನ್ಯಾಯಾಧೀಶನಾಗಿದ್ದ ಕಿಂಗ್ಸ್‌ಫರ್ಡ್‌ನ ಪ್ರಾಣ ತೆಗೆಯಲು ಕೈಗೊಂಡ ಪ್ರಯತ್ನ ಕ್ರಾಂತಿಕಾರಿ ಭಯೋತ್ಪಾದಕ ಕೃತ್ಯಗಳ ಹಾಕಿದ ಬಾಂಬು ಇಬ್ಬರು ಮುಗ್ಧವಾದ ಹೆಂಗಸರನ್ನು ಬಲಿ ತೆಗೆದುಕೊಂಡಿತು. ಖುದೀ ಮಠನ್ನು ಸೆರೆ ಹಿಡಿದರು. ಪ್ರಫುಲ್ಲನು ಶರಣಾಗುವುದಕ್ಕಿಂತ ಮೇಲೆಂದು ಆತ್ಮಹತ್ಯೆ ಮಾಡಿಕೊಂಡನು. ಅರವಿಂದರ ಮತ್ತು ಅವರಸೋದರ ಬಾರಿನ್ ಹಾಗೂ ಇತರರ ಒಳಸಂಚಿನ ಮೊಕದ್ದೊಮ್ಮೆ ಅಲೀಪುರದಲ್ಲಿ ಪ್ರಾರಂಭಿಸಲಾಯಿತು. ಜೈಲಿನ ಕಾಂಪೌಂಡಿನಲ್ಲಿಯೇ ಕ್ರಾಂತಿಕಾರಿ ಭಯೋತ್ಪಾದಕರು ಶೋಧನೆ ಮತ್ತು ವಿಚಾರಣೆಗಳಿಗೆ ನೇಮಿತರಾಗಿದ್ದ ಅಧಿಕಾರಿಗಳನ್ನು ಒಬ್ಬೊಬ್ಬರನ್ನಾಗಿ ಕೊಲ್ಲಲಾಯಿತು. ಅರವಿಂದರನ್ನು ಬಿಡುಗಡೆ ಮಾಡಿದಾಗ, ಅವರ ಸೋದರ ಬಾರಿನ್ ಸೇರಿದಂತೆ ನಾಲ್ವರನ್ನು ಅಂಡಮಾನಿಗೆ ಕಳುಹಿಸಲಾಯಿತು. ಇತರ ಅನೇಕರನ್ನು ದೀರ್ಘಕಾಲದ ಸೆರೆವಾಸಕ್ಕೆ ತಳ್ಳಲಾಯಿತು, ಖುದೀರಾಮನನ್ನುಕ, ನೇಣುಹಾಕಿದರು. ಅಪ್ರೂವರನ್ನು ಕೊಲೆ ಮಾಡಿದ ಸತ್ಯೇನ್ ಬಸು ಮತ್ತು ಕನಾಯ್ ದತ್ತರಿಗೂ ಅದೇ ಗತಿಯಾಯಿತು.

ಮಹಾರಾಷ್ಟ್ರದಲ್ಲಿನ ನಾಸಿಕ್ ಮುಂಬೈ ಮತ್ತು ಪುಣೆ ಬಾಂಬು ತಾಯಾರಿಕಾ ಕೇಂದ್ರಗಳಾದವು. ವೈಸರಾಯ್‌ನ ಜೀವದ ಮೇಲೆ ಆಕ್ರಮಣ ನಡೆಸಲಾಯಿತು. ಒಂದು ಸಮಾರಂಭದಲ್ಲಿ ನಾಸಿಕ್‌ನ ಜಿಲ್ಲಾ ನ್ಯಾಯಧೀಶ ಜ್ಯಾಕ್‌ಸನ್ನಿನ ಮೇಲೆ ಗುಂಡು ಹಾರಿಸಲಾಯಿತು. ಇದಕ್ಕೂ ಮುಂಚೆ, ಭಾರತೀಯ ಯುವಕರನ್ನು ಅಮಾನುಷ ರೀತಿಯಲ್ಲಿ ನೇಣು ಹಾಕುತ್ತಿದ್ದರ ಮತ್ತು ದೇಶಭ್ರಷ್ಟರನ್ನಾಗಿ ಮಾಡುತ್ತಿದ್ದರ ವಿರುದ್ಧ ಪ್ರತಿಭಟನೆಯಾಗಿ, ಲಂಡನ್ನಿನ ಇಂಡಿಯಾ ಆಫೀಸಿನ ಕರ್ಜನ್ ವೈಲಿಯನ್ನ ಎಂ.ಎಲ್. ಧಿಂಗ್ರಾ ಕೊಂದು ಹಾಕಿದನು. ಅವನಿಗೆ ಮರಣದಂಡನೆಯಾಯಿತು. ಸಾಯುವುದಕ್ಕೆ ಮುಂಚೆ ಅವನು ಬರೆದನು, "ಭಾರತದಲ್ಲಿ ಅಗತ್ಯವಾಗಿರುವ ಒಂದೇ ಒಂದು ಶಿಕ್ಷಣವೆಂದರೆ ಹೇಗೆ ಸಾಯಬೇಕೆಂಬುದನ್ನು ಕಲಿಯುವುದು. ಅದನ್ನು ಕಲಿಸಲು ಇರುವ ಒಂದೇ ಒಂದು ಮಾರ್ಗ ಹಾಗೆ ಸಾಯುವುದೇ ಆಗಿದೆ".

ಮದರಾಸು ಪ್ರಾಂತದಲ್ಲಿ ಜನರು ಬಿಪಿನ್ ಚಂದ್ರಪಾಲರ ನಿರರ್ಗಳ ಭಾಷಣಗಳಿಂದ ಉದ್ರಿಕ್ತರಾದರು. ಚಿದಂಬರಂ ಪಿಳ್ಳೆ ಸಂಪೂರ್ಣ ಸ್ವರಾಜ್ಯವನ್ನು ಕುರಿತು ಬಹಿರಂಗವಾಗಿ ಮಾತನಾಡಿದರು. ಅವರ ಬಂಧನವು ಟ್ಯುಟಿಕಾರಿನ್ ಮತ್ತು ತಿನ್ನವೆಲ್ಲಿಗಳಲ್ಲಿ ತೀವ್ರವಾದ ದಂಗೆಗಳಿಗೆ ಎಡೆ ಮಾಡಿತ್ತು. ಉದ್ರಿಕ್ತ ಜನರ ಮೇಲೆ ಪೋಲೀಸ್‌ರು ಅಲ್ಲಿ ಗುಂಡು ಹಾರಿಸಿದರು. ತಿನ್ನವೆಲ್ಲಿಯಲ್ಲಿ ಗುಂಡು ಹಾರಿಸಲು ಅಜ್ಞೆಯಿತ್ತಿದ್ದ ಆಶೇ ಎಂಬ ಅಧಿಕಾರಿಯನ್ನು ಭಾರತ ಮಾತಾ ಅಸೋಸಿಯೇಷನ್ನಿನ ವಾಂಚೀ ಅಯ್ಯರ್ ಕೊಲೆ ಮಾಡಿದರು. ಆ ಮೇಲೆ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ವಾಂಚೀ ಅಯ್ಯರ್ ತನಗೆ ತಾವೇ ಗುಂಡು ಹೊಡೆದುಕೊಂಡು ಸತ್ತನು.

ಪಂಜಾಬಿನಲ್ಲಿ ಮತ್ತೆ ಮತ್ತೆ ತಲೆದೋರಿತ್ತಿದ್ದ ಕ್ಷಾಮಗಳು, ಅಧಿಕವಾಗುತ್ತಿದ್ದ ನೆಲಗಂದಾಯ ಮತ್ತು ನೀರಾವರಿ ತೆರಿಗೆಗಳ ಆಧಾರದಿಂದ ಈ ಗುಪ್ತ ಸಂಸ್ಥೆಗಳು ಪ್ರಬಲವಾದುವು. ಕಾಲುವೆ ಕಾಲೋನಿಗಳಲ್ಲಿ ನೆಲೆಸಿದವರು, ಒಡೆತನದ ಹಕ್ಕುಗಳ ಮೇಲೆ ಇದ್ದ ತಡೆಗಳನ್ನು ಶಂಕಿಸಿದರು. 'ಬೆಗರ್ ಪದ್ಧತಿ' ಇರಿಸುಮುರಿಸು ಉಂಟುಮಾಡಿತ್ತು. ಬಂಗಾಳದಲ್ಲಿ ನಡೆದ ಘಟನೆಗಳು ಪಂಜಾಬಿಗಳನ್ನು ಇನ್ನಷ್ಟು ಉದ್ರೇಕಗೊಳಿಸಿದುವು. ೧೮೫೭ರ ಕ್ರಾಂತಿಯ ೫೦ನೆಯ ವಾರ್ಷಿಕ ಸಮಾರಂಭವು ಸಮೀಪಿಸುತ್ತಿತ್ತು. ಭಾಷಣಗಳಲ್ಲಿ ಪದೇ ಪದೇ ಸಿಖ್ ಸೇನಾ ಪಡೆಗಳು ಕ್ರಾಂತಿಯೇಳಬೇಕೆಂದು ಕರೆ ನೀಡಲಾಗುತ್ತಿತ್ತು. ಲಾಹೋರಿನಲ್ಲಿ ಯುರೋಪಿಯನ್ನರ ಮೇಲೆ ಆಕ್ರಮಣಗಳು ನಡೆದವು. ಲಜಪತ್‌ರಾಯ್ ಅವರ 'ಪಂಜಾಬೀ' ಪತ್ರಿಕೆಯನ್ನು ವಿಚಾರಣಗೆ ಒಳಪಡಿಸಿದುದರಿಂದಾಗಿ ರಾವಲ್ಪಿಂಡಿಯಲ್ಲಿ ದಂಗೆಗಳು ಎದ್ದವು. ಈ ಚಳುವಳಿಯ ಹೃಯದಂತಿದ್ದವನು ಆಜಿತ್‌ಸಿಂಗ್. ಅವನಿಗೆ ಆಗ ಹೈದರ್ ಮತ್ತು ಸಯ್ಯದ್ ಹೈದರ್ ರೀಜಾರ ಬೆಂಬಲವಿತ್ತು. ಲಜಪತ್‌ರಾಯ್ ಮತ್ತು ಅಜಿತ್ ಸಿಂಗ್‌ರನ್ನು ಗಡೀಪಾರು ಮಾಡಿದುದರಿಂದಾಗಿ ಪರಿಸ್ಥಿತಿ ಕೊಂಚ ಕಾಲ ತಟಸ್ಥವಾಗಿತ್ತು.

ಆಗ ಡೆಹರೂಡೂನಿನಲ್ಲಿ ಒಬ್ಬ ಗುಮಾಸ್ತರಾಗಿದ್ದ 'ರಾಶ್ ಬೆಹಾರಿ ಬೋಸ್'

ಬಂಗಾಳಕ್ಕೂ ಪಂಜಾಬಿಗೂ ಮಧ್ಯೆ ಸಂಪರ್ಕ ಇನ್ನು ನಡೆಯದು ಎಂದು ತೋರಿಕೊಡುವ ಸಲುವಾಗಿ ೧೯೧೨ರ ಡಿಸೆಂಬರ್ ೨೩ರಂದು ವೈಸರಾಯ್ ಲಾರ್ಡ್ ಹಾರ್ಡಿಂಜ್ ದೆಹಲಿ ನಗರವನ್ನು ಪ್ರವೇಶಿಸುತ್ತಿರುವಂತೆಯೇ ಅವನ ಮೇಲೆ ಎಸೆಯಲಾಯಿತು. ರಾಶ್‌ಬೆಹಾರಿ ಬೋಸರ 'ಲಿಬರ್ಟಿ' ಕರಪತ್ರಗಳೂ 'ಜುಗಾಂತರ' ಕರಪತ್ರಗಳೂ ಕ್ರಾಂತಿಕಾರಕ ವೃತ್ತಪತ್ರಿಕೆಗಳ ಪರಂಪರೆಯನ್ನು ಮುಂದುವರಿಸಿದುವು.

ಕೆಲವರು ಕ್ರಾಂತಿಕಾರೀ ಭಯೋತ್ಪಾದಕರು ವಿದೇಶಗಳಿಗೆ ಹೋಗಿ ಯುರೋಪಿನಲ್ಲಿ ಕೇಂದ್ರಗಳನ್ನು ಸ್ಥಾಪಿಸಿದರು. ಅವರು ಬ್ರಿಟನ್ನಿಗೆ ಸ್ನೇಹಯುತವಾಗಿರದ ರಾಷ್ಟ್ರಗಳ ಸಹಾಯ ಪಡೆಯಬೇಕು ಅಥವಾ ಆಯುಧಗಳನ್ನು ಸಂಗ್ರಹಿಸಿ ಭಾರತದಲ್ಲಿನ ತಮ್ಮ ಸಹವರ್ತಿಗಳಿಗೆ ಗುಪ್ತವಾಗಿ ಕಳುಹಿಸಬೇಕು ಎಂದು ಹಂಚಿಕೆ ಹಾಕಿದ್ದರು. ಶ್ಯಾಮಜೀ ಕೃಷ್ಣವರ್ಮ,ಕ ವಿ.ಟಿ.ಸಾವರ್ಕರ್ ಮತ್ತು ಹರದಯಾಲ್ ಇಂಗ್ಲೇಡಿಗೆ ಹೋದರು. ಯುರೋಪಿನಲ್ಲಿ ಮೇಡಂ ಗಾಮಾ ಮತ್ತು ಅಜಿತ್‌ಸಿಂಗ್ ಪ್ರಮುಖರಾಗಿದ್ದರು.

ಹೋಂ ರೂಲ್‌ಲೀಗ್ ಚಳುವಳಿ

೨೦ನೇ ಶತಮಾನದ ಎರಡನೇ ದಶಕದ ವೇಳೆಗೆ ಯೂರೋಪಿನ ಮೇಲೆ ಯುದ್ಧದ ಕಾರ್ಮೋಡಗಳು ಕಾಣಿಸಿಕೊಂಡವು. ೧೯೧೪ರ ಜೂನ್ ತಿಂಗಳಿನಲ್ಲಿ ಪ್ರಥಮ ಮಹಾಯುದ್ಧವು ಪ್ರಾರಂಭವಾಯಿತು. ಅದರ ಪ್ರಭಾವ ಭಾರತದ ಸ್ವಾತಂತ್ರ್ಯ ಚಳುವಳಿಯ ಮೇಲೂ ಕಂಡು ಬಂದಿತು. ೧೯೧೪ರ ಜುಲೈ ತಿಂಗಳ ೧೬ರಂದು ೬ ವರ್ಷಗಳ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದ ಬಾಲಗಂಗಾಧರ ತಿಲಕರ ಬಿಡುಗಡೆಯಾಯಿತು. ಅವರೂ ಸೇರಿದಂತೆ ಅನೇಕ ರಾಷ್ಟ್ರೀಯವಾದಿಗಳು ಯುದ್ಧಕಾಲದಲ್ಲಿ ಗ್ರೇಟ್ ಬ್ರಿಟನ್ ಭಾರತೀಯರ ರಾಜಕೀಯ ಬೇಡಿಕೆಗಳನ್ನು ಈಡೇರಿಸುತ್ತಿದ್ದರೆಂಬ ಆಶಾಭಾವನೆಯನ್ನು ಹೊಂದಿದ್ದರು. ಆದರೆ ಗ್ರೇಟ್ ಬ್ರಿಟನ್ ಮತ್ತು ಅದರ ಮಿತ್ರ ರಾಷ್ಟ್ರಗಳು ಹಾಗೂ ಜರ್ಮನಿ ಮತ್ತು ಅದರ ಮಿತ್ರರಾಷ್ಟ್ರಗಳು ಪರಸ್ಪರ ಹೋರಾಡುತ್ತಿರುವುದು ತಮ್ಮ ವೈಯಕ್ತಿಕ ಹಿತಾಸಕ್ತಿಗಳ ರಕ್ಷಣೆಗಾಗಿ ಎಂಬ ಮಾರ್ಮಿಕ ಸತ್ಯದ ಅರಿವು ಮೊದಲನೆ ಮಹಾಯುದ್ಧ ಪ್ರಾರಂಭದಲ್ಲಿ ಭಾರತದ ರಾಜಕೀಯ ಮುಖಂಡರಿಗೆ ಅರಿವಾಗಲಿಲ್ಲ. ಯುರೋಪಿನ ವಸಾಹತುಶಾಹಿ ರಾಷ್ಟ್ರಗಳ ನಡುವಿನ ಯುದ್ಧದಿಂದಾಗಿ ಭಾರತೀಯರು ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು.

ದಿನನಿತ್ಯದ ಬಳಕೆಯ ಅಗತ್ಯ ವಸ್ತುಗಳ ಬೆಲೆಯಲ್ಲಿ ಗಣನೀಯ ಹೆಚ್ಚಳವು ಕಂಡು ಬಂದಿತು. ತೆರಿಗೆಯ ಏರಿಕೆಯಿಂದಾಗಿ ಜನಸಾಮಾನ್ಯರ ಬದುಕು ಕಠಿಣವಾಯಿತು. ಹೀಗಾಗಿ ತೀವ್ರವಾದ ಅಸಮಾಧಾನವನ್ನು ಹೊಂದಿದ್ದ ಭಾರತೀಯರು ಯಾವುದೇ ರೀತಿಯ ವಸಾಹತುಶಾಹಿ ಆಡಳಿತದ ಪ್ರಭುತ್ವದ ವಿರುದ್ಧ ಚಳುವಳಿಯನ್ನು ಬೆಂಬಲಿಸಲು ಸಿದ್ಧರಿದ್ದರು. ಅಲ್ಲದೇ ವಸಾಹತುಶಾಹಿ ಸರ್ಕಾರದ ಮೇಲೆ ರಾಜಕೀಯ ಒತ್ತಡವನ್ನು ತರದಿದ್ದಲ್ಲಿ ಗ್ರೇಟ್ ಬ್ರಿಟನ್ ರಾಷ್ಟ್ರವು ಭಾರತೀಯರ ಯಾವುದೇ ರಾಜಕೀಯ ಬೇಡಿಕೆಗಳನ್ನು

ಈಡೇರಿಸುವುದಿಲ್ಲವೆಂಬುದು ರಾಷ್ಟ್ರೀಯವಾದಿಗಳಿಗೂ ಅರಿವಾಗಿತ್ತು. ಅಂತಹ ರಾಜಕೀಯ ಚಳುವಳಿಯನ್ನು ಪ್ರಾರಂಭಿಸುವ ಸಾಮರ್ಥ್ಯ ಮಂದಗಾಮಿಗಳ ಹಿಡಿತದಲ್ಲಿದ್ದ ಕಾಂಗ್ರೆಸ್ಸಿಗೆ ಇರಲಿಲ್ಲ. ಹೀಗಾಗಿ ವಸಾಹತು ಶಾಹಿ ವ್ಯವಸ್ಥೆಯ ವಿರುದ್ಧ ವಿನೂತನ ರಾಜಕೀಯ ಚಳುವಳಿಯನ್ನು ಸಂಘಟಿಸುವ ಜವಾಬ್ದಾರಿಯನ್ನು ಬಾಲಗಂಗಾಧರ ತಿಲಕ ಮತ್ತು ಶ್ರೀಮತಿ ಅನಿಬೆಸೆಂಟರು ಹೊರಬೇಕಾಯಿತು. ಈ ಕಾರಣದಿಂದಾಗಿ ಪ್ರಥಮ ಮಹಾಯುದ್ಧದ ಅವಧಿಯಲ್ಲಿ ಹೋಂ ರೂಲ್ ಚಳುವಳಿಯನು ಪ್ರಾರಂಬಿಸಲಾಯಿತು.

ಕಾಂಗ್ರೆಸ್-ಮುಸ್ಲಿಂಲೀಗ್ ಒಡಂಬಡಿಕೆ

ಲಕ್ನೋ ಅಧಿವೇಶನದ ಸಮಯದಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ತಮ್ಮ ಹಳೆಯ ಭಿನ್ನಾಭಿಪ್ರಾಯಗಳನು ಮರೆತು ಒಂದು ಒಪ್ಪಂದವನ್ನು ಮಾಡಿಕೊಂಡವು. ಇದೊಂದು ರಾಜಕೀಯ ಮಹತ್ವದ ಘಟನೆಯಾಯಿತು. ಹಲವಾರು ವರ್ಷಗಳಿಂದಲೂ ಮುಸ್ಲಿಂಲೀಗ್ ವಸಾಹತುಶಾಹಿ ಸರ್ಕಾರದ ಧೋರಣೆಯಿಂದ ಅಸಮಾಧನಾಗೊಂಡಿತ್ತು. ೧೯೧೧ರಲ್ಲಿ ಬಂಗಾಳದ ವಿಭಜನೆಯನ್ನು ರದ್ದುಗೊಳಿಸಿದ ಸರ್ಕಾರದ ಕ್ರಮ ಮುಸ್ಲಿಂಲೀಗಿನ ಮುಖಂಡರಿಗೆ ಅಘಾತವನ್ನುಂಡು ಮಡಿತು. ವಸಾಹತುಶಾಹಿ ಸರ್ಕಾರವು ತನ್ನ ಹಿತರಕ್ಷಣೆಗಾಗಿ ಅಲ್ಪಸಂಖ್ಯಾತರಾಗಿರುವ ಇಸ್ಲಾಂಧರ್ಮೀಯರನ್ನು ಬಳಸಿಕೊಳ್ಳುತ್ತಿದೆ ಎಂಬ ಭಾವನೆ ಅವರಲ್ಲಿ ಮೂಡಿ ಬಂದಿತು. ಪ್ರಥಮ ಮಹಾಯುದ್ಧ ಕಾಲದಲ್ಲಿ ಗ್ರೇಟ್ ಬ್ರಿಟನ್ ಟರ್ಕಿಯ ವಿರುದ್ಧ ಯುದ್ಧವನ್ನು ಘೋಷಿಸಿದ್ದು, ಅದಕ್ಕೂ ಮೊದಲು ಬಾಲ್ಕನ್ ಯುದ್ಧಗಳ ಸಮಯದಲ್ಲಿ ಗ್ರೇಟ್ ಬ್ರಿಟನ್ ಟರ್ಕಿಯ ವಿರುದ್ಧ ತಳೆದ ನಿಲುವು ಇಸ್ಲಾಂಧರ್ಮೀಯರ ಅಸಮಾಧಾನಕ್ಕೆ ಕಾರಣವಾಯಿತು. ಯುದ್ಧವು ಪ್ರಾರಂಭವಾದಾಗ ಸರ್ಕಾರ, ಮೌಲಾನಾ ಅಬ್ದುಲ್‌ಕಲಾಮ್ ಅಜಾದರ ಉರ್ದು ಪತ್ರಿಕೆ "ಅಲ್-ಹಿಲಾಲ್" ಮತ್ತು "ಮಹಮ್ಮದ್ ಆಲಿಯವರ ಇಂಗ್ಲೀಷ್ ಪತ್ರಿಕೆ"ನ ಪ್ರಕಟಣೆಯನ್ನು ನಿರ್ಬಂಧಿಸಿತು. ಆಲಿ ಸಹೋದರರು, ಅಜಾದ್ ಮತ್ತು ಹಸ್ರತ್ ಮೋಹಾನಿ ಅವರುಗಳನ್ನು ಬಂಧಿಸಲಾಯಿತು.

ಇವೆಲ್ಲವುಗಳಿಂದಾಗಿ ಮುಸ್ಲಿಂಲೀಗ್ ತನ್ನ ಸಂಕುಚಿತ ರಾಜಕೀಯ ದೃಷ್ಟಿಕೋನದಿಂದ ಹೊರಬಂಧು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ರಾಷ್ಟ್ರೀಯ ದೃಷ್ಟಿಕೋನಕ್ಕೆ ಸಮೀಪವಾಯಿತು. ಬಾಲಗಂಗಾಧರ್ ತಿಲಕ್, ಮಹಮ್ಮದ್ ಆಲಿ ಜಿನ್ನಾ ಮತ್ತು ಶ್ರೀಮತಿ ಅನಿಬೆಸೆಂಟ್ ಎರಡೂ ರಾಜಕೀಯ ಪಕ್ಷಗಳ ನಡುವೆ ಹೊಂದಾಣಿಕೆಯನ್ನ ಉಂಟುಮಾಡಲು ಪ್ರಾಮಾಣಿಕವಾಗಿ ಯತ್ನಿಸಿದರು. ಹಿಂದೂ-ಮುಸ್ಲಿಂ ನಡುವಿನ ಏಕತೆಯ ಮೂಲಕ ಮಾತ್ರ ಭಾರತ ಸ್ವಯಂ ಆಡಳಿತವನ್ನು ಗಳಿಸಲು ಸಾಧ್ಯ ಎಂದು ಅವರು ಭಾವಿಸಿದ್ದರು. ೧೯೧೫ರಲ್ಲಿ ಬೊಂಬಾಯಿಯಲ್ಲಿ ಕಾಂಗ್ರೆಸ್ಸಿನ ಅಧಿವೇಶನವು ನಡೆದ ಸಂದರ್ಭದಲ್ಲಿ ಮುಸ್ಲಿಂ ಲೀಗ್‌ನ ಅಧಿವೇಶನವು ನಡೆಯಿತು. ೧೯೧೬ರಲ್ಲಿ ಲಕ್ನೋ ನಗರದಲ್ಲಿ ಕಾಂಗ್ರೆಸ್ ಅಧಿವೇಶನ ನಡೆದ ಸಮಯದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ನಡುವೆ ಒಂದು ರಾಜಕೀಯ ಒಪ್ಪಂದವು

ಏರ್ಪಟ್ಟಿತು. ಇದನ್ನು 'ಲಕ್ನೋ ಒಪ್ಪಂದ' ಎಂದು ಕರೆಯಲಾಗಿದೆ.

ಖಿಲಾಫತ್ ಚಳುವಳಿ

ಖಿಲಾಫತ್ ಚಳುವಳಿಯ ಅಂತರಾಷ್ಟ್ರೀಯ ಹಿನ್ನೆಲೆ ಹೀಗಿದೆ. ಪ್ರಥಮ ಜಾಗತಿಕ ಯುದ್ಧದಲ್ಲಿ ತುರ್ಕಿ ಸಾಮ್ರಾಜ್ಯವು ಬ್ರಿಟನ್ನಿಗೆ ವಿರೋಧವಾಗಿ ನಿಂತು ಜರ್ಮನಿಯೊಂದಿಗೆ ಸೇರಿಕೊಂಡಿತು. ಯುದ್ಧದಲ್ಲಿ ಜರ್ಮನಿಯೂ ತುರ್ಕಿಯೂ ಪರಭಾವಗೊಂಡವು. ಖಲೀಫನ ತುರ್ಕಿ ಸಾಮ್ರಾಜ್ಯವು ಛಿದ್ರಛಿದ್ರವಾಗತೊಡಗಿತು. ತುರ್ಕಿಯ ಒಂದು ಭಾಗವಾಗಿದ್ದ ಅರೇಬಿಯಾ ಒಂದು ಸ್ವತಂತ್ರ ರಾಷ್ಟ್ರವಾಗಿ ಉದಯಿಸಿತು. ಅಂತೆಯೇ ಇತರ ಭಾಗಗಳಾದ ಜೋರ್ಡಾನ್, ಇರಾಕ್‌ಗಳೂ ಸ್ವತಂತ್ರ ರಾಜ್ಯಗಳಾಗಿ ಅಸ್ತಿತ್ವಕ್ಕೆ ಬಂದವು.

೧೯೧೯ರ ಕೊನೆಯಲ್ಲಿ ತುರ್ಕಿಯಲ್ಲಿ ನಡೆದ ಕ್ರಾಂತಿಯಿಂದಾಗಿ, ಒಬ್ಬ ಪ್ರತಿಭಾಶಾಲಿ ರಾಷ್ಟ್ರ ನಾಯಕನ ಉದಯವಾಯಿತು. ಅವನೇ ಅತಾತುರ್ಕ್ ಮುಸ್ತಾಫಾ ಕಮಾಲ್‌ಪಾಷಾ. ೧೯೨೦ ಏಪ್ರಿಲ್‌ನಲ್ಲಿ ಅವನು ತುರ್ಕಿಯಲ್ಲಿ ತನ್ನ ತಾತ್ಕಾಲಿಕ, ಠಕಾರವನ್ನು ಸ್ಥಾಪಿಸಿದ. ಖಲೀಫನ ಭ್ರಷ್ಟ ದುರ್ಬಲ ಅರಸೊತ್ತಿಗೆಯನ್ನು ಮೂಲೆಗೊತ್ತಿದ ತುರ್ಕಿಯನ್ನು ಪ್ರಗತಿಪರವಾದ ಬಲಾಢ್ಯ ರಾಷ್ಟ್ರವನ್ನಾಗಿ ಕಟ್ಟುವ ಯೋಜನೆ ಹಾಕಿದೆ. ತುರ್ಕಿಯ ಸುಲ್ತಾನ, ಖಲೀಫಾ ಸಕಲ ಮುಸ್ಲಿಮ್ ಲೋಕದ ಧರ್ಮಗುರು ಎನ್ನುವುದನ್ನು ಅನೇಕ ಮುಸ್ಲಿಮರು ನಂಬಿದ್ದರು. ಆದರೆ ತುರ್ಕಿಯನ್ನು ಖಲೀಫನಿಂದ ಬಿಡುಗಡೆಗೊಳಿಸಿ ತನ್ನ ದೇಶವನ್ನು ಮುಸ್ಲಿಮ್ ಕಂದಾಚಾರಗಳಿಂದ ವಿಮುಕ್ತಗೊಳಿಸಿ ಆಧುನಿಕ ರಾಷ್ಟ್ರವನ್ನಾಗಿಸಲು ಕಮಾಲ್‌ಪಾಷಾ ಅನೇಕ ಪ್ರಬಲ ಕ್ರಮಗಳನ್ನು ಕೈಗೊಂಡ. ಆದರೆ ತುರ್ಕಿಯು ಒಂದು ಸ್ವತಂತ್ರ ಸ್ವಾಭಿಮಾನ ಸಂಪನ್ನವಾದ ರಾಷ್ಟ್ರವಾಗಿ ಬೆಳೆಯುವುದನ್ನು ಬ್ರಿಟಿಷರು ಸಹಿಸಲಿಲ್ಲ. ಕಮಾಲ್ ಪಾಷನ ವಿರುದ್ಧವಾಗಿ ಖಲೀಫನನ್ನು ಎತ್ತಿ ಹಿಡಿಯುವ ಪಿತೂರಿಯನ್ನು ಬ್ರಿಟಿಷರು ನಡೆಸತೊಡಗಿದರು. ಆಗಾಖಾನನನ್ನು ಪುಸಲಾಯಿಸಿ ಖಲೀಫನಿಗೆ ಬೆಂಬಲವಾಗಿ ನಿಲ್ಲಿಸಿದರು. ಇದು ತುರ್ಕರನ್ನು ಒಡೆಯುವ ಬ್ರಿಟಿಷ್ ತಂತ್ರವಾಗಿತ್ತು.

ಈ ಎಲ್ಲಾ ರಾಜಕೀಯ ಬೆಳವಣಿಗೆಯನ್ನು ಒಲ್ಲದ ಭಾರತೀಯರ ಮುಸಲ್ಮಾನರು ತುರ್ಕಿಯ ಒಟ್ಟೋಮನ್ ಸಾಮ್ರಾಜ್ಯದ ದೊರೆ ಖಲೀಫನ ಪರವಾಗಿಯೂ ಮಿತ್ರರಾಷ್ಟ್ರಗಳ ವಿರುದ್ಧವಾಗಿಯೂ (ವಿಶೇಷವಾಗಿ ಬ್ರಿಟನ್ನಿನ ವಿರುದ್ಧವಾಗಿ) ಒಂದು ಆಂದೋಲನವನ್ನು ನಡೆಸಿದರು. ಈ ಆಂದೋಲನವೇ ಖಿಲಾಫತ್ ಚಳವಳಿ, ತುರ್ಕಿಯ ಖಲೀಫನ ಸಾಮ್ರಾಜ್ಯ ನಾಮಾವಶೇಷವಾಗುವುದನ್ನರಿತ ಭಾರತೀಯ ಮುಸ್ಲಿಮರ ಮನಸ್ಸಿಗೆ ಅಸಹನೀಯ ಅಘಾಥವಾಗಿತ್ತು. ಒಂದು ಕಡೆ ಖಲೀಫನ ಸಾಮ್ರಾಜ್ಯದ ವಿಚ್ಛೇದನ ಇನ್ನೊಂದೆಡೆ ಖಲೀಫನ ಪದಚ್ಯುತಿ. ಈ ಸಂದರ್ಭದಲ್ಲಿ ಖಲೀಫನ ರಾಜಪೀಠವನ್ನಾದರೂ ಉಳಿಸಬೇಕೆಂಬುದು ಭಾರತೀಯ ಮುಸ್ಲಿಮರ ದೂರದ ಆಸೆಯಾಗಿತ್ತು. ಅದಕ್ಕಾಗಿ ಬ್ರಿಟಿಷ್ ಸರಕಾರವನ್ನು ಒತ್ತಾಯಿತೊಡಗಿತು. ಅನಂತರ ಬೆದರಿಕೆ ಹಾಕಲು ಪ್ರಾರಂಭಿಸಿದರು. (ಆದರೆ ಮುಂದೆ

ತುರ್ಕಿಯ ಮುಸಲ್ಮಾನರೇ ಖಲೀಪನನ್ನು ಅವನ ಪೀಠದಿಂದ ಉಚ್ಚಾಟಿಸಿದರು ಎಂಬುದನ್ನು ಮರೆಯಬಾರದು) ಅಂತೂ ಭಾರತದ ಮುಸ್ಲಿಮರಿಗೆ ಈಗ ಬ್ರಿಟೀಷ್ ಮೇಲೆ ಕ್ರೋಧ ಬೆಳೆಯಲಾರಂಭಿಸಿತು. ಅದೇ ತಿಂಗಳಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಖಿಲಾಫತಕ್ ಅಧಿವೇಶನ ನಡೆದು, ಗಾಂಧೀಜಿಯವರನ್ನು ಅವರ ಅಧ್ಯಕ್ಷರನ್ನಾಗಿ ಆರಿಸಲಾಯಿತು.

ಅಸಹಕಾರ ಚಳುವಳಿ

ಅಸಹಕಾರ ಚಳುವಳಿ ಅತ್ಯಲ್ಪ ಕಾಲ ನಡೆಯಿತು. ಅದರ ಯಶಸ್ಸು ಕೂಡ ಅತ್ಯಂತ ಸೀಮಿತವಾಗಿತ್ತು. ಕಲ್ಕತ್ತ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸುವುದಕ್ಕಿಂತ ಒಂದು ತಿಂಗಳು ಮೊದಲೇ ೧೯೨೦ ಆಗಸ್ಟ್ ಒಂದರಂದು ಗಾಂಧೀಜಿಯವರು ಅದನ್ನು ತಾವೇ ಸ್ವತಃ ಆರಂಭಿಸಿದರು. ಅವರಿಗೆ ಅಸಹಕಾರವು ಅಖಂಡ ನಂಬಿಕೆಯ ವಿಷಯವಾಗಿತ್ತು. ಕಲ್ಕತ್ತ ಮತ್ತು ನಾಗಪುರ ಅಧಿವೇಶನಗಳಲ್ಲಿ ಗಾಂಧೀಜಿಯವರು ಮಂಡಿಸಿದ ಕಾಂಗ್ರೆಸ್ ಸಂಸ್ಥೆಯು ಸಂಪೂರ್ಣವಾಗಿ ಅವರ ನಿಯಂತ್ರಣದಲ್ಲಿತ್ತು. ಅಹ್ಮದಾಬಾದ್ ಅಧಿವೇಶನದಲ್ಲಿ ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ಇನ್ನಷ್ಟು ತೀವ್ರವಾಗಿ ಮುಂದುವರಿಸುವ ತನ್ನ ದೃಢ ನಿರ್ಧಾರವನ್ನು ಕಾಂಗ್ರೆಸ್ ಪ್ರಕಟಿಸಿತು.

೧೯೨೨ರ ಆರಂಭದಲ್ಲಿ ಗಾಂಧೀಜಿ ಗುಜರಾತಿನ ಬಾರ್ದೋಲಿಯಲ್ಲಿ ಕರ ನಿರಾಕರಣೆ ಚಳುವಳಿಯನ್ನು ನಡೆಸಲು ನಿರ್ಧರಿಸಿದರು. ಅದೇ ವೇಳೆ ವೈಸರಾಯ್‌ಗೆ ಬರೆದ ಒಂದು ಪ್ರತದಲ್ಲಿ, ಸರಕಾರವು ಭಾರತದ ಜನತೆಗೆ ಮಣಿಯದಿದ್ದಲ್ಲಿ 'ಉಗ್ರವಾದ ಕಾಯ್ದೆ ಭಂಗ' ಚಳುವಳಿಯನ್ನು ಕೈಗೊಳ್ಳುವುದಾಗಿ ಘೋಷಿಸಿದರು. ಆದರೆ ಸಂಯುಕ್ತ ಪ್ರಾಂತ್ಯಗಳ (ಉತ್ತ್ರ ಪ್ರದೇಶ) ಚೌರಿಚೌರಾ ಎಂಬ ಹಳ್ಳಿಯಲ್ಲಿ ಪೊಲೀಸರ ಮೇಳ ಜನತೆ ನಡೆಸಿ ಸಾಮೂಹಿಕ ಹಿಂಸಾಚಾರದಿಂದ ನೊಂದ ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ತಕ್ಷಣ ನಿಲ್ಲಿಸಿ ಬಿಟ್ಟರು. ದೇಶದ ಜನರ ಮೇಲೆ ಅವರ ಪ್ರಭಾವ ದುರ್ಬಲವಾಗಿದೆಯೆಂದು ಮನಗಂಡ ಸರಕಾರ ಅವರನ್ನು ೧೯೨೨ ಮಾರ್ಚ್‌ನಲ್ಲಿ ಬಂಧಿಸಿ ಆರು ವರ್ಷಗಳ ಕಾಲ ಸೆರೆಮನೆ ವಾಸವನ್ನು ವಿಧಿಸಿತು.

ಅಸಹಕಾರ ಚಳವಳಿಯ ವೇಳೆ ಬ್ರಿಟಿಷ್ ಸರಕಾರದ ವಿರುದ್ಧ ಬಳಸಿದ ಪ್ರಮುಖ ಆಯುಧವೆಂದರೆ ಶಾಸನಸಭೆ, ನ್ಯಾಯಾಲಯ ಹಾಗೂ ಶಿಕ್ಷಣ ಸಂಸ್ಥೆಗಳ ಬಹಿಷ್ಕಾರ, ಕಾಂಗ್ರೆಸ್ ಅಭ್ಯರ್ಥಿಗಳು ಚುನಾವಣೆಗಳಲ್ಲಿ ಸ್ಪರ್ಧಿಸದ ಕಾರಣ ೧೯೧೯ರ ಭಾರತ ಸರ್ಕಾರ ಕಾಯಿದೆಯನ್ವಯ ರಚನೆಯಾದ ಹೊಸ ಶಾಸನ ಸಭೆಗಳಿಗೆ ಕಾಂಗ್ರೆಸ್ಸೇತರ ಅಭ್ಯರ್ಥಿಗಳೇ ಆಯ್ಕೆಯಾದರು. ಮತದಾರರು ಮತ ಚಲಾಯಿಸುವಂತೆ ತಡೆಯುಷ್ಟು ಕಾಂಗ್ರೆಸ್ ಬಲಶಾಲಿಯಾಗಿರಲಿಲ್ಲ. ಏನಿದ್ದರೂ ಶಾಸನ ಸಭೆಗಳು ತಮ್ಮ ಕಾರ್ಯನಿರ್ವಹಿಸಿದವು ಯಾವ ರೀತಿಯ ಸಾಂವಿಧಾನಿಕ ಬಿಕ್ಕಟ್ಟು ತಲೆದೋರಲಿಲ್ಲ. ಆದರೆ ಈ ಹೊಸಶಾಸನ ಸಭೆಗಳು ಎಲ್ಲಾ ಮತದಾರರ ನೈಜ ಪ್ರಾತಿನಿಧಿಕ ಸಭೆಗಳೆಂದು ಹೇಳುವುದು ಸರಿಯಲ್ಲ. ಎಲ್ಲ ನ್ಯಾಯವಾದಿಗಳು ಎಲ್ಲಾ ಕಕ್ಷಿಗಾರರೂ ಸಾಮೂಹಿಕವಾಗಿ ನ್ಯಾಯಾಲಯಗಳನ್ನ

ಬಹಿಷ್ಕರಿಸಲಿಲ್ಲ. ಹೊಸ ಶಾಸನಸಭೆಗಳನ್ನು ಉದ್ಘಾಟಿಸಲು ವೇಲ್ಸ್‌ನ ಯುವರಾಜ ಪ್ರಯೋಜನವೇನು ಲಭಿಸಲಿಲ್ಲ. ಶಾಲೆ, ಕಾಲೇಜುಗಳ ಬಹಿಷ್ಕಾರ ಕೂಡ ಪರಿಣಾಮಕಾರಿಯಾಗಿರಲಿಲ್ಲ. ದೇಶದ ಹಲವು ಭಾಗಗಳಲ್ಲಿ ಜನತೆ ಅಹಿಂಸಾ ಮಾರ್ಗವನ್ನು ಉಲ್ಲಂಘಿಸಿದರೆನ್ನುವುದು ಗಾಂಧೀಜಿಯವರನ್ನು ಬೇಸರಕ್ಕೀಡು ಮಾಡಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರ ಪಾತ್ರ

ಭಾರತದ ರಾಷ್ಟ್ರಪೀತ ಮಹಾತ್ಮ ಗಾಂಧೀಜಿಯವರು ಪೋರ ಬಂದರಿನಲ್ಲಿ ಜನಿಸಿ ದಕ್ಷಿಣ ಆಫ್ರಿಕಾದಲ್ಲಿ ಉನ್ನತ ವ್ಯಾಸಂಗವನ್ನು ಮುಗಿಸಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ವರ್ಣಭೇದ ನೀತಿಯ ವಿರುದ್ಧ ಹೋರಾಟ ಮಾಡಿ ದಕ್ಷಿಣ ಆಫ್ರಿಕಾದಲ್ಲಿ ಸ್ವಾತಂತ್ರ್ಯದ ಕಲ್ಪನೆ ಮೂಡಿಸಿ ಸ್ವಾತಂತ್ರ್ಯ ದೊರಕುವಂತೆ ಮಾಡಿದರು ಇದರಿಂದ ಸ್ಫೂರ್ತಿ ಪಡೆದು ಭಾರತದಲ್ಲಿ ನಡೆಯುತ್ತಿದ್ದ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಹೋರಾಟ ಮಾಡಲು ಅಣಿಯಾದರು ಗಾಂಧೀಜಿವರು ೧೯೨೦ರ ಅಸಹಕಾರ ಚಳುವಳಿಯ ಮೂಲಕ ಭಾರತದಲ್ಲಿ ರಾಷ್ಟ್ರೀಯ ಹೋರಾಟವನ್ನು ಬಲಪಡಿಸಿತು ಈ ಚಳುವಳಿಯಲ್ಲಿದ್ದ ಖಾದಿ ಉಪಯೋಗ ಮತ್ತು ಸ್ವ-ದೇಶಿ ಮುಂದಿನ ಚಳುವಳಿಗೆ ನಾಂದಿಯಾಯಿತು. ಅದೇ ರೀತಿ ಗಾಂಧೀಜಿಯವರ ಕರೆಕೊಟ್ಟ ಕಾಯ್ದೆ ಭಂಗ ಚಳುವಳಿಯ ಮೂಲಕ ಬ್ರಿಟೀಷ್ ಕಾನೂನು ಕಾಯಿದೆಗಳನ್ನು ಭಂಗ ಮಾಡುವ ಅದೇ ರೀತಿಯಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಕೈಗೊಂಡು ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹತ್ತಿಸಿದರು ಅದೇ ರೀತಿ ದುಂಡು ಮೇಜಿನ ಪರಿಷತ್‌ಗಳಲ್ಲಿ ಭಾರತೀಯ ರಾಷ್ಟ್ರೀಯತೆಯನ್ನು ಎತ್ತಿ ಹಿಡಿದರು ಹೀಗೆ ಗಾಂಧೀಜಿಯವರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮದೇ ರೀತಿಯಾದ ಪಾತ್ರವನ್ನು ವಹಿಸಿದರು. ಭಾರತದ ಸ್ವಾತಂತ್ರ್ಯಕ್ಕೆ ಕೊಡುಗೆ ನೀಡಿದರು.

ದುಂಡುಮೇಜಿನ ಪರಿಷತ್ತುಗಳು

ದುಂಡು ಮೇಜಿನ ಪರಿಷತ್ತುಗಳು ಆಧುನಿಕ ಭಾರತದ ಸಂವಿಧಾನಾತ್ಮಕ ಬೆಳವಣಿಗೆಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿವೆ. ಈ ಸಮ್ಮೇಳನಗಳು ಸಂಘಟನೆಯಾಗಲು ಅನೇಕ ರಾಜಕೀಯ ಪರಿಸ್ಥಿತಿಗಳು ಕಾರಣವಾದವೆಂಬುದು. ಪ್ರಸ್ತುತ ಗಮನಾರ್ಹವಾಗಿದೆ. ೧೯೨೮ ಡಿಸೆಂಬರ್‌ನಲ್ಲಿ ಮೋತಿಲಾಲ್ ನೆಹರೂ ವರದಿಯನ್ನು ಸರ್ವಪಕ್ಷಗಳ ಸಭೆಯು ಅಂಗೀಕರಿಸಿದರು ಕೂಡಾ ಮುಸ್ಲಿಂ ಲೀಗ್ ಅದನ್ನು ವಿರೋಧಿಸಿತು. ಈ ಸಂದರ್ಭದಲ್ಲಿ ಮಹಮ್ಮದ್ ಆಲಿ ಜಿನ್ನಾರವರು ೧೪ ಅಂಶಗಳನ್ನೊಳಗೊಂಡ ಒಂದು ಪ್ರಾಣಾಳಿಕೆಯನ್ನು ಮುಂದಿಟ್ಟಾಗ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಅದನ್ನು ತಿರಸ್ಕರಿಸಿತು. ೧೯೨೯ರಲ್ಲಿ ಗ್ರೇಟ್ ಬ್ರಿಟನ್ನಿನಲ್ಲಿ ನಡೆದ ಮಹಾಚುನಾವಣೆಯಲ್ಲಿ ಲೇಬರ್ ಪಕ್ಷವು ಅಧಿಕಾರವನ್ನು ಸ್ಥಾಪಿಸಿದಾಗ ಭಾರತದ ಬಗ್ಗೆ ರಾಜಕೀಯ ಸಹಾನುಭೂತಿ ಮತ್ತು ಕಾಳಜಿಯನ್ನು ಹೊಂದಿದ್ದ ರ್‍ಯಾಮಸೆ ಮ್ಯಾಕಂ ಡೋನಾಲ್ಡ್‌ರವರು ಪ್ರಧಾನಮಂತ್ರಿಯಾಗಿ ಅಧಿಕಾರವನ್ನು ಸ್ವೀಕರಿಸಿ ಕಾಮನ್‌ವೆಲ್ತ್ ಕಾರ್ಮಿಕ ಪಕ್ಷಗಳ ಸಮ್ಮುಖದಲ್ಲಿ ಕಾಮನ್‌ವೆಲ್ತ್ ಒಕ್ಕೂಟಕ್ಕೆ ಇನ್ನೊಂದು ರಾಷ್ಟ್ರವು ಸೇರಲಿದೆ. ಆ ರಾಷ್ಟ್ರವೇ ಭಾರತ ಎಂಬುದಾಗಿ ತಿಳಿಸಿದರು. ಗ್ರೇಟ್ ಬ್ರಿಟನ್ನಿನ ಪ್ರಧಾನಿಯ ಈ

ಘೋಷಣೆಯು ಭಾರತೀಯರಲ್ಲಿ ಆಶಾಭಾವನೆಯನ್ನು ಮೂಡಿಸಿತು. ರ್‍ಯಾಮಸೆ ಮ್ಯಾಕ್ ಡೋನಾಲ್ಡ್‌ರು ಭಾರತದ ವೈಸ್‌ರಾಯ್‌ರಾಗಿದ್ದ ಲಾರ್ಡ್ ಇರ್ವಿನ್ನರೊಂದಿಗೆ ಚರ್ಚೆಗಳನ್ನು ನಡೆಸಿದರು. ೧೯೨೯ರ ಅಕ್ಟೋಬರ್ ೩೧ ರಂದು 'ಗ್ರೇಟ್ ಬ್ರಿಟನ್ನಿನ ಚಕ್ರವರ್ತಿಯು ಸೈಮನ್ ಆಯೋಗದ ಶಿಫಾರಸ್ಸುಗಳನ್ನು ಒಪ್ಪಿ ಅವರ ಸರ್ಕಾರವು ಭಾರತೀಯ ರಾಜ್ಯಗಳು ಮತ್ತು ಬ್ರಿಟೀಷ್ ಪ್ರಾಂತ್ಯಗಳ ಪ್ರತಿನಿಧಿಗಳು ಒಂದು ಸ್ಪಷ್ಟವಾದ ನಿರ್ಧಾರಕ್ಕೆ ಬರಲು ಎಲ್ಲರನ್ನೊಳಗೊಂಡ ಒಂದು ಸಮ್ಮೇಳನವನ್ನು ಸಂಘಟಿಸಲು ಇಚ್ಚಿಸಿದೆ' ಎಂದು ಘೋಷಿಸಿದರು. ಭಾರತದಲ್ಲಿ ಉದ್ಭವಿಸಿದ್ದ ಗ್ರೇಟ್ ಬ್ರಿಟನ್ ಸರ್ಕಾರದ ವಿರುದ್ಧ ಭಾವನೆ ಮತ್ತು ವ್ಯಾಪಾರದ ಹಿತರಕ್ಷಣೆಗಾಗಿ ದುಂಡು ಮೇಜಿನ ಸಮ್ಮೇಳನಗಳನ್ನು ಸಂಘಟಿಸಲಾಯಿತೆಂದು ಊಹಿಸಬಹುದಾಗಿದೆ.

ಲಾರ್ಡ್ ಇರ್ವಿನ್ನರ ಘೋಷಣೆಯು ಅಸ್ಪಷ್ಟವಾದುದರಿಂದ ಮತ್ತು ಡೊಮೆನಿಯನ್ ಸ್ಥಾನಮಾನಗಳ ಬಗ್ಗೆ ಯಾವುದೇ ಹೇಳಿಕೆಗಳು ಕಂಡು ಬರದಿದ್ದು ಭಾರತೀಯರಿಗೆ ನಿರಾಶೆಯನ್ನುಂಟು ಮಾಡಿತು. ಈ ಘೋಷಣೆಯ ಹೊರಬಿದ್ದ ೨೪ ಗಂಟೆಗಳ ತರುವಾಯ ಕಾಂಗ್ರೆಸ್ಸಿನ ಮುಖಂಡರು ದುಂಡು ಮೇಜಿನ ಸಮ್ಮೇಳನಗಳ ಮುಖ್ಯ ಉದ್ದೇಶ ಡೊಮಿನಿಯನ್ ಸ್ಥಾನಮಾನಗಳಿಗಷ್ಟೇ ಸೀಮಿತವಾಗದೆ ಡೊಮಿನಿಯನ್ ಸಂವಿಧಾನವನ್ನು ರಚಿಸಬೇಕೆಂದು ಒಂದು ಹೇಳಿಕೆಯನ್ನು ನೀಡಿದರು. ಕಾಂಗ್ರೆಸ್ಸಿನ ಬಹುತೇಕ ಮುಖಂಡರು ಈ ಹೇಳಿಕೆಗೆ ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿ ಲಾರ್ಡ್ ಇರ್ವಿನ್ನರ ಘೋಷಣೆಯನ್ನು ಒಂದು ಸುಳ್ಳಿನ ಸರಮಾಲೆಯಂದು ಕರೆದರು. ಗ್ರೇಟ್ ಬ್ರಿಟನ್ ಸರ್ಕಾರದ ಬಗ್ಗೆ ಸಂಶಯ ವ್ಯಕ್ತಪಡಿಸಿದರು. ಇದರಿಂದಾಗಿ ಈ ಇಬ್ಬರೂ ಮುಖಂಡರೂ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಗೆ ತಮ್ಮ ರಾಜಿನಾಮೆಯನ್ನು ಸಲ್ಲಿಸಿದರು.

೧೯೨೯ರ ಡಿಸೆಂಬರ್ ೨೩ರಂದು ಮಹಾತ್ಮ ಗಾಂಧಿಯವರು ಲಾರ್ಡ್ ಇರ್ವಿನ್ನರನ್ನು ದೆಹಲಿಯಲ್ಲಿ ಭೇಟಿ ಮಾಡಿ ಸರ್ಕಾರವು ದುಂಡು ಮೇಜಿನ ಸಮ್ಮೇಳನವನ್ನು ಸಂಘಟಿಸುವ ಪ್ರಯತ್ನದಲ್ಲಿ ತೊಡಗಿರುವುದನ್ನು ಶ್ಲಾಘಿಸಿದರು. ಈ ಸಭೆಯಲ್ಲಿ ಪಂಡಿತ ಮೋತಿಲಾಲ್ ನೆಹರೂ, ಸರ್ದಾರ್ ವಲ್ಲಭಬಾಯಿ ಪಟೇಲ್, ಮಹಮ್ಮದ್ ಆಲಿ ಜಿನ್ನಾ ಮೊದಲಾದವರು ಭಾಗವಹಿಸಿದ್ದರು. ಈ ಸಭೆಯಲ್ಲಿ ವೈಸ್‌ರಾಯ್ ಭವಿಷ್ಯದ ಸಂವಿಧಾನದ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಕೊಡುವುದು ತಮ್ಮಿಂದ ಸಾಧ್ಯವಾಗದು ಎಂಬ ತಮ್ಮ ಅಸಹಾಯಕತೆಯನ್ನು ತೋರ್ಪಡಿಸಿದರು. ಹೀಗಾಗಿ ಈ ಅನಿಶ್ಚಯತೆಯಿಂದಾಗಿ, ಮಾತುಕತೆಗಳಿಂದ ಮುಖಂಡರು ಭ್ರಮನಿರಸರಾಗಿ ಹಿಂದುರುಗಿದರು.

ಕ್ವಿಟ್ ಇಂಡಿಯಾ ಚಳುವಳಿ (೧೯೪೨)

ಭಾರತದ ಸ್ವಾತಂತ್ರ್ಯವನ್ನು ಪಡೆಯಲು ಭಾರತೀಯರು ಮಾಡಿದ ಪ್ರಯತ್ನವೇ ವಿಫಲವಾಗಿ ಗಾಂಧೀಜಿಯವರ ನಾಯಕತ್ವದಲ್ಲಿ ಎಲ್ಲಾ ಜನರ ಬೆಂಬಲದೊಂದಿಗೆ ಒಂದು ಚಳುವಳಿಯನ್ನು ಮಾಡಿ ಬ್ರಿಟಿಷರನ್ನು ಭಾರತದಿಂದ ಓಡಿಸಬೇಕೆಂಬುದರ ಕಾರಣದಿಂದ ನಡೆದ ಕಥಾ

ವಸ್ತುವನ್ನು ದೃಷ್ಟಿಯಲ್ಲಿಟ್ಟುಕೊಂಡು ಗ್ರಾಮೀಣ ಪ್ರದೇಶದಲ್ಲಿ ನಡೆದ ಭಾರತದ ಸ್ವಾತಂತ್ರ್ಯ ಚಳುವಳಿಯನ್ನೇ ಬಸವರಾಜ ಕಟ್ಟಿಮನಿಯವರು ಮಾಡಿಮಡಿದವರು ಎಂಬ ಕೃತಿಯಲ್ಲಿ ಗಾಂಧೀಜೀಯವರ ಮಾಡುಇಲ್ಲದೆ ಮಡಿ ಎಂಬ ಕರೆಗೆ ಭಾರತೀಯ ಗ್ರಾಮೀಣ ಅಂದರೆ ಕರ್ನಾಟಕದ ಬೆಳಗಾವಿ ಜನತೆ ಯಾವ ರೀತಿ ಪ್ರತಿಕ್ರಿಯಿಸಿದರು ಎಂಬುದರ ತೌಲನಿಕ ಅಧ್ಯಯನ ಈ ಅಧ್ಯಯನದ ವಸ್ತುವಾಗಿದೆ.

ಭಾರತದಲ್ಲಿ ಸಮಾಜವಾದ ಮತ್ತು ಸ್ವತಂತ್ರ ಚಳುವಳಿ

ಕಾರ್ಮಿಕರ ಶೋಷಣೆಯನ್ನು ಹೊರಪಡಿಸಲು ಪ್ರಾರಂಭವಾದ ಒಂದು ತತ್ವವೆಂದರೆ ಸಮಾಜವಾದ. ಬ್ರಿಟಿಷರು ಮತ್ತು ಸರ್ಕಾರ ಯಾವುದೇ ರೀತಿಯಲ್ಲಿ ಕಾರ್ಮಿಕರ ಸಮಸ್ಯೆಗಳನ್ನು ಹೋಗಲಾಡಿಸುವಲ್ಲಿ ಯಾವುದೇ ಪ್ರಯತ್ನ ಮಾಡದೇ ಇದ್ದು ಈ ತತ್ವ ಉಗಮಕ್ಕೆ ಕಾರಣ. ೧೯೧೭ರ ರಷ್ಯಾಕ್ರಾಂತಿಯ ನಂತರ ಭಾರತದ ಬುದ್ಧಿ ಜೀವಿಗಳು ಕಾರ್ಮಿಕರು ಮತ್ತು ರಾಷ್ಟ್ರೀಯ ನಾಯಕರು ಕಾರ್ಮಿಕರ ಬಗ್ಗೆ ಯೋಚಿಸಲು ಪ್ರಾರಂಭಿಸಿದರು. ಗಾಂಧೀಜಿಯವರು ತಮ್ಮ ಹಲವು ಪರಿತ್ಯಾಗಗಳು ಮತ್ತು ಅಸಹಕಾರ ಚಳುವಳಿಯ ಮೂಲಕ ಸ್ವಾತಂತ್ರ್ಯ ಚಳುವಳಿಗೆ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರನ್ನು ಕರೆತಂದರು. ಭಾರತೀಯರಲ್ಲಿದ್ದ ನಿರುದ್ಯೋಗ ಸಮಸ್ಯೆ ಇವರ ಬಗ್ಗೆ ತೀವ್ರ ಯೋಚನೆ ಮಾಡುವಂತೆ ಮೂಡಿತು. ಲಾಲಹರದಯಾಳರವರು ಕಾರ್ಲ್‌ಮಾರ್ಕ್ಸ್‌ರವರ ಜೀವನ ಚರಿತ್ರೆ ಬರೆದರು. ತಿಲಕ್‌ರ ಕೇಸರಿ, ಹಾರ್ನಿಮದರ್ ಬಾಂಬೆಕ್ರಾನಿಕಲ್, ಮಾಡರ್ನ್‌ರಿವ್ಯೂ ಮುಂತಾದವುಗಳ ರಷ್ಯಾಕ್ರಾಂತಿ, ಲೆನಿವ್ ಮತ್ತು ಸಮಾಜವಾದದ ಬಗ್ಗೆ ಭಾರತೀಯರಲ್ಲಿ ಆಸಕ್ತಿ ಹುಟ್ಟಿಸಿದವು.

ಎಂ.ಎನ್.ರಾಯ್‌ರವರು ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷವು ಭಾರತದಲ್ಲಿ ಕೆಲಸಮಾಡಲು ಇವರು ರಷ್ಯಾಖ್ಕೆ ಭೇಟಿ ನೀಡಿದ್ದು ಕಾರಣವಾಯಿತು. ೧೯೨೩ರಲ್ಲಿ ಎಸ್.ಎ.ಡಾಂಗೆ ಸೋಷಿಯಲಿಷ್ಟ್ ವಾರಪತ್ರಿಕೆ ಪ್ರಾರಂಭವಾಯಿತು.

ಸಮಾಜವಾದದ ತತ್ವದ ಮೇಲೆ ೧೯೧೮ರಲ್ಲಿ ಕವಾನ್ ಸಭಾ ರೈತ ನಡೆಯಿತು. ಲಾಲಾ ಲಜಪತ್ ಪೂರ್ಣ ನಂಬಿಕೆಯಿಟ್ಟು ಕೊಂಡಿದ್ದಾರೆ. ಮೋತಿಲಾಲ್ ನೆಹರೂ ಜವಾಹರ್‌ಲಾಲ್ ನೆಹರುರವರು ರಷ್ಯಾಕ್ಕೆ ಭೇಟಿನೀಡಿ, ಸೊವಿಯತ್ ರಷ್ಯಾ ಎಂಬ ಪುಸ್ತಕ ಬರೆದರು ೧೯೨೯ರ ಲಾಹೋರ್ ಅಧಿವೇಶನದಲ್ಲಿ ತಾವು ಸಮಾಜವಾದಿ ಎಂದು ಜವಾಹರ್‌ಲಾಲ್ ನೆಹರು ಘೋಷಿಸಿಕೊಂಡರು. ಜಯಪ್ರಕಾಶ್ ನಾರಾಯಣ್, ನರೇಂದ್ರರೆಟ್ ಅಚ್ಯುತ ಪಾರ್ವತಸೇನ್‌ರವರು ಸಮಾಜವಾದಿ ನಾಯಕರು.

೧೯೨೪ರ ನಂತರ ಸಮಾಜವಾದರು ಭಾರತ ಕಮ್ಯೂನಿಸ್ಟ್ ಪಕ್ಷದ ಮೂಲಕ ಬೆಳೆಯಿತು. ಈ ಕಾರ್ಯಗಳಲ್ಲಿ ಪಾಮೆದತ್ ಪ್ರಮುಖ ಪಾತ್ರ ವಹಿಸಿದರು. ಬೊಂಬಾಯಿ, ಕಲ್ಕತ್ತಾ ಕಾರ್ಮಿಕ ಚಳುವಳಿ ನಡೆದು ಅನೇಕರು ಬಂಧಿಸಲ್ಪಟ್ಟ ಸೆರೆವಾಸಿಗಳಾದರು. ಸ್ಥಾಪನೆಯವನು ಕಾರ್ಮಿಕರು ಮತ್ತು ಕೃಷಿಕರ ಒಕ್ಕೂಟ ಪ್ರಾರಂಬಿಸಿದನು. ಅನೇಕರನ್ನು

ರಷ್ಯಾಕ್ಕೆ ನಿಯೋಗ ಸದಸ್ಯರಾಗಿ ಕಳುಹಿಸಿದರು.

ಇವಲ್ಲದೇ ಸಮಾಜವಾದಿಗಳು ಅನೇಕ ಕಾರ್ಯಗಳಲ್ಲಿ ಭಾಗವಹಿಸಿದ್ದರು, ಅವುಗಳೆಂದರೆ ಕಾನ್ಪುರ ಪಿತೂರಿ ನಡೆಸಿರಬೇಕೆಂಬ ನೆಪವೊಡ್ಡಿ ಸರ್ಕಾರ ಮೊಕದ್ದಮೆ ಹೂಡಿದ್ದು, ಪ್ರಮುಖ ಆಚಾರಿತಲ್ಲದ ಡಾಂಗೆ, ಮಖ್ದಾತರ್ ಅಹ್ಮದ್ ಉಸ್ಥಾನಿ ಮತ್ತು ನಳಿನಿ ಗುಪ್ತರಿಗೆ ನಾಲ್ಕು ವರ್ಷ ಸಜೆ ಆಯಿತು. ಮೀರತ್ ಪಿತೂರಿ ಹಿನ್ನೆಲೆಯಲ್ಲಿ ಡಾಂಗೆ, ಹಬಿನನ್‌ಕೊಳಗೊಂಡು ೩೧ಜರನ್ನು ೧೯೨೯ರಲ್ಲಿ ಸರ್ಕಾರ ಸೆರೆಹಿಡಿಯಿತು. ೧೯೩೩ರಲ್ಲಿ ಬಿಡುಗಡೆ ಮಾಡಿತು. ೧೯೩೦ ರಿಂದ ೧೯೩೫ರವರೆಗೆ ಕಮ್ಯೂನಿಷ್ಟ್ ಚಟುವಟಿಕೆಗಳು ಸ್ಥಾಪಿತವಾಗಿದ್ದವು.

೧೯೩೪ರಲ್ಲಿ ಕಾಂಗ್ರೆಸ್ ಸೋಷಿಯಲಿಷ್ಟ್ ಪಕ್ಷ ಸ್ಥಾಪನೆಯಾಯಿತು. ಬಿಹಾರ ಬೊಂಬಾಯಿ, ಪಟ್ನಾದಲ್ಲಿ ಪ್ರಾರಂಭಗೊಂಡು, ಜಯಪ್ರಕಾಶ್ ನಾರಾಯಣ್, ರಾಮ್‌ವನ್ಸೋಹರ್‌ಲೋಡಿಯಾ ಕಮಲಾ ದೇವಿ ಚಟ್ಟೋಪಾಧ್ಯಾಯ, ಮೀಮಾಮಪಾನಿ, ಎನ್.ಎಂ.ಜೋಷಿ ಮುಂತಾದವರು ಇದನ್ನು ನಡೆಸಿಕೊಂಡು ಹೋದರು ಸಮಾಜವಾದದ ಮೇಲೆ ಜನರ ಸಂಘಟಿಸುವುದು, ಕಾಂಗ್ರೆಸ್ ಗುರಿಗೆ ಜನರನ್ನು ಒಟ್ಟುಗೂಡಿಸುವ ಕೆಲಸಮಾಡಿದರು, ಬೊಂಬಾಯಿಯಲ್ಲಿ ಈ ಪಕ್ಷ ಸಭೆಸೇರಿ ಭಾರತದ ವಿದೇಶಿ ಸಾಲಕಡಿತ, ಕಾರ್ಮಿಕರಿಗೆ ಅಧಿಕಾರ ಹಸ್ತಾಂತರ, ರಾಜ್ಯ ನಿರ್ದೇಶಿತ ಅಭಿವೃದ್ಧಿ ಯೋಜನೆಗಳು. ವಿದೇಶಿ ವ್ಯಾಪಾರದ ಮೇಲೆ ರಾಜ್ಯ ನಿಂತ್ರಣ ಸಹಕಾರಿ ಮತ್ತು ಸಮುದಾಯ ಕೃಷಿ ಕೈಗಾರಿಕೆಗಳ ಸಮಾಜೀಕರಣ, ಜಮೀನ್ದಾರು, ರಾಜರಿಗೆ ಯಾವುದರಲ್ಲಿ ವ್ಯವಸಾನ ನೀಡದಿರುವುದು ಮುಂತಾದುವನ್ನ ತೀರ್ಮಾನಿಸಿದರು. ಇದರಿಂದ ರೈತರ ಚಳುವಳಿಯ ಜೊತೆ ಜೊತೆಗೆ ೭ ಸ್ವಾತಂತ್ರ್ಯದ ಚಳುವಳಿ ನಡೆಯಿತು.[೨]

ಅದೇ ರೀತಿ ಭಾರತದ ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಜಮೀನ್ದಾರರು ಸಾಮಾನ್ಯ ರೈತರ ಮೇಲೆ ನಡೆಸುತ್ತಿದ್ದ ಶೋಷಣೆಯ ವಿರುದ್ಧ ದಂಗೆ ಎದ್ದು ಸ್ವಾತಂತ್ರ್ಯದ ಕಡೆಗೆ ದಾಪುಗಾಲು ಹಾಕಿದ ಕೇರಳ ಕಯ್ಯಾರಿನ ಜನತೆಯ ಕಥಾವಸ್ತುವಿನ ಚಿರಸ್ಮರಣೆಯ ಕಥಾವಸ್ತುವನ್ನು ವಿಮರ್ಶಿಸಿ, ವಿಶ್ಲೇಷಿಸಿ ವಿವರಿಸುವುದೇ ಈ ಸಂಶೋಧನ ಅಧ್ಯಯನದ ವಿಷಯವಸ್ತುವಾಗಿದೆ.

ಭಾರತದ ಸ್ವಾತಂತ್ರ್ಯ ರಾಷ್ಟ್ರೀಯ ಚಳುವಳಿಯಲ್ಲಿ ಸುಭಾಷ್‌ಚಂದ್ರಬೋಸ್‌ರವರ ಪಾತ್ರ

ಬಾಲ್ಯದಲ್ಲಿ ಸುಭಾಸ್‌ಚಂದ್ರಬೋಸ್ ಅವರ ಮೇಲೆ ತಂದೆ ಮತ್ತು ತಾಯಿಯ ಪ್ರಭಾವ ಅಪಾರವಾಗಿತ್ತು. ಅದರಲ್ಲೂ ವಿಶೇಷವಾಗಿ ಅವರಿಗೆ ಧಾರ್ಮಿಕ ಪ್ರವೃತ್ತಿ ತಾಯಿಯಿಂದ ಬಂದಿತ್ತು. ಆದರೆ ಕಟಕ್‌ನ ರೇವನ್‌ಶಾ ಕಾಲೇಜ್ ಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಬೇನೀಮಾಧವ ದಾಸರು ಅವರ ಮೇಲೆ ತಂದೆ ತಾಯಿಗಳಿಗಿಂತಲೂ ಹೆಚ್ಚು ಪ್ರಭಾವ ಬೀರಿದ್ದರು. ಅವರು ಮುಖ್ಯೋಪಾಧ್ಯಾಯರನ್ನು ಹೆಚ್ಚು ಕಡಿಮೆ ದೇವಮಾನವರೆಂದು

ಪೂಜಿಸುತ್ತಿದ್ದರು. ಅವರೆಡೆಗೆ ಬಹಳವಾಗಿ ಆಕರ್ಷಿತರಾಗಿದ್ದರು. ತಾರುಣ್ಯದಲ್ಲಿ ಸ್ವಾಮಿ ವಿವೇಕಾನಂದರ ಜೀವನ ಮತ್ತು ಬೋಧನೆಗಳು ಅವರ ಮೇಲೆ ಪ್ರಭಾವ ಬೀರಿದವು.

ಸುಭಾಷ್‌ಚಂದ್ರಬೋಸ್ ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ಓರ್ವ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಅವರು ಲಂಡನ್ನಿನಲ್ಲಿ ಐ.ಸಿ.ಎಸ್. ಪರೀಕ್ಷೆಯಲ್ಲಿ ನಾಲ್ಕನೇ ಸ್ಥಾನ ಪಡೆದು ಉತ್ತೀರ್ಣರಾದರು. ಆನಂತರ ಸರಕಾರಿ ಹುದ್ದೆಗೆ ನೇಮಕವಾದರೂ ಅದಕ್ಕೆ ರಾಜೀನಾಮೆ ನೀಡಿದರು. ತಾಯ್ನಾಡಿಗೆ ಮರಳಿ ಬಂದ ಅವರು ಚಿತ್ತರಂಜನ್ ದಾಸ್ ಅವರೊಂದಿಗೆ ರಾಜಕೀಯಕ್ಕೆ ಧುಮುಕಿದರು.

ಸುಭಾಷರು ಕ್ರಾಂತಿಕಾರೀ ವಿಚಾರಗಳನ್ನು ಹೊಂದಿದ್ದರು. ಉಗ್ರಗಾಮಿ ರಾಷ್ಟ್ರವಾದಿಗಳೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದರು. ೧೯೨೮ರಲ್ಲಿ ಕಲ್ಕತ್ತದಲ್ಲಿ ನಡೆದ ಕ್ರಾಂಗ್ರೆಸ್ ಅಧಿವೇಶನದಲ್ಲಿ ಅವರು ನೆಹರೂ ವರದಿಯ ಆಧಾರದ ಸ್ವಯಂ ಆಡಳಿತ ಸ್ಥಾನ ಮಾನವ (ಡೊಮಿನಿಯನ್ ಸ್ಟೇಟಸ್) ಬೇಡಿಕೆಯನ್ನ ವಿರೋಧಿಸಿದರು. ಸಂಪೂರ್ಣ ಸ್ವಾತಂತ್ರ್ಯ ಲಭಿಸಬೇಕೆಂದು ಪ್ರಬಲವಾಗಿ ವಾದಿಸಿದರು. ಆದರೆ ಗಾಂಧೀಜಿಯವರ ಧ್ಯೇಯ ಮತ್ತು ರಾಜಕೀಯ ನೀತಿಯನ್ನು ಒಪ್ಪಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಗಾಂಧೀಜಿಯವರು ಲಾರ್ಡ್ ಇರ್ವಿನ್‌ನೊಂದಿಗೆ ಒಪ್ಪಂದ ಮಾಡಿಕೊಂಡಾಗ ಅವರಿಗೆ ತೀರಾ ಅಸಮಾಧಾನವಾಯಿತು. ಸುಭಾಷರು ಕಾಂಗ್ರೆಸ್ಸಿನ ತರುಣ ವಿಭಾಗದ ಪ್ರಮುಖ ವಕ್ತಾರರಾಗಿದ್ದರು.

೧೯೩೮ರಲ್ಲಿ ಹರಿಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಸುಭಾಷ್‌ಚಂದ್ರಬೋಸರು ಅವಿರೋಧವಾಗಿ ಆಯ್ಕೆಯಾದರು. ಕೆಲವು ಪ್ರಮುಖ ನಿರ್ಣಯಗಳು ಈ ಅಧಿವೇಶನದಲ್ಲಿ ಅಂಗೀಕೃತವಾದವು. ಮೊದಲನೆಯದಾಗಿ, ಭಾರತದ ರಾಜ್ಯಗಳಲ್ಲಿ ಜನರ ಆಂದೋಲನಕ್ಕೆ ಕಾಂಗ್ರೆಸ್ಸು ನೈತಿಕ ಬೆಂಬಲವನ್ನು ಸಾರಿತು. ಎರಡನೆಯದಾಗಿ, ಭಾರತವು ಸಾಮ್ರಾಜ್ಯವಾದಿ ಸಮರದಲ್ಲಿ ಪಾಲ್ಗೊಳ್ಳಲೆಂದು ಘೋಷಿಸುವ ನಿರ್ಣಯವೂ ಅಧಿವೇಶನದಲ್ಲಿ ಅಂಗೀಕೃತವಾಯಿತು.

ತ್ರಿಪುರ ಕಾಂಗ್ರೆಸ್ ಅಧಿವೇಶನ

ಸುಭಾಷ್‌ಚಂದ್ರಬೋಸ್ ಮತ್ತು ಗಾಂಧೀಜಿಯವರ ನಡುವೆ ಅನೇಕ ಭಿನ್ನಾಭಿಪ್ರಾಯಗಳು ಬೆಳೆದು ಬಂದುವು. ಮೊದಲನೆಯದಾಗಿ, ಭಾರತವು ಬ್ರಿಟನ್ನಿನೊಂದಿಗೆ ಯಾವುದೇ ರೀತಿಯ ರಾಜೀ ಮಾಡಿಕೊಳ್ಳುವುದನ್ನು ಬೋಸರು ವಿರೋಧಿಸಿದರು. ಇದರಿಂದ ಗಾಂಧೀಜಿಯವರ ನಿಕಟವರ್ತಿಗಳಿಗೆ ತೀವ್ರ ಅಸಮಾಧಾನವಾಯಿತು. ಎರಡನೆಯದಾಗಿ ಬ್ರಿಟನ್ ಮತ್ತು ಜರ್ಮನಿಯ ನಡುವೆ ಆಗುವ ಯುದ್ಧವು ಅನಿವಾರ್ಯವೆಂದು ಬೋಸ್ ಭಾವಿಸಿದರು. ಯುದ್ಧದ ಮೇಲೆ ಬ್ರಿಟನ್ನಿಗೊದಗುವ ಗಂಡಾಂತರವನ್ನು ತನ್ನ ಲಾಭಕ್ಕೆ ಉಪಯೋಗಪಡಿಸಿಕೊಂಡರೆ, ಭಾರತವು ಸ್ವತಂತ್ರವಾಗಲು ಸುಲಭಸಾಧ್ಯವಾಗಬಹುದೆಂದು

ಅವರು ಆಶಿಸಿದರು. ಆದರೆ ಗಾಂಧೀಜಿ ಮತ್ತು ನೆಹರೂರವರು ಬ್ರಿಟನ್ನಿನ ಗಂಡಾಂತರದ ದುರ್ಲಾಭ ಪಡೆಯುವುದನ್ನು ತೀವ್ರವಾಗಿ ವಿರೋಧಿಸಿದರು. ಮೂರನೆಯದಾಗಿ, ಬ್ರಿಟನ್ ಜರ್ಮನ್ ಯುದ್ಧವನ್ನು ನಿರೀಕ್ಷಿಸಿದ ಬೋಸರು ಭಾರತೀಯರನ್ನು ಸ್ವಾತಂತ್ರ್ಯ ಸಮರಕ್ಕೆ ಸಜ್ಜುಗೊಳಿಸಲು ಭಾರತಾದ್ಯಂತ ಬಹಿರಂಗ ಪ್ರಚಾರ ಕೈಗೊಂಡರು. ದೇಶದ ಹಲವು ಪ್ರಾಂತೀಯ ಸರಕಾರಗಳನ್ನು ನಡೆಸುತ್ತಿದ್ದಂತಹ ಗಾಂಧಿವಾದಿಗಳು ಅದನ್ನು ವಿರೋಧಿಸಿದರು. ನಾಲ್ಕನೆಯದಾಗಿ, ಗಾಂಧೀಜಿಯವರು ಉದ್ಯಮೀಕರಣದ ವಿರೋಧಿಯಾಗಿದ್ದರು. ಆದರೆ ಬೋಸರು ಉದ್ಯಮೀಕರಣದ ಆಧಾರದಲ್ಲಿ ದೇಶದ ಆರ್ಥಿಕ ಅಭಿವೃದ್ಧಿಗೆಂದು ವ್ಯಾಪಕ ಯೋಜನೆಯನ್ನು ರೂಪಿಸಿ, ಅದಕ್ಕೋಸ್ಕರ ಒಂದು ರಾಷ್ಟ್ರೀಯ ಯೋಜನಾ ಸಮಿತಿಯನ್ನು ನೇಮಿಸಿದರು.

ಈ ಎಲ್ಲಾ ಭಿನ್ನಾಭಿಪ್ರಾಯಗಳಿಂದಾಗಿ ಕಾಂಗ್ರೆಸ್ಸಿನ ತ್ರಿಪುರ ಅಧಿವೇಶನದಲ್ಲಿ (೧೯೩೯) ಅಧ್ಯಕ್ಷರ ವಿಷಯದಲ್ಲಿ ಬಿಕ್ಕಟ್ಟು ಉಂಟಾಯಿತು. ೧೯೨೦ ರಿಂದ ೧೯೩೮ ರವರೆಗೆ ಕಾಂಗ್ರೆಸ್ ಪಕ್ಷದಲ್ಲಿ ಅಧ್ಯಕ್ಷರ ಚುನಾವಣೆಯು ಕೇವಲ ಒಂದು ಅನಧಿಕೃತ ಆಜ್ಞೆಯಂತಿತ್ತು. ಗಾಂಧೀಜಿಯವರು ಸೂಚಿಸಿದ ಅಭ್ಯರ್ಥಿಗಳೇ ಯಾವಾಗಲೂ ಆಯ್ಕೆಯಾಗುತ್ತಿದ್ದರು. ಬೋಸರನ್ನು ಹರಿಪುರ ಆಜ್ಞೆಯಂತಿತ್ತು. (೧೯೩೮) ಅಧ್ಯಕ್ಷರನ್ನಾಗಿ ಗಾಂಧಿಜಿಯವರು ಆರಿಸಿದ್ದರು. ಅವರಿಗೆ ಎರಡನೆಯ ಬಾರಿ ಈ ಪದವಿಯನ್ನು ನೀಡಲು ಗಾಂಧೀಜಿಯವರು ಸಿದ್ಧರಿರಲಿಲ್ಲ. ಅವರಿಗೆ ಎರಡನಯ ಬಾರಿ ಈ ಪದವಿಯನ್ನು ನೀಡಲು ಗಾಂಧೀಜಿಯವರು ಸಿದ್ಧರಿರಲಿಲ್ಲ. ಬೋಸ್ ಸ್ಪರ್ಧಿಸದಂತೆ ಅವರ ಮನವೊಲಿಸಲು, ಮಾಡಿದ ಪ್ರಯತ್ನಗಳು ವಿಫಲವಾದವು. ಗಾಂಧೀಜಿಯವರು ಪಟ್ಟಾಭಿಸೀತಾರಾಮಯ್ಯನವರನ್ನು ಆರಿಸಿದರು. ಆಗ ಅಷ್ಟೇನೂ ಪ್ರಸಿದ್ಧರಲ್ಲದ ಸೀತಾರಾಮಯ್ಯನವರನ್ನು ಬೋಸರ ವಿರುದ್ಧ ನಿಲ್ಲಿಸಲು ಗಾಂಧೀಜಿಯವರು ತನ್ನ ಸರ್ವಶಕ್ತಿಯನ್ನು ತೊಡಗಿಸಿದರು. ಆದರೆ ಬೋಸರು ೯೫ ಮತಗಳ ಬಹುಮತದಿಂದ ಗೆದ್ದರು. ಇದರಿಂದ ನೊಂದ ಗಾಂಧೀಜಿಯವರು, "ಈ ಸೋಲು ಪಟ್ಟಾಭಿಯವರದಕ್ಕಿಂತಲೂ ಹೆಚ್ಚಾಗಿ ನನ್ನದು." ಎಂದು ಬಹಿರಂಗವಾಗಿ ಹೇಳಿದರು.

ಗಾಂಧೀಜಿಯವರ ಈ ಹೇಳಿಕೆ ಹಲವು ಮಂದಿ ಕಾಂಗ್ರೆಸ್ ನಾಯಕರ ಮೇಲೆ ಪರಿಣಾಮ ಬೀರಿತು. ಅವರು ಬೋಸರನ್ನು ದೂರವಿರಿಸಿ ಗಾಂಧೀಜಿಯವರ ನೇತೃತ್ವದಲ್ಲಿ ವಿಶ್ವಾಸ ಪ್ರಕಟಿಸಿದರು. ೧೯೩೯ ಮಾರ್ಚ್‌ನಲ್ಲಿ ತ್ರಿಪುರಿಯಲ್ಲಿ ಕಾಂಗ್ರೆಸ್ ಅಧಿವೇಶನ ಜರಗಿತು. ಬೋಸ್ ಈ ಅಧಿವೇಶನದ ಅಧ್ಯಕ್ಷರಾಗಿದ್ದರು. ಅಧಿವೇಶನದಲ್ಲಿ, ಗಾಂಧೀಜಿಯವರ ಆಶಯಕ್ಕೆ ಅನುಗುಣವಾಗಿ ಕಾರ್ಯಕಾರಿ ಸಮಿತಿಯನ್ನು ರಚಿಸಬೇಕೆಂದು ಅಧ್ಯಕ್ಷರನ್ನು ವಿನಂತಿಸುವ ಒಂದು ನಿರ್ಣಯವನ್ನು ಅಂಗೀಕರಿಸಲಾಯಿತು. ಆದರೆ ಗಾಂಧೀಜಿಯವರು ಕಾರ್ಯಕಾರಿ ಸಮಿತಿಗೆ ಯಾರ ಹೆಸರನ್ನೂ ಸೂಚಿಸಲು ನಿರಾಕರಿಸಿದರು. ಇದರಿಂದಾಗಿ ೧೯೩೯ ಏಪ್ರಿಲ್‌ನಲ್ಲಿ ಬೋಸರು ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯಿತ್ತರು. ಪ್ರಜಾತಂತ್ರಕ್ಕನುಗುಣವಾಗಿ ಆಯ್ಕೆಯಾಗಿದ್ದ ಅಧ್ಯಕ್ಷರ ಮೇಲೆ ಗಾಂಧಿವಾದಿಗಳು ಒಂದು

ಶರ್ತನ್ನು ವಿಧಿಸಿದ್ದರು. ಅದು ಕಾಂಗ್ರೆಸ್ ಸಂವಿಧಾನಕ್ಕೆ ಸರಿಹೊಂದಿರಲಿಲ್ಲ. ಹೀಗೆ ಈ ಶರ್ತದ ಮೂಲಕ ಅಧ್ಯಕ್ಷರು ರಾಜೀನಾಮೆಯನ್ನು ನೀಡುವಂತೆ ಅವರನ್ನು ಬಲಾತ್ಕರಿಸಲಾಯಿತು. ಇದರಿಂದ ಇನ್ನಷ್ಟು ಬಿಕ್ಕಟ್ಟು ನಿರ್ಮಾಣವಾಯಿತು.

ಫಾರ್ವರ್ಡ್ ಬ್ಲಾಕ್

ಬೋಸ್ ಕೂಡಲೇ ಕಾಂಗ್ರೆಸ್ಸಿನೊಳಗೇ ಒಂದು ಕ್ರಾಂತಿಕಾರಿ ಹಾಗೂ ಪ್ರಗತಿಪರ ಪಕ್ಷವನ್ನು ರಚಿಸಿದರು. ಕಾಂಗ್ರೆಸ್ಸಿನಲ್ಲಿದ್ದ ಎಲ್ಲ ವಾಮಪಂಥಿಯರನ್ನೂ ಒಂದಾಗಿ ಸಂಘಟಿಸುವುದು ಅವರ ಉದ್ದೇಶವಾಗಿತ್ತು. ಈ ಕೂಟವನ್ನು "ಫಾರ್ವರ್ಡ್ ಬ್ಲಾಕ್" ಎಂದು ಕರೆಯಲಾಯಿತು.

ಬೋಸರು ಪಕ್ಷದ ಶಿಸ್ತನ್ನು ಉಲ್ಲಂಘಿಸಿದ್ದಾರೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅದರ ಮೇಲೆ ಆರೋಪ ಮಾಡಿತು. ಅವರು ಮೂರು ವರ್ಷಗಳವರೆಗೆ ಯಾವುದೇ ಚುನಾಯಿತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿರಲು ಅರ್ಹರಲ್ಲ ಎಂದು ಸಮಿತಿ ಘೋಷಿಸಿತು. ವಸ್ತುತಃ ಇದು ಕಾಂಗ್ರೆಸ್ಸಿನಿಂದ ಬೋಸರ ಉಚ್ಚಾಟನೆಯೇ ಆಗಿತ್ತು.

ಕಾಂಗ್ರೆಸು ಭಾರತದ ಸಾಮ್ರಾಜ್ಯ ವಾದಿಗಳೊಂದಿಗೆ ರಾಜೀಮಾಡಿಕೊಂಡಲ್ಲಿ ಮುಂದಕ್ಕೆ ಭಾರತದ ವಾಮವಾದಿಗಳು ಸಾಮ್ರಾಜ್ಯವಾದಿಗಳ ವಿರುದ್ಧ ಮಾತ್ರವಲ್ಲದೆ ಭಾರತದಲ್ಲಿರುವ ಅವರ ಮಿತ್ರರ (ಅಂದರೆ ಕಾಂಗ್ರೆಸ್ಸಿನ) ವಿರುದ್ಧವೂ ಹೋರಾಡುವರು ಎಂಬುದಾಗಿ ಬೋಸ್ ಘೋಷಿಸಿದರು. ಅಲ್ಲದೆ ಗಾಂಧೀಜಿಯವರು ಮತ್ತು ಅವರ ಅನುಯಾಯಿಗಳು ೧೯೩೫ರ ಕಾಯಿದೆಯ ಒಕ್ಕೂಟ ಯೋಜನೆಯನ್ನು ಒಪ್ಪುವ ಬಗ್ಗೆ ಬ್ರಿಟಿಷ್ ಸರ್ಕಾರದೊಂದಿಗೆ ರಹಸ್ಯವಾಗಿ ಸಂಧಾನ ಮಾಡುತ್ತಿದ್ದಾರೆಂದು ಬೋಸ್ ಶಂಕಿಸಿದರು. ಇಂತಹ ರಾಜಕೀಯ ಒಪ್ಪುವ ಬಗ್ಗೆ ಬ್ರಿಟಿಷ್ ಸರ್ಕಾರದೊಂದಿಗೆ ರಹಸ್ಯವಾಗಿ ಸಂಧಾನ ಮಾಡುತ್ತಿದ್ದಾರೆಂದು ಬೋಸ್ ಶಂಕಿಸಿದರು. ಇಂತಹ ರಾಜಕೀಯ ಮೂಲಕ ಭಾರತವು ಸ್ವಾತಂತ್ರ್ಯ ಪಡೆಲಾರದೆಂದು ಅವರಿಗೆ ಮನವರಿಕೆಯಾಗಿತ್ತು. ಬ್ರಿಟಿನ್ ಆಗ ಯುರೋಪಿನಲ್ಲಿ ಹಿಟ್ಲರ್‌ನೊಂದಿಗೆ ಮುಖಾಮುಖಿಯಾಗಿ ಯುದ್ಧ ನಡೆಸುತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯವಾದದೊಂದಿಗೆ ಬಹಿರಂಗ ಸಂಘರ್ಷವೇ ಯೋಗ್ಯ ಮಾರ್ಗವೆಂದು ಬೋಸ್ ಯೋಚಿಸಿದರು. ಅವರು ೧೯೩೩ರಲ್ಲಿ ವಿಯೆನ್ನಾದಲ್ಲಿದ್ದಾಗ ಅಲ್ಲಿಂದ ಬರ್ಲಿನ್‌ಗೆ ಹೋಗಿ ಹಿಟ್ಲರನನ್ನು ಭೇಟಿಯಾಗಿದ್ದರು. ಜರ್ಮನಿ ಮತ್ತು ಬ್ರಿಟನ್ ನಡುವೆ ಯುದ್ಧವಾಗುವ ಸಾಧ್ಯತೆಯ ಕುರಿತು ಹಿಟ್ಲರನೊಂದಿಗೆ ಚರ್ಚಿಸಿದ್ದರು.

೧೯೩೯ರಲ್ಲಿ ಕಾಂಗ್ರೆಸ್ಸಿನಿಂದ ಉಚ್ಚಾಟಿತರಾದ ಬಳಿಕ ಬೋಸ್ ಫಾರ್ವರ್ಡ್ ಬ್ಲಾಕನ್ನು ಸಂಘಟಿಸಿದರು. ೧೯೪೦ರ ಜುಲೈಯಲ್ಲಿ ಅವರು ಬಂಧಿತರಾದರು. ಸೆರೆಮನೆಯಲ್ಲಿ ಅವರು ಉಪವಾಸ ಆರಂಭಿಸಿದರು.ಲ ೧೯೪೦ ದಶಂಬರದಲ್ಲಿ ಬೋಸ್ ಬಿಡುಗಡೆಯಾದರು.ಲ ಆದರೆ ಕಲ್ಕತ್ತದಲ್ಲಿ ತನ್ನ ಸ್ವಂತ ಮನೆಯಲ್ಲೇ ಗೃಹ ಬಂಧನಕ್ಕೀಡಾದರು. ಅವರ ಮೇಲೆ ಪೋಲಿಸರ ಬಲವಾದ ಕಾವಲಿತ್ತು.ಲ ೧೯೪೧ ಜನವರಿಯಲ್ಲಿ ಅವರು ರಹಸ್ಯವಾಗಿ

ತಪ್ಪಿಸಿಕೊಂಡರು. ಅಲ್ಲಿಂದ ಪೇಶಾವರ ಮತ್ತು ಕಾಬೂಲಿನ ಮಾರ್ಗವಾದಿ ಮಾಸ್ಕೊಗೆ ಹೋದರು. ೧೯೪೧ ಮಾರ್ಚ್‌ನಲ್ಲಿ ಅವರು ಮಾಸ್ಕೊದಿಂದ ಬರ್ಲಿನ್‌ಗೆ ತೆರಳಿ ಅಲ್ಲಿ ತಮ್ಮ ಎರಡು ಪ್ರಸ್ತಾವಗಳಿಗೆ ಜರ್ಮನರ ಸಮ್ಮತಿ ಪಡೆದರು. ಅವುಗಳು ಯಾವುವೆಂದರೆ ಒಂದನೆಯದಾಗಿ, ಅವರು ಬರ್ಲಿನ್ ಆಕಾಶವಾಣಿಯಿಂದ ಬ್ರಿಟಿಷ್ ವಿರೋಧಿ ಪ್ರಚಾರವನ್ನು ಬಿತ್ತಿರಿಸುವುದು. ಎರಡನೆಯದಾಗಿ, ಅವರು ಜರ್ಮನಿಯಲ್ಲಿರುವ ಭಾರತೀಯ ಯುದ್ಧ ಕೈದಿಗಳನ್ನು ಸೇರಿಸಿಕೊಂಡು "ಭಾರತ ವಿಮೋಚನೆ ಘಟಕ"ಗಳನ್ನು ರಚಿಸುವುದು. ಇಟಲಿಯ ಜರ್ಮನಿಯ ಮಿತ್ರರಾಷ್ಟ್ರವಾದುದರಿಂದ ಅದರ ರಾಜಧಾನಿಯಾದ ರೋಮ್ ನಗರದಲ್ಲಿ "ಭಾರತ ವಿಮೋಚನಾ ಘಟಕಗಳನ್ನು ಸ್ಥಾಪಿಸಲಾಯಿತು. ಇಷ್ಟು ಮಾತ್ರವಲ್ಲದೆ ಜರ್ಮನಿಯ ಅಧೀನದಲ್ಲಿದ್ದ ಪ್ಯಾರಿಸ್ ನಗರದಲ್ಲಿಯೂ ಈ ಘಟಕಗಳನ್ನು ಸ್ಥಾಪಿಸಲಾಯಿತು. ಈ ಪಡೆಯ ಒಟ್ಟು ಸಂಖ್ಯೆ ೩,೦೦೦ ಆಗಿತ್ತು. ಇವರ ಕಾಲದ ಎಲ್ಲಾ ಬದಲಾವಣೆಗಳು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಸುಭಾಷ್‌ಚಂದ್ರಬೋಸರು ನಿರ್ವಹಿಸಿದ ವಿವಿಧ ಮುಖಗಳ ಸೇವೆಯನ್ನು ತಿಳಿಯುತ್ತವೆ. ಕಾಂಗ್ರೆಸ್, ಫಾರ್ವರ್ಡ್ ಬ್ಲಾಕ್, ಆಜಾದ್ ಹಿಂದ್ ಫೌಜ್ ನಾಯಕರಾಗಿ ಸ್ವಾತಂತ್ರ್ಯಕ್ಕಾಗಿ ನಿರ್ವಹಿಸಿದ ಕಾರ್ಯ ಪ್ರಶಂಸನೀಯವಾದದ್ದು. ರಾಷ್ಟ್ರೀಯ ಯೋಜನೆಗೆ ಇವರ ಸೇವೆ ಬಹಳ ಅಪಾರ ಭಾರತದ ಅಭಿವೃ ದ್ಧಿಗೆ ಇವರ ಸೇವೆಯು ಸ್ತುತ್ಯಾರ್ಹ. ಇದರಿಂದ ಎಲ್ಲಾ ವರ್ಗದ ಜನರೂ ಅದರಲ್ಲೂ ಯುವಕರು ಉತ್ತೇಜಿತರಾಗಿ ಸ್ವಾತಂತ್ರ್ಯಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಾದರು. ವಿದೇಶಾಂಗ ನೀತಿ, ಪ್ರಬಲ ಪ್ರಪಂಚದ ನಾಯಕರೊಂದಿಗಿನ ಸ್ನೇಹ ಇವೆಲ್ಲವೂ ಇವರ ಮುತ್ಸದ್ಧಿತನಕ್ಕೆ ಸಾಕ್ಷಿಯಾಗಿವೆ. ಇನ್ನು ಇವರ ಹೋರಾಟವು ಸಾಹಸಮಯವಾಗಿದ್ದು, ಎಲ್ಲರಿಗೂ ಆಕರ್ಷಿತರಾದರು.

ಅಡಿಟಿಪ್ಪಣಿ

೧. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಅಂತಿಮ ಎಂ.ಎ., ಇತಿಹಾಸ ಕೋರ್ಸ್ - ೯, ಬ್ಲಾಕ್-೨, ೧೮-೨೨

೨. ಭಾರತ ಸ್ವತಂತ್ರ ಚಳುವಳಿಯ ಇತಿಹಾಸ 1885–1947

ಅಧ್ಯಾಯ-೩

'ಮಾಡಿಮಡಿದವರು' ಕಾದಂಬರಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಣ ಮತ್ತು ಜೀವನ ಚಿಂತನೆ

ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಸಾಕಾರಗೊಳಿಸಿದ ಮಾಡಿ ಮಡಿದವರು ಕೃತಿ ಅಸದೃಶ ಪಾತ್ರ ಚಿತ್ರಣದಿಂದ ಮತ್ತು ಸಮರ್ಪಕವಾದ ಸನ್ನಿವೇಶಗಳ ನಿರ್ಮಾಣದಿಂದ ಹೇಗೆ ಉತ್ತಮ ಸಾಹಿತ್ಯ ಕೃತಿಯಾಗಿದೆಯೆಂಬುದನ್ನು ತೋರಿಸಿದಂತೆಯೇ ಸ್ವಾತಂತ್ರ್ಯದ ಹೋರಾಟದ ಚಿತ್ರಣವುಳ್ಳ ಮಹತ್ವದ ವಿಷಯವಸ್ತುವನ್ನು ಒಳಗೊಂಡಿರುವ ಮಾಡಿಮಡಿದವರು ಕಾದಂಬರಿಯಲ್ಲಿ ಮುಖ್ಯವಾಗಿ ಬೆಳಗಾವಿ ಜಿಲ್ಲೆಯ ಜನತೆ ಸುಸಂಘಟಿತರಾಗಿ ನಡೆಸಿದ ೧೯೪೨ರ ಚಲೇಜಾವ್ ಚಳುವಳಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಸಾಹಿತ್ಯ ಕೃತಿಯಾಗಿದೆ. ಮಾಡು ಇಲ್ಲವೆ ಮಡಿ ಎಂಬ ಗಾಂಧೀಜಿಯವರ ಅಂತಿಮ ಕರೆಯನ್ನು ಉಸಿರು ಮತ್ತು ಕ್ರಿಯೆಯನ್ನಾಗಿ ಮಾಡಿಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ಹಾಗೂ ಹೋರಾಡುತ್ತಾ ಮಡಿದ ಅಪ್ರತಿಮ ವೀರರ ವಾಸ್ತವ ಗಾಥೆ ಇಲ್ಲಿದೆ ಈ ಕೃತಿಯಲ್ಲಿನ ಸಂಪೂರ್ಣ ಸ್ವಾತಂತ್ರ್ಯದ ವಿವೇಚನೆ ಅದಕ್ಕನುಗುಣವಾಗಿ ಪ್ರಯತ್ನ ಇವೆಲ್ಲವುಗಳನ್ನು ಈ ಕೃತಿಯು ಒಳಗೊಂಡಿದೆ.

ಸ್ವಾತಂತ್ರ್ಯದ ಕೊನೆಯ ಹೋರಾಟವೆಂದೇ ಹೆಸರಾದ ಭಾರತ ಬಿಟ್ಟು ತೊಲಗಿ ಚಳುವಳಿ ಅಥವಾ ಚಲೇಚಾವ್ ಚಳುವಳಿ ಕರ್ನಾಟಕ ಅದರಲ್ಲೂ ಬೆಳಗಾವಿ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ನಡೆಯಿತು. ಈ ಬೆಳಗಾವಿಯ ಚಳುವಳಿ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿತು. ಇಲ್ಲಿ ಕಟ್ಟೀಮನಿಯವರು ಬೆಳಗಾವಿಯಲ್ಲಿ ನಡೆದ ಒಂದು ವಾಸ್ತವ ಕಥೆಯನ್ನು ಹೇಳುತ್ತಾ ಇಂದಿನ ಜನರಲ್ಲಿ ರಾಷ್ಟ್ರೀಯತೆಯ ಕಲ್ಪನೆ ಮೂಡಿಸುವಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸಿದ್ದಾರೆ.

ಕಟ್ಟೀಮನಿಯವರು ೧೯೪೨ರಲ್ಲಿ ಬೆಳಗಾವಿಯಲ್ಲಿ ನಡೆದ ಒಂದು ವಾಸ್ತವ ಕಥೆಯ ಚಿತ್ರಣವನ್ನು ಈ ಅಧ್ಯಯನವು ವಿಮರ್ಶಾತ್ಮಕವಾಗಿ ನೋಡುತ್ತಾ ಚಿತ್ರಿಸುತ್ತದೆ.

೧೯೪೨ರಲ್ಲಿ ಮುಂಬೈನಲ್ಲಿ ನಡೆದ ಭಾರತೀಯರ ರಾಷ್ಟ್ರೀಯ ಕಾಂಗ್ರೆಸ್ ಸಭೆ ಸ್ವಾತಂತ್ರ್ಯವಾಗಿ ಕೊನೆಯ ಹೋರಾಟ ಮಾಡುವ ಚಲೇಜಾವ್ ನಿರ್ಣಯ ಅಂಗೀಕರಿಸಿತು ಗಾಂಧೀಜಿಯವರು ಮಾಡಿದ ವಿಚಾರ ಪ್ರಚೋದಕ ಭಾಷಣ ಹಾಗೂ ಅವರು ನೀಡಿದ್ದ ಮಾಡು ಇಲ್ಲವೆ ಮಡಿ ಎಂಬ ಅಂತಿಮ ಸಂದೇಶ ಭಾರತೀಯರನ್ನೆಲ್ಲಾ ಬಡಿದೆಬ್ಬಿಸಿತು. ಮರುದಿನವೇ ಇಡೀ ಭಾರತದ ತುಂಬೆಲ್ಲಾ ಉಗ್ರ ಹೋರಾಟ ಆರಂಭವಾಯಿತು ಬ್ರಿಟಿಷರು ಹಲವಾರು ರಾಷ್ಟ್ರೀಯ ಮುಖಂಡರನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು. ಈ ಸುದ್ಧಿ ಬಿರುಗಾಳಿಯಂತೆ ಹರಡಿ ಹೋರಾಟ ಇನ್ನು ತೀವ್ರವಾಯಿತು. ಇಂಥ ಹೋರಾಟದಲ್ಲಿ

ರಾಷ್ಟ್ರೀಯ ಮುಖಂಡರು, ಕಾಂಗ್ರೆಸ್ಸಿಗರು, ವಕೀಲರು, ಶಿಕ್ಷಕರು, ಯೋಧರು, ರೈತರು, ಸಾಮಾನ್ಯ ಜನರು ಸಹ ಪಾಲ್ಗೊಂಡು ಬ್ರಿಟಿಷರ ಬುಡುವೇ ಅಲ್ಲಾಡುವಂತೆ ಮಾಡಿದರು. ಶಾಲಾ-ಕಾಲೇಜು ವಿದ್ಯಾರ್ಥಿಗಳು ತಮ್ಮ ತರಗತಿಗಳಲ್ಲಿ ಬಹಿಷ್ಕಾರ ಹಾಕಿ ಹೊರಬಂದು ಅವರು ಹೋರಾಟದಲ್ಲಿ ಧುಮುಕಿದರು. ಅದೇ ರೀತಿ ೧೯೪೨ರ ಆಗಸ್ಟ್ ತಿಂಗಳಿನಲ್ಲಿ ನಡೆದ ವಾಸ್ತವ ಕಥೆಯನ್ನು ಇಲ್ಲಿ ಚಿತ್ರಿಸಲಾಗಿದೆ. ಈ ಕಥೆಯ ಮುಖ್ಯ ಪಾತ್ರವಹಿಸಿದವರಲ್ಲಿ ಹೇಮಾವತಿಯು ಒಬ್ಬರು ಹೇಮಾ ಕಾಲೇಜು ವಿದ್ಯಾರ್ಥಿನಿ ಪುಣೆಯಲ್ಲಿ ಓದುತ್ತಿದ್ದ ಆಕೆ ಎ.ಐ.ಸಿ.ಸಿ.ಯಲ್ಲಿ ಗಾಂಧಿಜೀ ಮಾಡಿದ ಭಾಷಣ 'ನೀವು ಮಾಡಬೇಕು ಇಲ್ಲವೆ ಮಡಿಯಬೇಕು, ಗಂಡು-ಹೆಣ್ಣು, ಕೂಸು, ಕುನ್ನಿ, ವಿದ್ಯಾರ್ಥಿನಿಯರು ಎಲ್ಲರೂ ಈ ಸಂಗ್ರಾಮದಲ್ಲಿ ಭಾಗವಹಿಸಬೇಕು ಎಲ್ಲರೂ ಒಂದಾಗಿ ಬ್ರಿಟೀಷ್ ಸರ್ಕಾರದ ಅಧಿಕಾರವನ್ನು ದಿಕ್ಕರಿಸಿರಬೇಕು ಎಂಬುದರ ಆಹ್ವಾನದ ಮೇರೆಗೆ ದೇಶವನ್ನೇ ಅಲ್ಲೋಲ್ಲ ಕಲ್ಲೋಲ್ಲ ಮಾಡಿದ ಚಲೇಚಾವ್ ಚಳುವಳಿಯಿಂದ ಆಕರ್ಷಿತಳಾಗಿ ತಾನೂ ಹೋರಾಟದಲ್ಲಿ ಧುಮುಕಬೇಕು ಎಂಬುದಾಗಿ ನಿರ್ಧರಿಸಿದಳು. ತನ್ನ ತಂದೆಯ ಉಪದೇಶವನ್ನು ಹೋರಾಟದ ದಾರಿಯಿಂದ ಹಿಂದುರಿಗಿಸಲು ಯತ್ನಿಸಲು ಮಾಡಿದ ಪ್ರಯತ್ನವನ್ನು ಅವರ ತಂದೆಯಾದ ಕಾಂಗ್ರೆಸ್‌ನ ಮುಖಂಡರಾದ ರಾಮರಾಯರು ಗೊತ್ತು ಮಾಡಿದ ಮದುವೆಯನ್ನು ತಿರಸ್ಕರಿಸಿ ಕಾಲೇಜಿನ ವ್ಯಾಸಂಗಕ್ಕೆ ತಿಲಾಂಜಲಿ ಇಟ್ಟು ಸ್ವಾತಂತ್ರ್ಯ ಚಳುವಳಿಯ ಕಡೆಗೆ ಇಟ್ಟ ಹೆಜ್ಜೆ ಹೇಮಾವತಿಯ ಧೈರ್ಯ ಸ್ವಾತಂತ್ರ್ಯದ ಬಗೆಗಿದ್ದ ಅವಳ ಕಾಳಜಿ ಬ್ರಿಟೀಷರಿಂದ ಮುಕ್ತಗೊಳಿಸುವ ಸಂಕಲ್ಪ ಹೇಮಾವತಿಯು ಹೊಂದಿ ದೇಶಭಕ್ತಿಯನ್ನು ತೋರಿಸುತ್ತದೆ. ಇದರಿಂದ ಭಾರತದ ಹೆಣ್ಣು ಮಕ್ಕಳು ಭಾರತೀಯ ಚಳುವಳಿಯಲ್ಲಿ ತಮ್ಮ ಪಾತ್ರವು ಕೂಡ ಇದೆ ಎಂಬುದನ್ನು ತೋರಿಸಿದಳು. ಅಲ್ಲದೆ ಸ್ವಾತಂತ್ರ್ಯ ಚಳುವಳಿಯಲ್ಲಿ ನಮಗೂ ಕೂಡ ಅಂದರೆ ಮಹಿಳೆಯರಿಗೂ ಕೆಲಸ ಇದೆ ಎಂಬುದನ್ನು ತೋರಿಸಿಕೊಟ್ಟ ಇಂದಿನ ಮಹಿಳೆಯರಿಗೆ ಆದರ್ಶಪ್ರಾಯಗಳಾಗಿದ್ದಾಳೆ. ಸುಖಸಂಪತ್ತಿನಲ್ಲಿರಬೇಕಾದ ಹೇಮಾವತಿ ಭಾರತದ ಸ್ವಾತಂತ್ರ್ಯದ ಹೋರಾಟಕ್ಕೆ ತಮ್ಮ ಪ್ರಾಣವನ್ನೇ ಮುಡುಪಾಗಿಡುತ್ತಾಳೆ. ಹೇಮಾವತಿ ತನ್ನ ತಂದೆಯ ಉಪದೇಶವನ್ನು ವಿರೋಧಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಬೆಳಗಾವಿಯತ್ತ ರೈಲಿನಲ್ಲಿ ಹೊರಟಿದ್ದ ಹೇಮಾವತಿಗೆ ತನ್ನ ಮನೆಯಲ್ಲಿ ನಡೆದ ಎಲ್ಲಾ ವಿಚಾರಗಳನ್ನು ನೆನಪಿಸಿಕೊಳ್ಳುತ್ತ ತಮ್ಮ ತಂದೆಯ ವಾದಗಳನ್ನು ತಿರಸ್ಕರಿಸುತ್ತಾ ತನಗೆ ತಾನೇ ದೃಢಮನಸ್ಸಿನಿಂದ ಸ್ವಾತಂತ್ರ್ಯ ಪಡೆಯುವಲ್ಲಿ ಗಾಂಧೀಜಿಯವರ ಪ್ರಯತ್ನಕ್ಕೆ ಕೈ ಜೋಡಿಸಬೇಕು ಎಂಬುದೇ ಅವಳ ಧ್ಯೇಯ ವಾಕ್ಯವಾಗಿರುತ್ತದೆ.

ರೈಲಿನಲ್ಲಿ ಹೊರಟಿದ್ದ ಹೇಮಾವತಿಗೆ ಸುಮಾರು ಇಪ್ಪಾತ್ತಾರು ವರ್ಷದ ವಯಸ್ಸಿನ ಸಾಕಷ್ಟು ಎತ್ತರವೂ ಆದ ಖಾದೀಯ ಉಡುಗೆಗಳನ್ನು ತೊಟ್ಟು ಹೇಮಾವತಿಯು ಕುಳಿತಿದ್ದ ರೈಲ್ವೆಯ ಭೋಗಿಗೆ ಪ್ರವೇಶಿಸುತ್ತಾನೆ. ಇದನ್ನು ಕಂಡ ಹೇಮಾವತಿ ಯಾರೆಂದು ಪರೀಕ್ಷಿಸಿದಾಗ ಸ್ವಾತಂತ್ರ್ಯ ಹೋರಟಗಾರನಾದ ಶೇಖರ ಎಂಬುದು ತಿಳಿಯುತ್ತದೆ.

ಹೇಮಾವತಿಯ ಶೇಖರನ ಸಂಭಾಷಣೆಯು ಸ್ವಾತಂತ್ರ್ಯ ಚಳುವಳಿಗೆ ಜನರು

ಯಾವ ರೀತಿ ಸನ್ನದ್ಧರಾಗಿದ್ದರು ಎಂಬುದನ್ನು ತಿಳಿಸುತ್ತದೆ. ಶೇಖರನ ಅನುಮತಿ ಪಡೆದು ಹೇಮಾವತಿಯು ಸಹ ಸ್ವಾತಂತ್ರ್ಯ ಚಳುವಳಿಗೆ ಅಧಿಕೃತವಾಗಿ ಧುಮುಕುತ್ತಾಳೆ. ಇದು ಹೇಮಾವತಿಗಿದ್ದ ಸ್ವಾತಂತ್ರ್ಯ ಕಾಳಜಿಯನ್ನು ಎತ್ತಿತೋರಿಸುತ್ತದೆ. ಬಡತನ ಬೇಗೆಯಲ್ಲಿ ಬೇಯುತ್ತಿದ್ದ ಶೇಖರನ ಕುಟುಂಬ ದಲಿತ ಕೇರಿಯಲ್ಲಿ ಬಾಡಿಗೆಯ ಮನೆಯೊಂದನ್ನು ಪಡೆದು ವಾಸಿಸುತ್ತದೆ. ಅಲ್ಲಿ ಪರಿಚಯವಾದ ಕಮ್ಯೂನಿಸ್ ಕಾರ್ಯಕರ್ತ ಅವನ ಪ್ರಭಾವದಿಂದ ಶೇಖರನು ಸಮತಾವಾದದ ಬಗ್ಗೆ ಒಲವು ಬೆಳೆಸಿಕೊಳ್ಳುತ್ತಾನೆ. ಬಡವ ಶ್ರೀಮಂತ ಕಾರ್ಮಿಕ ಬಂಡವಾಳ ಶಾಹಿಗಳ ನಡುವಿನ ತಾತ್ವಿಕತೆ ಮೊದಲಬಾರಿಗೆ ಅವನ ಅರಿವಿಗೆ ಬರುತ್ತದೆ. 'ಇಂಕ್ವಿಲಾಬ್' ಜಿಂದಾಬಾದ್ ಎಂಬ ಘೋಷಣೆ ಅವನನ್ನು ರೋಮಾಂಚನಗೊಳಿಸುತ್ತದೆ. ರಾಜನ ಜೊತೆಗಿನ ಸ್ನೇಹ ಮುರಿದು ಬಿದ್ದಾಗ ಕಮ್ಯೂನಿಸಂನ್ನು ಟೀಕಿಸುತ್ತಾನೆ. ಕಮ್ಯೂನಿಸಂನ ವಿರೋಧಿಯಾದ ಶೇಖರನು ಗಾಂಧೀಜಿಯವ ಚಿಂತನೆಯಾದ ಗ್ರಾಮೋದ್ಧಾರವನ್ನು ಕಾರ್ಯರೂಪಕ್ಕೆ ತರಲು ಮುಂದಾಗುತ್ತಾನೆ. ಕಲ್ಲಾಪುರದಲ್ಲಿ ತಾನು ಕಂಡ ರೈತರ ನಿರ್ಗತಿಕ ಸ್ಥಿತಿ, ಬಡತನ ದಾರಿದ್ರ್ಯ, ಅನಕ್ಷರತೆ ಶೇಖರನ ಅನುಭವಕ್ಕೆ ಬರುತ್ತವೆ. ಕಲ್ಲಾಪುರದ ಗ್ರಾಮೋದ್ಧಾರಕ್ಕೆ ಶೇಖರನು ಮನಸ್ಸು ಮಾಡುತ್ತಾನೆ. ಜೊತೆಗೆ ಗಾಂಧೀಜಿಯವರು ಕರೆಕೊಟ್ಟ ಸ್ವಾತಂತ್ರ್ಯ ಚಳುವಳಿಗೆ ತನ್ನದೇ ರೀತಿಯಲ್ಲಿ ಭಾಗವಹಿಸಿ ಸುತ್ತಮುತ್ತಲಿನ ಹಳ್ಳಿಗರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ತೊಡಗುತ್ತಾನೆ. ಇಂತಹ ಸಂದರ್ಭದಲ್ಲೇ ಮುಂಬೈಯಿಂದ ಬೆಳಗಾವಿಗೆ ಹೊರಟಿದ್ದ ರೈಲಿನಲ್ಲಿ ಹೇಮಾವತಿಯನ್ನು ಆಕಸ್ಮಾತ್ ಆಗಿ ಭೇಟಿ ಮಾಡುತ್ತಾನೆ.

ಶೇಖರನ ಮತ್ತು ಹೇಮಾವತಿಯ ನಡುವೆ ನಡೆದ ಮಾತುಕತೆಯ ಸಂದರ್ಭದಿಂದ ಇವರಿಬ್ಬರ ಧ್ಯೇಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಶೇಖರನ ಆಡಿದ ಮಾತಿನಿಂದ ಹಾಗೂ ಹೇಮಾವತಿಯಿಂದ ಸ್ವಾತಂತ್ರ್ಯ ಚಳುವಳಿಗೆ ಸಹಾಯ ಅಥವಾ ಉಪಯೋಗವಿದೆ ಎಂಬ ಮಾತನ್ನು ಕೇಳಿ ಹೇಮಾವತಿಯು ಸಂತೋಷಗೊಂಡು ತಾನೂ ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಬಹುದು ಎಂಬುದನ್ನು ಅರಿತು ಸಂತೋಷಗೊಳ್ಳುತ್ತಾಳೆ. ಅದೇ ರೀತಿ ಹೇಮಾವತಿಯಂತಹ ಸುಶಿಕ್ಷಿತರು ಅದರಲ್ಲೂ ಮಹಿಳೆಯರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಿರುವುದು ಅವನಲ್ಲಿ ಮತ್ತಷ್ಟು ಸ್ವಾತಂತ್ರ್ಯವನ್ನು ಪಡೆದೇ ತಿರಬೇಕೆಂಬುದರ ಹಂಬಲ ಹೆಚ್ಚಾಗುತ್ತದೆ. ಇವರಿಬ್ಬರ ಸಂಭಾಷಣೆಯಿಂದ ದೇಶಕ್ಕಾಗಿ ಎಲ್ಲರೂ ಎಂತಹ ವೇಳೆಯಲ್ಲಾದ್ದರೂ ದೇಶಕ್ಕಾಗಿ ತಮ್ಮ ಪ್ರಾಣವನ್ನು ಮುಡುಪಾಗಿಡಬೇಕು ಎಂಬುದು ಇವರ ಮಾತಿನಿಂದ ತಿಳಿದು ಬರುತ್ತದೆ. ಇವರು ಚಲೇಚಾವ್ ಚಳುವಳಿಯಲ್ಲಿ ಬರುತ್ತದೆ. ಇವರು ಚಲೇಚಾವ್ ಚಳುವಳಿಯಲ್ಲಿ ಭಾಗವಹಿಸಿ ಯಾವ ರೀತಿ ಕಾರ್ಯಕ್ರಮ ಕೈಗೊಳ್ಳಬೇಕೆಂಬುದರ ಆಶಯ ಇವರ ಸಂಭಾಷೆಯಲ್ಲಿ ದ್ಯೋತಕವಾಗಿತ್ತು.

ಹೇಮಾವತಿಯು ಬ್ರಿಟಿಷರ ಹಂಗಿನಲ್ಲಿದ್ದ ಅಧಿಕಾರಿಗಳನ್ನು ತಿರಸ್ಕರಿಸಿದಳು ಎಂಬುದಕ್ಕೆ

ಕೀರ್ತಿನಾಥನನ್ನು ಮದುವೆಯಾಗಲು ಒಪ್ಪದಿರುವುದು ಒಂದು ಉದಾಹರಣೆಯಾಗಿದೆ ಇದು ಬ್ರಿಟಿಷರ ಗುಲಾಮಗಿರಿಯಲ್ಲಿದ್ದ ಭಾರತೀಯ ಅಧಿಕಾರಿಗಳನ್ನು ದ್ವೇಷಿಸುತ್ತಿದ್ದ ಹೇಮಾವತಿಯು ದೇಶಕ್ಕಾಗಿ ಎಲ್ಲಾ ಒಗ್ಗಟ್ಟಿನಿಂದ ಹೋರಾಡಬೇಕೆಂಬುದರ ರಾಷ್ಟ್ರೀಯ ಭಾವನೆ ಇಲ್ಲಿ ಮೂಡುತ್ತದೆ.

ಹೇಮಳ ಸೌಂದರ್ಯ ಮತ್ತು ಅವಳ ಮೇಲಿನ ವ್ಯಾಮೋಹದಿಂದ ಹೇಮಾಳ ಸಹ ಪಾಠಿಯಾದ ವಿಶ್ವನಾಥ ದೇಸಾಯಿ ಸ್ವಾತಂತ್ರ್ಯ ಚಳುವಳಿಗೆ ಸೇರಿಕೊಳ್ಳುವ ಸಂದರ್ಭವೂ ಆಶ್ಚರ್ಯಕರವಾಗಿರುತ್ತದೆ. ಹೇಮಾಳಿಂದ ಶೇಖರನು ಬೀಳ್ಕೊಟ್ಟ ನಂತರ ವಿಶ್ವನಾಥದೇಸಾಯಿ ಹೇಮಾವತಿಯು ಕುಳಿತಿದ್ದ ಭೋಗಿಗೆ ಆಕಸ್ಮಿಕವಾಗಿ ಬಂದು ಸೇರಿಕೊಳ್ಳುತ್ತಾನೆ. ವಿಶ್ವನಾಥ ದೇಸಾಯಿ ಹೇಮಾವತಿಯು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಯಹಿಸಿದ್ದರ ಬಗ್ಗೆ ವಿಚಾರಿಸುತ್ತಾ ತಾನೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವೆ ಎಂಬುದಾಗಿ ಮಾತಿಗೆ ಸಿಲುಕುತ್ತಾನೆ. ಹೇಮಾವತಿ ವಿಶ್ವನಾಥನ ತಂದೆಯವರಾದ ದೇಸಾಯಿಯವರ ಬಗ್ಗೆ ಹೇಳುತ್ತಾ ವಿಶ್ವನಾಥನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದರ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಾಳೆ. ಇದರಿಂದ ವಿಶ್ವನಾಥ ದೇಸಾಯಿಯುವರು ಸ್ವಾಭಿಮಾನಕ್ಕೆ ತೊಂದರೆಯಾಗುತ್ತದೆ ಎಂಬುದನ್ನು ತಿಳಿದು ತನ್ನನ್ನು ನೀನು ಪರೀಕ್ಷೆ ಮಾಡಬಹುದೆಂದು ಹೇಮಾವತಿಗೆ ವಿಶ್ವನಾಥ ದೇಸಾಯಿ ಹೇಳುತ್ತಾನೆ ಇದರಿಂದ ಹೇಮಾವತಿ ಶೇಖರನ ಸಹಾಯದಿಂದ ವಿಶ್ವನಾಥ ದೇಸಾಯಿಯನ್ನು ಪರೀಕ್ಷೆ ಮಾಡುವ ಸಂದರ್ಭವನ್ನು ಸೃಷ್ಟಿಸುತ್ತಾಳೆ. ಸೃಷ್ಟಿಸಿದ ಸಂದರ್ಭದಲ್ಲಿ ದೇಸಾಯಿ ಯಶಸ್ವಿಯಾಗಿ ಹಾಗೂ ಹೇಮಾವತಿಯ ವ್ಯಾಮೋಹದಿಂದ ಹೊರಬಂದು ವಿಶ್ವನಾಥ ದೇಸಾಯಿ ಚಳುವಳಿಗೆ ಸೇರಿಕೊಳ್ಳುತ್ತಾನೆ ಆದರೆ ಹೇಮಾಳ ಸರಳ ಜೀವನ ತ್ಯಾಗ ಅವಳ ಹಿಂದಾದ ವ್ಯಕ್ತಿತ್ವ ಮಾನವೀಯತೆ ಸಂಯಮ ಎಲ್ಲವೂ ವಿಶ್ವನಾಥನನ್ನು ಬದಲಾಗುವಂತೆ ಮಾಡುತ್ತದೆ ಅವಳ ಮೇಲಿನ ವ್ಯಾಮೋಹದಿಂದ ಹೊರಬಂದು ನಿಜವಾದ ಸೈನಿಕನಾಗುತ್ತಾನೆ. ಈ ಸಂದರ್ಭದಿಂದ ವಿಶ್ವನಾಥ ದೇಸಾಯಿಯ ಪಾತ್ರ ವಿಶಿಷ್ಟತೆಯಿಂದ ಕೂಡಿದೆ. ಒಬ್ಬ ಉಥಾಪನಾಗಿದ್ದ ಜನರನ್ನು ಯಾವ ರೀತಿ ಹಾಗೂ ಜಮೀನ್ದಾರನ ಮಗನಾಗಿದ್ದ ವಿಶ್ವನಾಥನನ್ನು ಸ್ವಾತಂತ್ರ್ಯ ಚಳುವಳಿಗೆ ಇಳಿಸಿದ್ದು, ಹೇಮಾವತಿ, ರಾಷ್ಟ್ರೀಯತೆ ದೇಶಭಕ್ತಿ, ಧೈರ್ಯ, ಧೃಢತೆ ಹಾಗೂ ಶೇಖರನ ಸಮಯ ಪ್ರಜ್ಞೆ, ಇವೆಲ್ಲವೂ ವಿಶ್ವನಾಥನ ಕಳಕಳಿಯ ಮನೋಭಾವನೆಯನ್ನು ತಿಳಿಸುತ್ತದೆ.[೧]

ಶೇಖರ, ಹೇಮಾವತಿ ಮತ್ತು ವಿಶ್ವನಾಥ ದೇಸಾಯಿಯವರು ಹಿಂದಿನ ಸ್ವಾತಂತ್ರ್ಯ ಚಳುವಳಿಯ ಕಾರ್ಯಕ್ರಮಗಳನ್ನು ಟೀಕಿಸುತ್ತಾ ಭಾರತೀಯ ಕಾಂಗ್ರೆಸ್ಸಿನ ಕೆಲವರಲ್ಲಿ ಉತ್ಸಾಹ ಕಡಿಮೆಯಾಗಿದೆ ಹಾಗೂ ನಮ್ಮ ಕರ್ನಾಟಕದ ಜನತೆಯನ್ನು ಸ್ವಾತಂತ್ರ್ಯದ ವಿಚಾರದ ಹುರಿದುಂಬಿಸಬಲ್ಲ ಮುಖಂಡರು ಕಡಿಮೆ ಇದರಿಂದ ನಾವುಗಳು ಸಭೆ ಮೆರವಣಿಗೆ, ಪ್ರದರ್ಶನ, ಭಾಷಣಗಳಿಂದ ಜನರನ್ನು ಹುರಿದುಂಬಿಸುವ ಕೆಲಸ ಮಾಡಬೇಕು ಎಂಬುದರ

ಬಗ್ಗೆ ಚರ್ಚಿಸುತ್ತಿದ್ದ ಸಂದರ್ಭದಲ್ಲಿ ಅವರಿಗಿದ್ದ ಸ್ವಾತಂತ್ರ್ಯದ ಬಗೆಗೆ ಇದ್ದ ಕಾಳಜಿಯನ್ನು ತೋರಿಸುತ್ತದೆ. ಅದೇ ರೀತಿ ದೇಸಾಯಿ, ಭಗತ್‌ಸಿಂಗ್ ಮತ್ತು ಸುಖದೇವ್‌ರವರ ಕ್ರಾಂತಿಕಾರಿಯ ವಿಚಾರಗಳ ಬಗ್ಗೆ ತಿಳಿಸುತ್ತಾ ಕ್ರಾಂತಿಕಾರಿಳ ಯುಗವನ್ನು ನೆನಪಿನ ಅದರ ಅವಶ್ಯಕತೆಯನ್ನು ದೇಸಾಯಿ ಒತ್ತಿ ಹೇಳಿದ ಶೇಖರನು ಗಾಂಧೀಜಿಯವರ ಆಶಯವನ್ನು ತಿಳಿಸುತ್ತಾ ದೇಸಾಯಿಯವರನ್ನು ಅಹಿಂಸಾವಾದದ ಕಡೆಗೆ ಕರೆತಂದನು ಇಲ್ಲಿನ ಸಂದರ್ಭ ಹೇಮಾವತಿ ಮತ್ತು ಸೇಖರನು ಹಾಗೂ ದೇಸಾಯಿಯವರ ಮಾತಿನಲ್ಲಿ ಸ್ವಾತಂತ್ರ್ಯಕ್ಕಾಗಿ ನಾವು ಏನು ಮಾಡಬೇಕು ಎಂಬುದನ್ನು ಇದು ಒಳಗೊಂಡಿರುತ್ತದೆ.

ಹೇಮಾವತಿಯನ್ನು ಬೀಳ್ಕೊಟ್ಟ ಶೇಖರಣ್ಣಗೆ ದೇಸಾಯಿಯವರು ಸ್ವಾತಂತ್ರ್ಯದ ಮುಂದಿನ ದಿನಗಳ ಬಗ್ಗೆ ಚರ್ಚಿಸುತ್ತಾ ದೇಸಾಯಿಯವರ ತಂದೆಯ ಬಗ್ಗೆ ಹಾಗೂ ವಿಶ್ವನಾಥನ ದೇಸಾಯಿಯವರ ಮೇಲೆ ಆಗುವ ಪರಿಣಾಮದ ಬಗ್ಗೆ ಚರ್ಚಿಸುತ್ತಾನೆ. ಇದರಿಂದ ದೇಸಾಯಿ ಶೇಖರನಿಗೆ ಸ್ವಾತಂತ್ರ್ಯದ ಚಳುವಳಿಯ ಬಗ್ಗೆ ತನ್ನ ನಿಷ್ಠತೆ ಹೇಗಿದೆ ಎಂಬುದನ್ನು ತಿಳಿಸುತ್ತಾನೆ. ಇಬ್ಬರು ಕಲ್ಲಾಪುರಕ್ಕೆ ಹೊರಟು ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸುತ್ತಾರೆ. ದೊಡ್ಡಣ್ಣನವರ ಸಾಹುಕಾರರ ಮನೆಯದುರಿಗೆ ಲಾರಿ ಬಂದು ನಿಂತೊಡನೆ ಒಳಗಿನಿಂದ ಮಾಸ್ತರರು ಬೆಳಗಾವಿಯಲ್ಲಿ ನಡೆದ ಗೋಲಿಬಾರಿನ ವಿಚಾರವನ್ನು ಹಾಗೂ ೭ ಜನ ಸತ್ತ ವಿಚಾರವನ್ನು ಅತ್ಯಂತ ದುಃಖದಿಂದ ತಿಳಿಸಿದ ಸಂದರ್ಭದಲ್ಲಿ ಶಂಕರಣ್ಣನಿಗೆ ಸ್ವಾತಂತ್ರ್ಯದ ಚಳುವಳಿಕಾರರ ಮೇಲಿದ್ದ ಪ್ರೀತಿ ಹಾಗೂ ಶಂಕರಣ್ಣನಿಗೆ ಇದ್ದ ಸ್ವಾತಂತ್ರ್ಯ ಪಡೆಯುವ ಕಾತುರತೆಯನ್ನು ತಿಳಿಸುತ್ತದೆ.

ಶಂಕರಣ್ಣ ಅಥವಾ ಮಾಸ್ತರರು ಹಲವಾರು ಹೋರಾಟಗಾರರನ್ನು ಸಂಘಟಿಸಿ ಊರೂರು ಅಲೆದಾಡುತ್ತಾ ರಾಷ್ಟ್ರಪ್ರೇಮವನ್ನು ಉಕ್ಕಿಸುವ ಲಾವಣಿಗಳನ್ನು ಹಾಡುತ್ತಾ ಗ್ರಾಮೀಣ ಜನರಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕೆಚ್ಚನ್ನು ಬಿತ್ತುತ್ತಾರೆ. ಇವನು ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಇವನ ಪಾತ್ರವೂ ಕೂಡ ಬಹುಮುಖ್ಯವಾಗಿರುತ್ತದೆ. ಶೇಖರಣ್ಣ ವಿಶ್ವನಾಥ ದೇಸಾಯಿಯವರಿಗೆ ಯಾವುದಾದರೊಂದು ಒಳ್ಳೆಯ ಕೆಲಸಕ್ಕಾಗಿ ದುಡಿದವರು ಸತ್ತ ಮ್ಯಾಲೆ ನಕ್ಷತ್ರ ಆಗಿ ಬೆಳಗುತ್ತಿರುತ್ತಾರಾಂತೆ ನೀವು ಕೇಳಿದ್ದೀರಾ ದೇಸಾಯಿಯವರೇ ಎಂದು ಪ್ರಶ್ನಿಸಿದಾಗ ಅದನ್ನೇಲ್ಲಾ ನಾನು ನಂಬುವುದಿಲ್ಲ ಎಂದು ಹೇಳಿದಾಗ ಶೇಖರಣ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಗತ್‌ಸಿಂಗ್, ಸುಖದೇವ್, ಧನಶೆಟ್ಟಿ, ಮಲ್ಲಪ್ಪ, ಟಿಪ್ಪುಸುಲ್ತಾನ್, ಸಂಗೋಳ್ಳಿರಾಯಣ್ಣ, ಕಿತ್ತೂರು ಚೆನ್ನಮ್ಮ, ಇವರೆಲ್ಲ ಸಾವಿರ ವರ್ಷ ಕಳೆದರು ಅಳಿಯದೇ ಇರುತ್ತಾರೆ. ಇವರನ್ನೇ ನಾವು ಮಡಿಮಾಡಿದವರು............ ಹುತಾತ್ಮರು........... ಅದೇ ರೀತಿ ಸ್ವಾತಂತಕ್ರ್ಯಕ್ಕಾಗಿ ಹೋರಾಡಿದವರೆಲ್ಲ ಹುತಾತ್ಮರಾಗುತ್ತಾರೆ ಎಂಬ ವಿಚಾರವನ್ನು ತಿಳಿಸಿದಾಗ ದೇಸಾಯಿಗೂ ಕೂಡ ನಕ್ಷತ್ರದ ಲೋಕಕ್ಕೆ ಸಾಗುತ್ತಿದ್ದ ಹಾಗೆ ದೇಸಾಯಿ ಮೈಮರೆತನು ತನ್ನೆಲ್ಲಾ ಶಕ್ತಿಯನ್ನು ದೇಶಕ್ಕಾಗಿ ಮುಡುಪಾಗಿಡಲು ನಿರ್ಧರಿಸಿದ ಹೀಗೆ ಶೇಕರಣ್ಣ ದೇಸಾಯಿವರಲ್ಲಿ ಸ್ವಾತಂತ್ರ್ಯದ ಬಗೆಗಿನ ವಿಚಾರವನ್ನು ಮತ್ತಷ್ಟು ಗಟ್ಟಿಗೊಳಿಸುತ್ತಾರೆ.

ದೇಸಾಯಿ ಮತ್ತು ಶೇಖರಣ್ಣ ಕಿತ್ತೂರಿಗೆ ಹೊರಟು ಸಂಗಣ್ಣ ಮತ್ತು ಇನ್ನೂ ನಾಲ್ಕಾರು ಜನ ಬಂದು ಸೇರಿಕೊಳ್ಳುತ್ತಾರೆ.

ಶೇಖರನು ಕಿತ್ತೂರಿಗೆ ತನ್ನ ಸಂಗಡಿಗರೊಂದಿಗೆ ಹೊರಟ ಸಂದರ್ಭದಲ್ಲಿ ಕಿತ್ತೂರಿನ ವೈಭವತೆ ಅದೇ ರೀತಿ ಕಿತ್ತೂರಿನ ರಾಣಿ ಚೆನ್ನಮ್ಮ ಹಾಗು ಸಂಗೊಳ್ಳಿ ರಾಯಣ್ಣನು ಬ್ರಿಟಿಷರೊಂದಿಗೆ ಹೋರಾಡಿ ಮಡಿದ ಪ್ರಸಂಗ ಕಣ್ಣು ಮುಂದೆ ಬಂದಾಗ ಅವ್ವ ಚೆನ್ನಮ್ಮನ ಸ್ಫೂರ್ತಿಯನ್ನು ಹರಸುತ್ತಾ ಅದೇ ರೀತಿ ಅಣ್ಣ ರಾಯಣ್ಣನ ಸ್ಫೂರ್ತಿ ಅದೇ ರೀತಿ ಅವರ ಬಲಿದಾನ ಬ್ರಿಟೀಷರನ್ನು ತೊಲಗಿಸಬೇಕೆಂಬ ಅವರ ಸ್ಥೈರ್ಯ, ನಮ್ಮದಾಗಬೇಕು ಈಗ ಅದೇ ರೀತಿ ನಾವು ಮುಂದಿನ ಕಾರ್ಯಕ್ರಮವನ್ನು ಸಿದ್ಧಗೊಳಿಸಬೇಕು ಎಲ್ಲರೂ ನಿಮ್ಮ ನಿಮ್ಮ ವಿಚಾರಗಳನ್ನು ತಿಳಿಸಬೇಕು ಎಂಬ ಮಾತನಾಡಿ ಹೋರಾಟದ ವ್ಯೂಹವನ್ನು ರಚಿಸುವ ಶೇಖರನು ತನ್ನದೇ ಆದ ಕಾರ್ಯಕ್ರಮಗಳನ್ನು ಕೈಗೊಂಡು ಸ್ವಾತಂತ್ರ್ಯ ಚಳುವಳಿಗೆ ಪೂರ್ತಿಯಾಗಿ ವಿಶ್ವನಾಥನನ್ನು ಪಾಲ್ಗೊಳ್ಳುವಂತೆ ಮಾಡುತ್ತಾನೆ.

ಮಾಸ್ತರರು ತಮ್ಮ ಲಾವಣಿ ಪದಗಳಿಂದ ಇಡೀ ಜನಸ್ತೋಮವನ್ನು ಸ್ವಾತಂತ್ರ್ಯದ ಕಡೆಗೆ ಕರೆ ತರುತ್ತಿದ್ದರು. ಹೀಗೆ ಲಾವಣಿ ಪದಗಳನ್ನು ಹಾಡುತ್ತಾ ಗಾಂಧೀಜಿಯವರಿಗೆ ಜೈಕಾರವನ್ನು ಹಾಕುತ್ತಾ, ಜನರಲ್ಲಿ ಗಾಂಧೀಜಿಯವರ ಅಪಾರವಾದ ಅಭಿಮಾನವನ್ನು ಬೆಳೆಸುತ್ತಾ ಬೆಳೆಸುತ್ತಾ, ಸಾಗರದ ಅಲೆಗಳಂತೆ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರಯತ್ನ ಪಡುತ್ತಿದ್ದನು.

ಮುದುಕನಾದ ಬಾಳಪ್ಪ, ಗಾಂಧೀಜೀಯವರ ಕ್ಷೇಮದ ಬಗ್ಗೆ ಶೇಖರನಲ್ಲಿ ವಿಚಾರಿಸಿದಾಗ ಮುದುಕನಾದ ಬಾಳಪ್ಪನಿಗೆ ಗಾಂಧೀಜಿಯವರ ಮೇಲಿದ್ದ ಅಪಾರ ಪ್ರೀತಿ, ಗೌರವ ಹಾಗೂ ಅಭಿಮಾನತೆ ತಿಳಿಸುತ್ತಿದೆ ಅದೇ ರೀತಿ ಬಾಳಪ್ಪನ ಉತ್ಸುಕತೆಯು ಸ್ವಾತಂತ್ರ್ಯ ಚಳುವಳಿಯಲ್ಲಿ ವಯಸ್ಸಾದವರು ಕೂಡ ಭಾಗವಹಿಸುತ್ತಿದ್ದರು ಎಂಬುದನ್ನು ತಿಳಿಯಬಹುದು ಶೇಕರಣ್ಣನಿಂದ ಗಾಂಧೀಜಿಯವರ ಕ್ಷೇಮದ ವಿಚಾರವನ್ನು ತಿಳಿದ ಬಾಳಪ್ಪ, ತಿಲಕ್, ನೆಹರು ಬಗ್ಗೆ ಬೆಳೆಯಲು ಆಸಕ್ತನಾದನು ಹೀಗೆ ಬಾಳಪ್ಪನಲ್ಲೂ ಕೂಡ ಸ್ವಾತಂತ್ರ್ಯದ ಕಾಳಜಿಯು ಪ್ರಬಲವಾಗಿತ್ತು ಎಂಬುದನ್ನು ತಿಳಿಯಬಹುದು.

ಶೇಖರನ ಜೊತೆಯಲ್ಲಿ ಮಾಸ್ತರರು, ವಿಶ್ವನಾಥ, ಬಾಳಪ್ಪ, ಫೈಲ್ವಾನ ಸಂಗಣ್ಣ, ನೇಕಾರ ಹಸನ್‌ಸಾಬಿ ಇತ್ಯಾದಿ ಜನರಲ್ಲೂ ಕುಳಿತು ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಚರ್ಚಿಸುತ್ತಿದ್ದರು. ಅದೇ ಶೇಖರ್‌ನ ತಾಯಿ ಮನೆಯಲ್ಲೇ ಕುಳಿತು ಇವರ ಮಾತುಗಳನ್ನೆಲ್ಲಾ ಕೇಳಿ ಇವರ ಮಾತಿಗೆ ಸಮ್ಮತಿಸೂಚಿಸುತ್ತಿದ್ದಳು. ಅದೇ ಅವನ ಅಣ್ಣ ಲಿಂಗಣ್ಣನು ಕೂಡ ಇವರ ಸಹವರ್ತಿಯಾಗಿದ್ದನು. ರಂಗಣ್ಣ ಮತ್ತು ದೇಸಾಯಿಯವರ ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕುವ ಸಲುವಾಗಿ ಮಾಡಿದ ಕುತಂತ್ರಗಳು ಭಾರತೀಯರಲ್ಲಿ ಎಲ್ಲರು ಸರಿಯಾಗಿರಲಿಲ್ಲ ಜಮೀನ್ದಾರರು ಅನೇಕ ಅಧಿಕಾರಿಗಳು ಬ್ರಿಟಿಷರ ಪರವಾಗಿ ಕೆಲಸ ಮಾಡುತ್ತಿದ್ದರು ಎಂಬುದನ್ನು

ಇವರ ವಿಚಾರವನ್ನು ತಿಳಿದಾಗ ಗೊತ್ತಾಗುತ್ತದೆ. ರಂಗಣ್ಣ ಕಲ್ಲಾಪುರದ ಸ್ವಾತಂತ್ರ್ಯ ಚಳುವಳಿಯನು ಹತ್ತಿಕ್ಕಲು ಮತ್ತು ದೇಸಾಯಿಯವರು ಮಗನನ್ನು ಚಳುವಳಿಯಿಂದ ದೂರಸರಿಸಲು ಮಾಡಿದ ಪ್ರಯತ್ನ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಕಿಂಚಿತ್ತು ತಮ್ಮ ಧ್ಯೇಯವನ್ನು ಬಿಡಲಿಲ್ಲ.

ರಂಗಣ್ಣನಿಗೆ ದೇಸಾಯಿಯವರಿಗೆ ಬುದ್ಧಿ ಕಲಿಸಿದ ರೀತಿ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಎಲ್ಲದ್ದಕ್ಕೂ ಸಿದ್ಧ ಎಂಬುದನ್ನು ಶೇಖರನ ತಂಡ ಪ್ರಸ್ತುತ ಪಡಿಸಿತು.

ಶೇಖರನ ತಂಡದಲ್ಲಿದ್ದ ಫೈಲ್ವಾನ್ ಸಂಗಣ್ಣನೂ ಕೂಡ ಒಬ್ಬ. ಸ್ವಾತಂತ್ರ್ಯ ಸೇನಾನಿ ಇವನು ಕೂಡ ಸ್ವಾತಂತ್ರ್ಯಕ್ಕಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟಿದ್ದನು ಅದೇ ರೀತಿ ಅವನ ಕುಟುಂಬವು ಕೂಡ ಇವನ ಸ್ವಾತಂತ್ರ್ಯ ಚಳುವಳಿಯ ಕೆಲಸಕ್ಕೆ ಪ್ರಯತ್ನಿಸಿದರು. ತಾಯಿ ಸೀತವ್ವ ತನ್ನ ಅಣ್ಣನಾದ ಕರಿಯಪ್ಪನು ಸಹ ಸಂಗಣ್ಣನ ಹೋರಾಟಕ್ಕೂ ಯಾವ ರೀತಿ ಸಹಕಾರ ನೀಡಿದರು ಎಂಬುದನ್ನು ಸಂಗಣ್ಣನನ್ನು ಬ್ರಿಟಿಷರ ಸೇನೆ ಹುಡುಕಲು ಬಂದಾಗ ಸಂಗಣ್ಣನನ್ನು ಕಾಪಾಡಿದ ರೀತಿಯನ್ನು ನೋಡಿದಾಗ ಭಾರತದ ಚಳುವಳಿಗಾರರ ಕುಟುಂಬಗಳ ಯಾವ ರೀತಿ ಸ್ವಾತಂತ್ರ್ಯಕ್ಕಾಗಿ ಸೇವೆಯನ್ನು ಸಲ್ಲಿಸಿ ಎಂತಹ ಕಷ್ಟವನ್ನಾದರೂ ಸಹಿಸಿಕೊಳ್ಳುತ್ತಿದ್ದರು ಎಂಬುದನ್ನು ಈ ಸಂದರ್ಭದ ಮೂಲಕ ತಿಳಿಯಬಹುದು ಹೀಗೆ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರತದ ಕುಟುಂಬಗಳ ಪಾತ್ರ ಎಂತಹುದು ಎಂಬುದು ತಿಳಿಯುತ್ತದೆ.

ಶೇಖರನ ಕುಟುಂಬದಲ್ಲಿನ ಶೇಖರನ ತಾಯಿ ಮತ್ತು ಅವನ ಅಣ್ಣ ಮತ್ತು ಅತ್ತಿಗೆಯು ಕೂಡ ಚಳುವಳಿಕಾರರಿಗೆ ಸ್ವಾತಂತ್ರ್ಯವನ್ನು ಪಡೆಯುವಲ್ಲಿ ಸಹಾಯಕವಾಗಿ ನಿಂತರು ಹೀಗೆ ಕುಟುಂಬವು ಕೂಡ ಬೆಂಬಲವಾಗಿ ನಿಂತಿತು.

ವಿಶ್ವನಾಥನನ್ನು ದೇಸಾಯಿಯವರು ಮನೆಗೆ ತರುವಲ್ಲಿ ನಡೆಸಿದ ಕಸರತ್ತು ಹಾಗೂ ಕೀರ್ತಿನಾಥನಿಗೆ ಚಳ್ಳೆ ಹಣ್ಣೂ ತಿನ್ನಿಸಿದ ಹಾಗೆಯೇ ಶೇಖರ, ಸಂಗಣ್ಣ ವಿಶ್ವನಾಥ, ಬಾಳಪ್ಪ, ಈ ಎಲ್ಲರು ಕೂಡ ಕ್ವಿಟ್ಇಂಡಿಯಾ ಚಳುವಳಿಯಲ್ಲಿ ಟೆಲಿಫೋನ್ ತಂತಿಯನ್ನು ಸರಕಾರಿ ಕಛೇರಿಗಳ ಮೇಲೆ ದಾಳಿಯನ್ನು ಮಾಡಿದ್ದು ಬ್ರಿಟಿಷರ ಪಾತ್ರಗಾರಗಳನ್ನು ನಾಶಪಡಿಸಿದ್ದು, ಇನ್ನು ಮುಂತಾದ ಎಲ್ಲ ಉನ್ನತ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯವನ್ನು ಪಡೆಯುವಲ್ಲಿ ಶ್ರಮಿಸಿದ್ದನ್ನು ಬಸವರಾಜ ಕಟ್ಟೀಮನಿಯವರು ವಿವರವಾಗಿ ಮಾಡಿ ಮಡಿದವರು ಕಾದಂಬರಿಯಲ್ಲಿ ತಿಳಿಸಿದ್ದಾರೆ.

ಚಲೇಜಾವ್ ಚಳುವಳೀಯ ಸಂದರ್ಭದಲ್ಲಿ ದೇಶೀಯ ಬಂಡವಾಳಶಾಹಿಗಳು, ಜಮೀನ್ದಾರರು, ಸರಕಾರಿ ಅಧಿಕಾರಿಗಳು ಸೈನಿಕರು ಪೋಲಿಸರ ಆದಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪರೋಕ್ಷವಾಗಿ ಸಹಕರಿಸುತ್ತಿದ್ದರ ಚರಿತ್ರೆಯನ್ನು ಜಮೀನ್ದಾರರ ಮಗನಾಗಿದ್ದ ವಿಶ್ವನಾಥನ ಮೂಲಕ ಕಾದಂಬರಿಕಾರರು ಬಿಂಬಿಸಿದ್ದಾರೆ.

ಶೇಖರನನ್ನು ಬಸವರಾಜ ಕಟ್ಟೀಮನಿಯವರು ಅಹಿಂಸಾವಾದಿ ಎಂದು ಪ್ರತಿಬಿಂಬಿಸಿದರು. ಶೇಕರ ಈ ಕಾದಂಬರಿಯಲ್ಲಿ ಹಿಂಸಾ ತತ್ವವನ್ನು ಪಾಲಿಸಿರುವುದರು ಕಾಣುತ್ತದೆ. ಈ ಕಾದಂಬರಿ ಹಿಂಸೆಯಿಂದಲೇ ಮುಕ್ತಾಯವಾಗುತ್ತದೆ.

ಸಂಗಣ್ಣ ಪೊಲೀಸ್ ಸಿಪಾಯಿಯೊಬ್ಬನನ್ನು ಗುಂಡಿನಿಂದ ಹೊಡೆದು ಸಾಯಿಸುತ್ತಾನೆ. ಅದು ಅವನ ಸೇಡು ಅವನ ಅವ್ವ ತಾರವ್ವ ಪೋಲಿಸ್ ಗುಂಡಿಗೆ ಎದೆಕೊಟ್ಟು ಸತ್ತದ್ದಕ್ಕಾಗಿ ಮುಯ್ಯಿ ತೀರಿಸಿಕೊಳ್ಳುತ್ತಾನೆ. ಅಂಥ ವಿಷಮಸ್ಥಿತಿಯಲ್ಲಿ ಗುಂಪಿನ ಇತರರಿಗೆ ಪೀಕಲಾಟ ಎದುರಾಗುತ್ತದೆ. ಪೋಲೀಸರು ಬೆನ್ನಟ್ಟುತ್ತಾರೆ. ತಪ್ಪಿಸಿಕೊಂಡು ಓಡುವಾಗ ಹೇಮಾ ಸಹ ಶೇಖರನಿಗೆ 'ನಾವೂ ಗುಂಡಿನಿಂದ ಉತ್ತರ ಕೊಡೋಣವೇನು?' ಎಂದು ಕೇಳುತ್ತಾಳೆ. ಆಗಲೂ ಶೇಖರ ಅಹಿಂಸಾವಾದಿ 'ಎಂಥಾಪ್ರಸಂಗ ಬಂದರೂ ನಮ್ಮ ತತ್ವ ಬಿಡೂ ಹಾಂಗಿಲ್ಲ ಅನ್ನುತ್ತಾನೆ. ಬಸವಣ್ಣಪ್ಪ, ಹೇಮಾ, ಶೇಖರ ಪೋಲೀಸರಿಂದ ತಪ್ಪಿಸಿಕೊಂಡು ಓಡುವುದನ್ನು ಮುಂದುವರೆಸುತ್ತಾರೆ. ಕೊನೆಗೂ ಅವರು ಅಚಲವಾಗಿ ನಂಬಿದ್ದ ಅಹಿಂಸಾ ತತ್ವವನ್ನು ಗುಂಡುಗಳನ್ನು ಹಾರಿಸುತ್ತಾರೆ. ಬಸವಣ್ಣಪ್ಪ ಹೇಮಾಶೇಖರ್ ಕ್ರಮವಾಗಿ ಜೀವದ ಹಂಗು ತೊರೆಯುತ್ತಾರೆ. "ಹಿಂಸೆಯನ್ನು ಸ್ವೀಕರಿಸಿದ ಶೇಖರನ ನಡವಳಿಕೆ ಓದುಗನನ್ನು ಆಶ್ಚರ್ಯ ಮತ್ತು ತಬ್ಬಿಬ್ಬಾಗುವಂತೆ ಮಾಡುತ್ತದೆ".

ಕಾದಂಬರಿಯ ಆರಂಭದಲ್ಲಿ ವಿಶ್ವನಾಥ ಎತ್ತುವ ಭಗತ್‌ಸಿಂಗ್, ಸುಖ್‌ದೇವ್ ಬಗೆಗಿನ ಪ್ರಶ್ನೆಗೆ ಶೇಖರ ಹೀಗೆ ಹೇಳುತ್ತಾನೆ. 'ಅವರ ಮಾತು ಬ್ಯಾರೆ ದೇಸಾಯರೆ. ಅದು ಹಿಂಸಾತ್ಮಕ ಕ್ರಾಂತಿ. ನಮ್ಮದು ಅಂಥ ಕ್ರಾಂತಿ ಏನೂ ಅಲ್ಲ. ಪಿಸ್ತೂಲು ಬಂದೂಕು ಹಿಡಿದ ಮಾತ್ರಕ್ಕೆ ನಾವು ಹಿಂಸೆ ಮಾಡೋದಿಕ್ಕೆ ಹೊಂಟೀವಿ ಅಂತ ತಿಳೀಬಾರದು. ಈ ಮಾತು ಭಗತ್‌ಸಿಂಗ್ ಗುಂಪಿನಕ್ರಾಂತಿ ಹಿಂಸಾವಾದಿ ನೆಲೆಯದು ಎಂಬುದನ್ನು ಬಿಂಬಿಸುತ್ತದೆ. ಹಾಗೆ ನೋಡಿದರೆ ಭಗತ್‌ಸಿಂಗ್ ಗುಂಪಿನ ಕ್ರಾಂತಿಯ ಸ್ಥಿತಿಗೂ ಶೇಖರನ ಗುಂಪಿನ ಕ್ರಾಂತಿಯ ಸ್ಥಿತಿಗೂ ಏನೇನು ವ್ಯತ್ಯಾಸವಿಲ್ಲ. ಭಗತ್‌ಸಿಂಗ್ ಸಹ ಅವತ್ತಿನ ಬ್ರಿಟಿಷ್ ನೇತೃತ್ವದ ಪಾರ್ಲಿಮೆಂಟ್ ಸಭೆಗೆ ಹುಸಿಬಾಂಬ್ ಎಸೆಯುತ್ತಾನೆ. ಅಲ್ಲಿ ಭಗತ್‌ಸಿಂಗ್ ಮತ್ತು ಅನವ ಸ್ನೇಹಿತರ ಗುರಿ ಹಿಂಸೆ ಆಗಿರಲಿಲ್ಲ. ಭಯ ಹುಟ್ಟಿಸುವುದಾಗಿತ್ತು. ಆ ಮೂಲಕ ಬಂಧನಕ್ಕೊಳಗಾಗಿ ನ್ಯಾಯಾಲಯದ ಮೂಲಕ ಕ್ರಾಂತಿ ವಿಚಾರಗಳನ್ನು, ಸ್ವಾತಂತ್ರ್ಯದ ಅಭೀಪ್ಸೆಗಳನ್ನು ಬಿತ್ತುವುದೇ ಆಗಿತ್ತು. ಈ ವಸ್ತುಸ್ಥಿತಿಯನ್ನು ಕಾದಂಬರಿಕಾರರು ಅರ್ಥಮಾಡಿಕೊಳ್ಳದೇ ಅಥವಾ ಗಮನಕ್ಕೆ ತೆಗೆದುಕೊಳ್ಳದೇ ಭಗತ್ ಸುಖದೇವ್ ಅವರನ್ನು ಹಿಂಸಾವಾದಿಗಳೆಂದು ಪಾತ್ರಗಳ ಮೂಲಕ ಹೇಳಿಸಿರುವುದು ಅಸ್ವಾಭಾವಿಕವಾಗಿದೆ. ಹಾಗೆ ಹೇಳಸಿಯೂ ಅದೇ ಪಾತ್ರಗಳನ್ನು ಭಗತ್ ಸುಖದೇವ್ ಅವರಿಗಿಂತ ಭಿನ್ನವಾಗಿ ಚಿತಕ್ರಿಸದೇ ಹೋದದ್ದೂ ಸಹ ಕಾದಂಬರಿಯ ದೋಷವಾಗಿದೆ ಕಟ್ಟೀಮನಿ ಅವನ ಮುಂದೆ ಚರಿತ್ರೆಯ ಸ್ಪಷ್ಟ ಮಾಹಿತಿಗಳ ಕೊರತೆ ಇರುವುದು ಈ ಮೂಲಕ ಸ್ಪಷ್ಟವಾಗುತ್ತದೆ.

ಸಂಗಣ್ಣ ಬ್ರಿಟೀಷರಿಂದ ಬಂಧನವಾದ ನಂತರ ಶೇಖರ್, ಹೇಮಾವತಿ ಮತ್ತು

ವಿಶ್ವನಾಥ ಇತರರೊಡಗೂಡಿ ಚಳುವಳಿಯನ್ನು ಮುಂದುವರೆಸುತ್ತಾರೆ.

ವಿಶ್ವನಾಥ ಮತ್ತು ಹೇಮಾವತಿ, ಸಂಗಣ್ಣ ಬಂಧನವಾದ ಸಂದರ್ಭವನ್ನು ನೆನಪಿಸಿಕೊಳ್ಳುತ್ತ ಬಲಗೈಯ ಬೆರಳುಗಳಿಗೆ ಎಡಗೈಯ ಬೆರಳುಗಳನ್ನು ಹೆಣೆದು, ಎರಡು ಕೈಗಳನ್ನೂ ಮೇಲಕ್ಕೆತ್ತಿ ಒಂದು ಸಲ ಆಕಳಿಸಿದಳು ಹೇಮಾ.

ಸೈಕ್ಲೋಸ್ಟೈಲ್ ಯಂತ್ರಕ್ಕೆ ಮಸಿ ಹಚ್ಚುವ ತನ್ನ ಕಾಯಕವನ್ನು ನಿಲ್ಲಿಸಿ, ಪಕ್ಕದಲ್ಲಿ ಬಿದ್ದುಕೊಂಡಿದ್ದ ಕಾಗದದ ತುಂಡಿನಿಂದ ಕೈಗಳನ್ನೊರಸಿಕೊಂಡು ವಿಶ್ವನಾಥ ಜತೆಗಾತಿಯ ಕಡೆತೆ ಹೊರಳಿ ನೋಡಿದ. ಕಾಗದ ಹಾಕಿ, ಯಂತ್ರದ ಮುಚ್ಚಳವನ್ನೆತ್ತಿ ಇಳಿಸಿ ಅವಳ ಕೈಗಳೆರಡೂ ಸೋತು ಹೋಗಿದ್ದವು. ರಾತ್ರಿಯೆಲ್ಲ ನಿದ್ರೆಯಿಲ್ಲದೆ ದುಡಿದುದರಿಂದ ಅವಳ ಕಣ್ಣುಗಳೆರಡೂ ಕೆಂಪಾಗಿದ್ದವು. ಹಲವಾರು ಗಂಟೆಗಳ ಸತತ ಶ್ರಮದಿಂದಾಗಿ ಅವಳ ಮುಖ ಕೆಂಪೇರಿದ್ದಿತು.

ಪೆಟ್ಟಿಗೆಯಲ್ಲಿನ ಕೊನೆಯ ಸಿಗರೇಟನ್ನು ಹೊತ್ತಿಸುತ್ತ ಆತ ಅವಳನ್ನು ಅಕ್ಕರೆಯಿಂದ ನಿಟ್ಟಿಸಿ ನೋಡಿದ. ನೋಡಿದ ಹಾಗೆಲ್ಲ ಅವಳ ಬಗೆಗೆ ಅಭಿಮಾನ ತುಂಬಿ ಬಿರುತ್ತಿತ್ತು. ಕಳೆದ ತಿಂಗಳು ಬೆಳಗಾವಿಯನ್ನು ಬಿಟ್ಟು ತಮ್ಮ ತಂಡವನ್ನು ಕೂಡಿಕೊಂಡಂದಿನಿಂದ ಎಷ್ಟು ಉತ್ಸಾಹದಿಂದ ದುಡಿಯುತ್ತಿದ್ದಳಾಕೆ? ಕರಪತ್ರಗಳನ್ನು ಹೊರಡಿಸುವುದಕ್ಕಾಗಿಯೇ ದುಡಿಯುತ್ತಿದ್ದಳಾಕೆ? ಕರಪತ್ರಗಳನ್ನು ಹೊರಡಿಸುವುದಕ್ಕಾಗಿಯೇ ಇಲ್ಲಿ–ಅಡವಿಯೊಳಗಿನ ಲಂಬಾಣಿಗಳ ತಾಂಡೆಯಲ್ಲಿ–ಅವರ ನೆರವಿನಿಂದ ಒಂದು ಗುಡಿಸಲನ್ನು ತೆಗೆದುಕೊಂಡು ಬೀಡು ಬಿಟ್ಟಂದಿನಿಂದ ಹೇಮಾ ಹಗಲಿರುಳೂ ಕೆಲಸ ಮಾಡುತ್ತಾ ಬಂದಿದ್ದಳು. ತಂಡದವರು ದಿನವೂ ನಡೆಸುತ್ತಿದ್ದ ಕಾರ್ಯ ಕಲಾಪಗಳ ಅದ್ಭುತ ಕಥೆಯನ್ನೆಲ್ಲ ಆತ ಬರೆದು ತೆಗೆದಯುತ್ತಿದ್ದ. ಅನಂತರ ಪ್ರತಿ ತೆಗೆಯುವ ಕಾರ್ಯ. ದಿನವೂ ಸಾವಿರಾರು ಪ್ರತಿಗಳನ್ನು ತೆಗೆಯಬೇಕಾಗುತ್ತಿತ್ತು. ಕಟ್ಟಿಗೆ ಹೊರೆ ಹೊತ್ತು ಊರೂರು ತಿರುಗುವ ನಂಬಿಕೆಯ ಲಂಬಾಣಿಗಳೊಂದಿಗೆ ಅವುಗಳನ್ನು ಕಳುಹಿಸಿ ಕೊಡಬೇಕಾಗುತ್ತಿತ್ತು.

ಬಾಳಪ್ಪ, ಸಂಗಣ್ಣ ಸೆರೆಮನೆಗೆ. ಹೋದರೂ ಗುಂಪಿನ ಬಲವೇನೂ ಕಡಿಮೆಯಾಗಿರಲಿಲ್ಲ. ದಿನ ಕಳೆದಂತೆಲ್ಲ ಹೊಸ ಹೊಸ ಜನ ಬಂದು ಸೇರಿಕೊಳ್ಳುತ್ತಿತ್ತು. ಕಲ್ಲಾಪುರದ ಸೀಮೆಯಲ್ಲಿ ಪೋಲೀಸರ ಕಾವಲು ಬಲಗೊಂಡಿದ್ದರಿಂದಾಗಿ ಗುಂಪು ಈಗ ಪಶ್ಚಿಮಕ್ಕೆ ತಿರುಗಿ ಈ ತಾಲ್ಲೂಕಿನಲ್ಲಿ ಕಾರ್ಯ ಸಾಗಿಸಿದ್ದಿತು. ತಾವು ಈ ಕಡೆಗೆ ಬರುವುದಕ್ಕೆ ಮೊದಲೇ ಇಲ್ಲಿ ಕೆಲಸ ಸಾಗಿಸಿದ್ದ ಹುರುಪಿನ ಬಂಟರನೇಕರು ತಮ್ಮನ್ನು ಕೂಡಿಕೊಂಡಿದ್ದರು. ಒಂದು ತಿಂಗಳಿನ ಅವಧಿಯಲ್ಲಿ ನೂರಾರು ಕಾರ್ಯಗಳನ್ನು ಮಾಡಿ ಮುಗಿಸಲಾಗಿದ್ದಿತು. ಹಳ್ಳಿ ಹಳ್ಳಿಗಳನ್ನು ಸುತ್ತಿ, ಚಾವಡಿಗಳನ್ನು ಸುಟ್ಟು, ಗೌಡ ಕುಲಕರ್ಣಿಯರ ದಪ್ತರುಗಳನು ನಾಶಗೊಳಿಸಲಾಗಿದ್ದಿತು. ಅನೇಕ ಕಡೆಗಳಲ್ಲಿ ಕತ್ತಿ ಮೊದಲಾದ ಆಯುಧಗಳನ್ನು ಕಸಿದುಕೊಳ್ಳಲಾಗಿದ್ದಿತು. ಅಂಚೆಯ ಕಛೇರಿಗಳನ್ನು ಸುಡಲಾಗಿದ್ದಿತು. ಸರಕಾರದ ಯಂತ್ರವನ್ನು

ಸುತ್ತೂ ಕಡೆಯಿಂದಲೂ ಮುರಿದು ಹಾಕಲು ಭೀಕರ ಹೋರಾಟ ನಡೆದಿತ್ತು.

ಆ ಹೋರಾಟದಲ್ಲಿ ಸಹಾಯುವಾಗುವ ಹಾಗೆ ತಾವು ಕರಪತ್ರಗಳನ್ನು ಹೊರಡಿಸಬೇಕಾಗಿದ್ದಿತ್ತು. ಆಗಸ್ಟ್ ತಿಂಗಳಿನಲ್ಲಿ ಚಳವಳಿಯ ಬಗ್ಗೆ ಜನತೆಯಲ್ಲಿ ಎಂಥ ಉತ್ಸಾಹವಿದ್ದಿತೋ ಅದೇ ಕೊನೆಯವರೆಗೂ ಉಳಿಯುವಂತೆ ಮಾಡಲು ಈ ಬಗೆಯ ಪ್ರಚಾರಕಾರ್ಯ ಅಗತ್ಯವಾಗಿದ್ದಿತು. ನಲವತ್ತು ಐವತ್ತು ಜನರನ್ನೊಳಗೊಂಡ ಆ ಗುಂಪಿನಲ್ಲೆಲ್ಲ ಹೆಚ್ಚಾಗಿ ಓದಿದವರೆಂದರೆ ತಾವಿಬ್ಬರೇ. ಮಿಕ್ಕವರೆಲ್ಲ ಹಳ್ಳಿಯವರು, ಹೊಲದಲ್ಲಿ ದುಡಿಯುವ ರೈತರು. ಅವರ ಉತ್ಸಾಹ ಉಕ್ಕೇರುವಂತೆ ಮಾಡಲು, ಚಳವಳಿಗಾರರಿಗೆ ಜನತೆಯಿಂದ ಸಕಲ ವಿಧದ ಸಹಾಯ ದೊರೆಯುವಂತೆ ಮಾಡಲು ತಾವಿಬ್ಬರೂ ದುಡಿಯಬೇಕಾಗಿತ್ತು. ಪ್ರತ್ಯಕ್ಷವಾಗಿ ರಣರಂಗಕ್ಕೆ ಧುಮುಕಿ, ಕಾಡು ಬೆಟ್ಟಗಳನ್ನು ಸುತ್ತುತ್ತ ಹೋರಾಟ ಸಾಗಿಸುವುದು ಹೆಂಗುಸದ ತನಗೆ ಸಾಧ್ಯವಾಗದಿದ್ದರೂ ಆ ಕೆಲಸ ಮಾಡುವವರಿಗೆ ಸಹಾಯವಾಗುವಂಥ ಈ ಕೆಲಸ ಮಾಡುವ ಸಂಧಿಯಾದರೂ ದೊರೆಯಿತಲ್ಲ! ಎಂದು ಹೇಮಾವತಿಗೆ ಹರ್ಷವಾಗಿದ್ದಿತು. ಪಟ್ಟಣದಲ್ಲಿ ಬೆಳೆದು, ಪುಣೆಯಂಥ ಮಹಾನಗರದಲ್ಲಿ ಕಾಲೇಜಿನಲಿ ಕಲಿಯುತ್ತಿದ್ದ ಯುವತಿಯಾದರೂ ಆಕೆಗೆ ಈ ಲಂಬಾಣಿಗರ ತಾಂಡೆಯಲ್ಲಿನ ವಿಲಕ್ಷಣ ಜೀವನ ಕೊಂಚವೂ ಬೇಸರವನ್ನುಂಟುಮಾಡಲಿಲ್ಲ. ಪೊಲೀಸರಿಗೆ ಸಂದೇಹ ಬರದಿರುವಂತೆ ಆ ಕೆಲಸ ಸಾಗಿಸಬೇಕಾದರೆ ಇಂಥ ಸುರಕ್ಷಿತವಾದ ಸ್ಥಳ ಇನ್ನೊಂದು ಸಿಕ್ಕುವುದು ಸಾಧ್ಯವಿರಲಿಲ್ಲವೆಂದೇ ಆ ತಾಂಡೆಯನ್ನು ಆರಿಸಲಾಗಿದ್ದಿತು. ಅದರ ಮುಖಂಡನಾದ ಭೀಮಸಿಂಗನೂ ಶೇಖರನ ಗುಂಪಿನವರೊಲ್ಲಬ್ಬನಾಗಿದ್ದು ಅವರಿಗೆ ಎಲ್ಲ ರೀತಿಯಲ್ಲೂ ನೆರವಾಗುತ್ತಿದ್ದುದರಿಂದ ಅಲ್ಲಿ ಕರಪತ್ರದ ಕಛೇರಿಯನ್ನೇರ್ಪಡಿಸಲೂ ಅನುಕೂಲವಾಗಿದ್ದಿತು. ಅವನ ಹೇಳಿಕೆಯ ಮೇರೆಗೆ ಆಕೆಯೂ ಲಂಬಾಣಿ ಹೆಂಗಸರಂಥ ವೇಷವನ್ನೇ ಧರಿಸಬೇಕಾಗಿ ಬಂದಿತ್ತು. ಬಣ್ಣ ಬಣ್ಣಗಳ ಬಟ್ಟೆಗಳಿಂದ ಸಿದ್ಧವಾದ ಆ ನಿಲುವಂಗಿ! ಅಗಲವಾದ ದಂತದ ಕೈಬಳೆ! ಮೊದಲಿನ ನಾಲ್ಕೈದು ದಿನ ಆ ವೇಷ ವಿಚಿತ್ರವೆನಿಸಿದರೂ ಮುಂದೆ ಅದೂ ಅಭ್ಯಾಸವಾಗಿದ್ದಿತು. ತಮ್ಮ ವೇಷಧಾರಣೆ ಮಾಡುವ ಈ ಸುಶಿಕ್ಷಿತ ಯುವತಿಯ ಬಗ್ಗೆ ಲಂಬಾಣಿ ಹೆಂಗಸರಿಗೆಲ್ಲ ಆತ್ಮೀಯತೆ ಹುಟ್ಟಿಕೊಂಡಿದ್ದಿತು. ಒಂದು ತಿಂಗಳಿನ ವಸತಿಯಿಂದಾಗಿ ಹೇಮಾವತಿಗೂ ಆ ಜನರ ಬಗ್ಗೆ ಆತ್ಮೀಯತೆಯುಂಟಾಗಿದ್ದಿತು.

ಶೇಖರನ ಗುಂಪಿಗೆ ಹೊಸದಾಗಿ ಸೇರಿದ ಹುರುಪಿನ ಯುವಕರಲ್ಲಿ ಬಸವಣ್ಣೆಪ್ಪನೂ ಒಬ್ಬ. ಆತನಿಗೆ ಸುಮಾರು ಮೂವತ್ತು ವರ್ಷ ವಯಸ್ಸಿರಬಹುದು. ಹಳ್ಳಿಯೂರಿನಲ್ಲಿ ಬೇಸಾಯ ಮಾಡುತ್ತ ಜೀವನ ಸಾಗಿಸುತ್ತಿದ್ದವನು ಚಳುವಳಿಗಳಲ್ಲೂ ಭಾಗವಹಿಸುತ್ತಿದ್ದು ಮೂರು ನಾಲ್ಕು ಸಲ ಸೆರಮನೆಯನ್ನೂ ಕಂಡುಬಂದಿದ್ದ. ಕಾಂಗ್ರೆಸ್ಸಿನ ಶಿಸ್ತಿಗೊಳಪಟ್ಟು ಸತ್ಯಾಗ್ರಹ ಮಾಡಿ ಕಾರಾಗೃಹಕ್ಕೆ ಹೋಗುತ್ತಿದ್ದನಾದರೂ ಅವನಿಗೆ ಆ ವಿಷಯದಲ್ಲಿ ಅಂಥ ಆಸಕ್ತಿಯೇನೂ ಇರಲಿಲ್ಲ. ಬರೀ ಸೆರೆಮನೆಗೆ ಹೋಗುವುದರಿಂದ ಯಾವ ಮಹಾ ಕಾರ್ಯವನ್ನು ಸಾಧಿಸಿದಂತಾಯಿತೆಂದು ಆತ ವಾದಿಸುತ್ತಿದ್ದ. ಸರಕಾರದ ಯಂತ್ರವನ್ನು ಮುರಿದು ಹಾಕದೆ,

ಕೇವಲ ಜೈಲುಗಳನ್ನು ತುಂಬುವುದರಿಂದ ಸ್ವಾತಂತ್ರ್ಯ ಬರುವುದು ಸಾಧ್ಯವೆಂದು ಅವನ ಭಾವನೆಯಾಗಿದ್ದಿತ್ತು. ಅಂತೆಯೇ 'ಚಲೇಜಾವ್' ಚಳವಳಿಯ ಕಹಳೆ ಮೊಳಗುತ್ತಲೂ ಆತ ಅತ್ಯುತ್ಸಾಹದಿಂದ ಕದನದ ರಂಗಕ್ಕೆ ಧುಮುಕಿದ್ದ. ತಮ್ಮೂರಿನ ಹಾಗೂ ಸುತ್ತಮುತ್ತಲಿನ ಹಳ್ಳಿಯ ಇಪ್ಪತ್ತು ಇಪ್ಪತ್ತೈದು ಜನ ಬಂಟರನ್ನು ಕೂಡಿಕೊಂಡು ಸುತ್ತ ಮುತ್ತಲಿನ ಪ್ರದೇಶದಲ್ಲಿ ಸರಕಾರದ ವಿರುದ್ಧ ಬಂಡು ಹೂಡಿದ್ದ. ಶೇಖರನಿಗೂ ಅವನಿಗೂ ಮೊದಲಿನಿಂದಲೂ ಗೆಳತನವಿದ್ದಿತು. ಕಲ್ಲಾಪುರದಿಂದ ಶೇಖರನ ಗುಂಪಿನವರು ತಮ್ಮ ಊರಿಗೆ ಬಂದಾಗ ಎಲ್ಲರಿಗೂ ಕೂಡಿ ಪ್ರಬಲವಾದ ಸೇನೆಯೊಂದನ್ನು ಕಟ್ಟಿ ಸುಸಂಘಟಿತವಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಿರ್ಧರಿಸಿದ್ದ ಅದರಂತೆಯೇ ಈಗ ಬಸವಣ್ಣೆಪ್ಪನ ಹಳ್ಳಿಯೇ ಈ ಸಂಯುಕ್ತ ಪಡೆಯ ಕೇಂದ್ರ ಸ್ಥಳವಾಗಿದ್ದಿತು. ಅದರಿಂದ ಕೆಲವು ಮೈಲುಗಳು ದೂರದಲ್ಲಿ ಕರಪತ್ರಗಳ ಕಛೇರಿಗಾಗಿ ಏರ್ಪಡಿಸಲ್ಪಟ್ಟ ಲಂಬಾಣಿಗರ ವಸತಿಯಿತ್ತು. ಕಟ್ಟಿಗೆ ಹೊತ್ತು ತಂದು ಮಾರುತ್ತ ತಿರುಗುವ ಲಂಬಾಣಿಗರ ಮೂಲಕವಾಗಿ ಕರಪತ್ರಗಳು ಊರಿಂದ ಊರಿಗೆ ಹಂಚಲ್ಪಡುವ ವ್ಯವಸ್ಥೆಯಾಗಿದ್ದಿತು.

ಹಳ್ಳಿಯಿಂದ ತುಸು ದೂರದಲ್ಲಿದ್ದ ತೋಟವೊಂದರಲ್ಲಿ ದೊಡ್ಡದೊಂದು ಗುಡಿಸಲಿನಲ್ಲಿ ಗುಂಪಿನವರ ಬಿಡಾರಕ್ಕೇರ್ಪಾಡಾಗಿದ್ದಿತು. ಗುಂಪಿನ ಆಯುಧಗಳೂ ಇನ್ನಿತರ ಸಾಮಗ್ರಿಗಳೂ ಅಲ್ಲಿಯೇ ಇರಿಸಲ್ಪಟ್ಟಿದ್ದವು. ಅವುಗಳನ್ನು ಕಾಯುವುದಕ್ಕಾಗಿ ಪಹರೆಯವರನ್ನೂ ನಿಯಮಿಸಲಾಗಿದ್ದಿತು.

ಬೆಳಗಿನ ಹತ್ತು ಗಂಟೆಯಾಗುತ್ತ ಬಂದಿತ್ತು. ಮುನ್ನಾದಿನದ ರಾತ್ರಿ ಒಂದು ಕೆಲಸ ತೀರಿಸಿ ಬಂದಿದ್ದರಾದುದರಿಂದ ಗುಂಪಿನವರಾರಿಗೂ ನಿದ್ರೆಯಿರಲಿಲ್ಲ. ಬೆಳಗಿನ ಜಾವದಲ್ಲಿ ಬಂದು ಮಲಗಿಕೊಂಡಿದ್ದ ಶೇಖರನಿಗೆ ಆಗತಾನೆ ಎಚ್ಚರವಾಗಿದ್ದಿತು. ಮಿಕ್ಕವರೆಲ್ಲ ಆಗಲೇ ಎದ್ದು ತೋಟದಲ್ಲಿದ್ದ ಮೊಟ್ಟೆಯ ಬಾವಿಯಲ್ಲಿ ಈಜಾಡುತ್ತಿದ್ದರು. ಬಸವಣ್ಣೆಪ್ಪ ಮತ್ತು ಶಂಕರಪ್ಪ ಮಾಸ್ತರರಿಬ್ಬರೂ ಗುಡಿಸಲಿನಲ್ಲಿ ಕುಳಿತುಕೊಂಡು ಅಂದಿನ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಸಿದ್ದರು.

ಬ್ರಿಟಿಷರ ದ್ರೋಹಿಗಳು ಒಡ್ಡಿದ ಬಲೆಗೆ ಬೀಳಬೇಕಾದ ಸಂದರ್ಭವೇನೂ ಬಂದಿರಲಿಲ್ಲ. ವಿಶ್ವನಾಥ-ಹೇಮಾವತಿಯವರಿಗೆ. ಆದರೆ ಸುತ್ತಮುತ್ತಲಿನ ಪ್ರದೇಶದಲ್ಲೆಲ್ಲ ಪೋಲಿಸರು ಹರಡಿದ್ದ ಬಲೆಯಿಂದ ಉಪಾಯವಾಗಿ ಹೊರಬಿದ್ದು ಸುರಕ್ಷಿತವಾಗಿದ್ದ ಒಂದು ಸ್ಥಳವನ್ನು ಸೇರಿಕೊಳ್ಳಬೇಕಾದ ಕಠಿಣ ಪ್ರಸಂಗ ಬಂದೊದಗಿತು.

ಅಂದು-ಲಂಬಾಣಿ ಹೆಣ್ಣು ಮಗಳ ಬಂಧನದಿಂದಾಗಿ ಅವರಿದ್ದ ತಾಣ ಪೋಲೀಸಿನವರಿಗೆ ತಿಳಿದುಬಂದಂದಿನಿಂದ ಅವರು ಅಲ್ಲಿ ಅಲೆಯುತ್ತಿದ್ದರು. ಮುನ್ನಾದಿನದ ರಾತ್ರಿ ಆಕೆ ಎಂದಿನಂತೆ ತಾಂಡೆಗೆ ಬರಲಿಲ್ಲವಾದ್ದರಿಂದ ಅಲ್ಲಿ ಗೊಂದಲವುಂಟಾಗಿತ್ತು. ರಾತ್ರಿ ಆಕೆ ಎಂದಿನಂತೆ ತಾಂಡೆಗೆ ಬರಲಿಲ್ಲವಾದ್ದರಿಂದ ಅಲ್ಲಿ ಗೊಂದಲವುಂಟಾಗಿತ್ತು. ಆಕೆಯ ಗಂಡನೊಂದಿಗೆ ಹೋದ ಹುಡುಗನೊಬ್ಬ, ಬಂಧನದ ಮರುದಿನ ಬೆಳಗಿನಲ್ಲಿ ಆಕೆಯ ಗಂಡನೊಂದಿಗೆ ಹೋದ ಹುಡುಗನೊಬ್ಬ, ಬಂಧನದ

ಸುದ್ದಿ ನಿಜವೆಂದು ತಿಳಿಯುತ್ತಲೂ ಮೊದಲೇ ಓಡುತ್ತ ಬಂದು ಎಚ್ಚರಿಕೆ ಕೊಟ್ಟಿದುದ್ದರಿಂದಾಗಿ ಅವರಿಬ್ಬರೂ ಸಾಮಾನುಗಳನ್ನು ನೆಲದಲ್ಲಿ ಹೂಳಿ ಅಡಗಿಸಿಟ್ಟು ಅಲ್ಲಿಂದ ತಕ್ಷಣ ಹೊರಟುಬಿಡಬೇಕಾಗಿ ಬಂದಿತು. ಹಳ್ಳಿಯ ಒಕ್ಕಲಿಗರ ಹಾಗೆ ಬಟ್ಟೆ ಬರೆ ಮಾಡಿಕೊಂಡು ಅವರಿಬ್ಬರೂ ತಾಂಡೆಯನ್ನು ತೊರೆದು ಬಂದಿದ್ದರು. ದಾರಿಯಲ್ಲಿ ಕೆಲವು ಪೊಲೀಸರನ್ನೂ ಕಂಡಿದ್ದರು.

ಆದರೆ ಹೊಲದಲ್ಲಿ ದುಡಿಯುವ ರೈತರಂತೆ ತೋರುತ್ತಿದ್ದ ಇವರನ್ನು ಕಂಡು ಅವರಿಗೆ ಯಾವ ಸಂದೇಹವೂ ಹುಟ್ಟಿಕೊಂಡಿರಲಿಲ್ಲ. ತಮ್ಮ ದೈವವನ್ನು ಕೊಂಡಾಡುತ್ತ ಹತ್ತು ಹನ್ನೆರಡು ಮೈಲು ಹಾದಿ ತುಳಿದು ಗುಡ್ಡದ ತಪ್ಪಲನ್ನು ಸೇರಿದ್ದರು. ಹಗಲು ಹೊತ್ತು ಹೊರಕ್ಕೆ ಹೊರಡುವುದೂ ಗಂಡಾಂತರದ್ದಾಗಿತ್ತು. ಹಿಂದುಸ್ಥಾನದಲ್ಲಿನ ಎಲ್ಲ ಪೊಲೀಸರೂ ಆ ಪ್ರದೇಶದಲ್ಲಿಯೆ ಬಂದು ತಿರುಗುತ್ತಿದ್ದ ಹಾಗೆ ತೋರುತ್ತಿತ್ತು. ದೊಡ್ಡ ರಾಜಮಾರ್ಗದ ಹತ್ತಿರ ಸುಳಿಯುವುದಂತೂ ಸಾಹಸ ಕೆಲಸವೇ ಆಗಿದ್ದಿತು. ಅಂತೆಯೇ ಸಣ್ಣಪುಟ್ಟ ಕಾಲುದಾರಿಗಳನ್ನೂ ಹುಡುಕಿಕೊಂಡು ಜನನಿಬಿಡವಾದ ಪ್ರದೇಶಗಳೊಳಗಿನಿಂದ ಹಾಯ್ದು ಅವರು ಮುಂದುವರಿಯಬೇಕಾಗಿದ್ದಿತು.

ಆ ದಿನ ರಾತ್ರಿ ಸೊಗಲದ ಕೊಳ್ಳದಲ್ಲಿದ್ದ ಹಾಳು ಗುಡಿಯೊಂದರಲ್ಲಿ ಅವರು ತಂಗಬೇಕಾಗಿ ಬಂದಿತ್ತು. ಸುತ್ತಮುತ್ತ ಸಮೀಪದಲ್ಲಿ ಹಳ್ಳಿಗಳಾವುವೂ ಇದ್ದ ಹಂಗೆ ತೋರಲಿಲ್ಲ. ಇದ್ದರೂ, ಈ ಕಾಲದಲ್ಲಿ ಅಲ್ಲಿಗೆ ಹೋಗಿ ವಸತಿ ಮಾಡುವುದೂ ಸಾಹಸದ ಮಾತಾಗಿದ್ದಿತು. ಯಾವಾಗ ಯಾವ ಹಳ್ಳಿಯನ್ನು ಪೊಲೀಸರು ಮುತ್ತುವರೆಂಬ ನಿಯಮವಿರಲಿಲ್ಲ. ಅಂತೆಯೇ ಹಳ್ಳಿಗಳಿಗೆ ಹೋಗದೆ ಗುಡ್ಡಗಳಲ್ಲೇ ಅಡಗಿಕೊಳ್ಳುವುದು ಅಗತ್ಯವಾಗಿದ್ದಿತು. ರಾತ್ರಿಯಾಗುವ ಹೊತ್ತಿಗೆ ಆ ಗುಡಿಯ ಬಳಿ ಬಂದುದರಿಂದಾಗಿ ಅವರಿಗೆ ಅಂತ ಪರಿಸ್ಥಿತಿಯಲ್ಲೂ ಕೊಂಚ ಸಂತಸವೇ ಆಗಿದ್ದಿತು.

ಬಾಬಾ ದೇಸಾಯಿಯವರು ತಮ್ಮ ಮಗನಾದ ವಿಶ್ವನಾಥ ದೇಸಾಯಿಯವರನ್ನು ಮನೆಗೆ ಕರೆತರಲು ಮಾಡಿದ ಪ್ರಯತ್ನ ವಿಫಲವಾಯಿತು. ನಂತರ ಶೇಖರನ ಗುಂಪಿನವರನ್ನೆಲ್ಲ ಸೆರೆಹಿಡಿಯಲು ಮಾಡಿದ ಕುತಂತ್ರದಿಂದ ತಮ್ಮ ಮಗನನ್ನೆ ಬಾಬಾ ದೇಸಾಯಿಯವರು ಕಳೆದುಕೊಳ್ಳಬೇಕಾಗುತ್ತದೆ. ನಂತರ ಅವರು ಪಶ್ಚಾತಪದಿಂದ ಬ್ರಿಟಿಷರ ಪರವಾಗಿದ್ದರೆ ನಮಗೆ ಉಳಿಗಾಲವಿಲ್ಲವೆಂದು ಅವರು ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಾರೆ.

ಕುಂದರನಾಡಿನ ಮೇಲಿನ (ಬೆಳಗಾವಿ, ಗೋಕಾಕ ಮತ್ತು ಹುಕ್ಕೇರಿ ತಾಲ್ಲೂಕುಗಳಿಗೆ ಸೇರಿದ ನಲವತ್ತು ಹಳ್ಳಿಗಳನ್ನು ಕುಂದುರನಾಡು ಎಂದು ಕರೆಯಲಾಗುತ್ತದೆ) ಅಭಿಮಾನದಿಂದಾಗಿ ಬಯಲು ಸೀಮೆಯ ಸಾತವ್ವಳನ್ನು ಹೇಡಿಯಂತೆ ಚಿತ್ರಿಸಲಾಗಿದೆ. ಸಂಗಣ್ಣನ ತಾಯಿ ಸಾಂತವ್ವ ಭೂಗತನಾಗಿದ್ದ ಸಂಗಣ್ಣನಿಗಾಗಿ ಕೊರಗುತ್ತಾಳೆ. ದುಃಖಿಸುತ್ತಾಳೆ ಸಂಗಣ್ಣನ ಮಡದಿ ಸಿದ್ದವ್ವ ಅದಕ್ಕೆ ವ್ಯತಿರಿಕ್ತ, ಗಂಡನ ಅವನಿಗಾಗಿ ಹಂಬಲಿಸುತ್ತಾಳೆ.

ಬಗೆಗೆ ಅಳುಕುವುದಿಲ್ಲ. ಮರುಗುವುದಿಲ್ಲ, ಹಂಬಲಿಸುವುದಿಲ್ಲ, ಅದಕ್ಕೆ ಕಾದಂಬರಿಆರರು ಪಾರ್ವತವ್ವನ ಮೂಲಕ ಹೀಗೆ ಹೇಳಿಸುತ್ತಾರೆ. 'ಗೋಕಾವಿಯ ಹುಡುಗಿ ಅಪ್ಪಾ ಆಕೆ ಕುಂದರನಾಡಿನ ಮಗಳು ಗಟ್ಟಿ ಆದಾಳ. ನಿಮ್ಮವ್ವ ಬಯಲು ಸೀಮೆಯವಳು. ಅದಕ್ಕೆ ಹಾಂಗ ಅದಾಳೋ ಏನೋ ಎಲ್ಲರೂ ಒಂದು ತರಹ ಎಲ್ಲಿರುತಾರ ಪ್ರಪಂಚದಾಗ? ಹೋಗಲಿಬಿಡು! ಇಲ್ಲಿ ಕುಂದರನಾಡಿನ ಹೆಣ್ಣು ಮಗಳು ಧೀರೆ, ಬಯಲು ಸೀಮೆಯ ಹೆಣ್ಣು ಮಗಳು ಹೇಡಿ ಎಂಬುದು ವ್ಯಕ್ತವಾಗುತ್ತದೆ. ಹಾಗೆ ನೋಡಿದರೆ ಸಾತವ್ವಳ ತ್ಯಾಗ, ವೀರಗುಣ, ಸಿದ್ದವ್ವಳ್ಳಿ ವ್ಯಕ್ತವಾಗುವುದಿಲ್ಲ. ಮಗನಿಗೆ ಫೌಜುದಾರ ಪಿಸ್ತೂಲಿನ ಗುರಿ ಇಟ್ಟು ಹೊಡೆದಾಗ ಸಾತವ್ವ ಮಧ್ಯೆ ನುಗ್ಗಿ ಮಗನನ್ನು ಉಳಿಸಿ ತಾನು ಸಾಯುತ್ತಾಳೆ. ಆ ಮೂಲಕ ಸ್ವಾತಂತ್ರ್ಯ ಹೋರಾಟಗಾರನೊಬ್ಬನನ್ನು ಬದುಕಿಸಿದವಳು. ಹಾಗಿದ್ದರೂ ಕಟ್ಟೀಮನಿ ಇವಳು ಬಯಲು ಸೀಮೆಯ ಹೆಣ್ಣು ಎಂದು ಪ್ರಾದೇಶಿಕತೆಯ ಪಕ್ಷಪಾತ ತೋರುವುದು. ಅಸಹಜವಾದುದಾಗಿದೆ. ಇದು ಕಾದಂಬರಿಯ ನಡೆಗೆ ಚ್ಯುತಿಯನ್ನುಂಟುಮಾಡಿದೆ. ಹೀಗೆ ಒಂದೆರಡು ಕಡೆ ಕಾದಂಬರಿಯ ಸಂವಿಧಾನಕ್ಕೆ ಭಂಗವನ್ನುಂಟು ಮಾಡಿದೆ. ಹೀಗೆ ಒಂದೆರಡು ಕಡೆ ಕಾದಂಬರಿಯ ಸಂವಿಧಾನಕ್ಕೆ ಭಂಗವನ್ನುಂಟು ಮಾಡಬಹುದಾದ ಚಿತ್ರಣವಿದ್ದರೂ 'ಮಾಡಿ ಮಡಿದವರು' ಕಾದಂಬರಿಯ ೧೯೪೨ರ ಕಾಲದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಬಿಚ್ಚಿಡುವಲ್ಲಿ ಯಶಸ್ವಿಯಾಗಿದೆ. "ಹೋರಾಟದ ವಸ್ತು ವೀರವತ್ತಾದ ಪಾತ್ರಚಿತ್ರಣ, ಕುತೂಹಲಪೂರ್ಣ ಸನ್ನಿವೇಶ, ಅರ್ಥಪೂರ್ಣ ಸಂಭಾಷಣೆ ಸೂರೆಗೊಳ್ಳುವ ಶೈಲಿ, ಈ ಎಲ್ಲ ಅಂಶಗಳಿಂದಾಗಿ 'ಮಾಡಿಮಡಿದವರು' ಕನ್ನಡದ ಒಂದು ಉತ್ಕೃಷ್ಟ ಕೃತಿಯಾಗಿ ನಿಲ್ಲುತ್ತದೆ.[೨]

ಕಟ್ಟಿಮೀನಿಯವರು ಮಾಡಿಮಡಿದರು ಸ್ವಾತಂತ್ರ್ಯದ ವಿಚಾರದ ಜೊತೆಗೆ ಹಳ್ಳಿಗಳ ಪ್ರಾಮುಖ್ಯತೆಯನ್ನು ಶ್ರೇಷ್ಠತೆಯನ್ನು ಸಾರಿದ್ದಾರೆ. ಹಳ್ಳಿಗರ ಜನರ ಮುಗ್ಧತೆ ಜೀವನ ಪ್ರೀತಿ, ತ್ಯಾಗ, ಸಾಹಸ, ಪ್ರಮಾಣಿಕತೆ ಮುಂತಾದವುಗಳನ್ನು ಹೊಗಳುವ ಮತ್ತು ವರ್ಣಿಸುವ ಹಾಗೆಯೇ ಜನರನ್ನು ನಗರದ ಕೃತಿಮತೆಯನ್ನು ನಗರದ ಮೋಸ ಕಪಟವನ್ನು ಬೆತ್ತಲೆ ಮಾಡಿದ್ದಾರೆ. ಹಳ್ಳಿ ನಗರಗಳ ವತ್ಯಾಸವನ್ನು ವರ್ಗ ಸಂಘರ್ಷದ ಪರಿಕಲ್ಪನೆಯಲ್ಲಿ ಬಿಚ್ಚಿಡುತ್ತಾರೆ.

ಹೀಗೆ ಬಸವರಾಜ ಕಟ್ಟೀಮನಿಯವರ 'ಮಾಡಿಮಡಿದವರು' ಕಾದಂಬರಿಯಲ್ಲಿ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಸವಿಸ್ತಾರವಾಗಿ ಗ್ರಾಮೀಣ ಪ್ರದೇಶದಲ್ಲಿ ಸ್ವಾತಂತ್ರ್ಯ ಚಳುವಳಿ ಯಾವ ಮಟ್ಟದಲ್ಲಿತ್ತು ಎಂಬುದನ್ನು ತಿಳಿಸಿದ್ದಾರೆ.

ಅಡಿಟಿಪ್ಪಣಿ

೧. ಡಾ. ಬಸವರಾಜ ಸಾದರ -ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು, ಮುದ್ರಣ - ೨೦೦೦, ಪು. ೨೨೪-೨೨೬

೨. ಡಾ. ಬೆಳ್ಳೂರು ವೆಂಕಟಪ್ಪ ಪ್ರಗತಿಶೀಲ ಕಥನ, ೨೦೧೧, ಪು. ೧೦೦-೧೦೧

ಅಧ್ಯಾಯ–೪

'ಚಿರಸ್ಮರಣೆ' ಕಾದಂಬರಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಣ ಮತ್ತು ಜೀವನ ಚಿಂತನೆ

ನಿರಂಜನರವರ ಕಥಾ ಸಾಹಿತ್ಯದಲ್ಲಿ ವರ್ಗಸಂಘರ್ಷದ ಗತಿ ತಾರ್ಕಿಕತೆ ಎದ್ದು ಕಾಣುವ ಅಂಶ ಅವರ ಕಥಾಸಾಹಿತ್ಯದಲ್ಲಿ ಶೋಷಕ ಶಕ್ತಿಗಳ ವಿರುದ್ಧ ಹೋರಾಟ ಸ್ಥಾಯಿಯಾಗಿದೆ ಬಿಡುಗಡೆ ಸಂಚಾರಿಯಾಗಿದೆ. ಹೆಣ್ಣು ಲೈಂಗಿಕ ಶೋಷಣೆಗೊಳಗಾಗುವ ಸ್ಥಿತಿಯನ್ನು ನಿರಂಜನರು ಪುರುಷ ಪ್ರಧಾನ ವ್ಯವಸ್ಥೆ ಮತ್ತು ಬಂಡವಾಳಶಾಹಿ ಎರಡು ನೆಲೆಯಲ್ಲೂ ಶೋಧಿಸಿದ್ದಾರೆ. ಪ್ರಗತಿಶೀಲಕ ಲೇಖಕರ ಪೈಕಿ ಎಡಪಂಥೀಯ ಸಿದ್ಧಾಂತಕ್ಕೆ ಬದ್ಧವರಾಗಿಯೂ ಸತ್ವಯುತವಾಗಿ ಬರೆದವರೆಲ್ಲ ನಿರಂಜನರು ಪ್ರಮುಖರು ಪುರೋಹಿತಶಾಹಿ, ಸಾಮ್ರಾಜ್ಯಶಾಹಿ, ಜಮೀನ್ದಾರ ವರ್ಗ, ಬಂಡವಾಳಶಾಹಿ ಮುಖಗಳ ಕೌರ್ಯವನ್ನು ನಿರಂಜನರವರು ಬಿಚ್ಚಿಟ್ಟಿದ್ದರೆ ಇನ್ನೊಂದು ಮಗ್ಗುಲಿನಿಂದ ಶೋಷಿತರ ಹೋರಾಟ ಸಂಘರ್ಷ ಬಿಡುಗಡೆಯ ಪ್ರಕ್ರಿಯೆಗಳು ಜರುಗುತ್ತವೆ.

ಸ್ವಾತಂತ್ರ್ಯ ಹೋರಾಟ, ರೈತ ಹೋರಾಟ ಎರಡನ್ನು ಏಕಕಾಲದಲ್ಲಿ ಪ್ರತಿನಿಧಿಸುವ ಕೃತಿ ಚಿರಸ್ಮರಣೆ ಸ್ವಾತಂತ್ರ್ಯ ಹೋರಾಟವು ದೇಶದ ಬಿಡುಗಡೆಯನ್ನು ಬಯಸಿದರೆ ರೈತ ಹೋರಾಟ ರೈತರ ಬಿಡುಗಡೆಯನ್ನು ಬಯಸುತ್ತದೆ. ಇಲ್ಲಿಯ ಹೋರಾಟಗಾರರಾದ ರೈತರಿಗೆ ವಸಾಹತುಶಾಹಿ ಮತುತ ಜಮೀನ್ದಾರರು ನೇರ ಶತ್ರುಗಳು ಜಮೀನ್ದಾರರ ವ್ಯವಸ್ಥೆ ಅಥವಾ ಊಳಿಗಮಾನ್ಯ ವ್ಯವಸ್ಥೆಯ ಬೆಂಬಲದಿಂದ ಸಾಮ್ರಾಜ್ಯಶಾಹಿ ಅಥವಾ ವಸಾಹತುಶಾಹಿ ನಿಂತಿದೆ.

ಇತಿಹಾಸದ ವಸ್ತುವೊಂದನ್ನು ಸಮಕಾಲೀನಗೊಳಿಸುವ ನಿರಂಜನರ ಸಾಹಿತ್ಯವು ರಾಷ್ಟ್ರೀಯತೆಯನ್ನು ಬೆಳೆಸುವ ದೃಷ್ಟಿಯಿಂದ ಬಹುಮುಖ್ಯವಾದುದಾಗಿದೆ. ಮನುಷ್ಯ ಹುಟ್ಟಿನಿಂದ ಸ್ವತಂತ್ರ ಆದರೆ ವ್ಯವಸ್ಥೆ ಅವನನ್ನು ದಾಸನನ್ನಾಗಿ ಮಾಡಿಕೊಳ್ಳುತ್ತದೆ. ಅಂಥ ದಾಸ್ಯತ್ವದಿಂದ ಬಿಡುಗಡೆ ಹೊಂದಲು ನಡೆಸುವ ಸಂಘರ್ಷದ ಒಂದು ಭಾಗವಾಗಿದೆ ಚಿರಸ್ಮರಣೆ ಕೃತಿ.[೧]

ಶ್ರಮಿಕವರ್ಗದ ಪ್ರಭುತ್ವ ಸ್ಥಾಪಿಸಿ ಬಂಡವಾಳಶಾಹಿಯನ್ನು ಕಿತ್ತೆಸೆಯುವ ಖಾಸಗಿ ಆಸ್ತಿ ಇಲ್ಲದ ವರ್ಗರಹಿತ ನವ ಸಮಾಜ ನಿರ್ಮಾಣವನ್ನು ಮಾಡುವ ಆಶಯವನ್ನು ಕವಿ ತಮ್ಮ ರೀತಿಯಲ್ಲಿ ಈ ಕಾದಂಬರಿಯಲ್ಲಿ ಕಾಸರಗೋಡಿನ ಕಯ್ಯೂರನಲ್ಲಿ ನಡೆದ ಒಂದು ವಾಸ್ತವ ಕಥೆಯನ್ನು ಹೇಳುತ್ತಾ ಅಥವಾ ಹೋರಾಟದ ಚಿತ್ರಣವನ್ನು ಹೇಳುತ್ತಾ ಕೇರಳದ ಶ್ರಮ ಜೀವಿಗಳ ಭಾರತದ ಸ್ವಾತಂತ್ರ್ಯಕ್ಕೆ ಕೊಟ್ಟ ಕಾಣಿಕೆಯನ್ನು ಇಲ್ಲಿ ತಿಳಿಸಲಾಗಿದೆ. ಅಪ್ಪು

ಚಿರುಕುಂಡ, ಕುಞಂಬ, ಅಬೂಬಕರ್, ದೇವಕಿ ನಂಬಿಯಾರ್ ಇವುಗಳ ಈ ಕಾದಂಬರಿಯ ಪ್ರಮುಖ ಪಾತ್ರಗಳಾಗಿದ್ದು ಈ ಕೃತಿಯಲ್ಲೂ ಸಹ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಹಲವಾರು ಅಂಶಗಳಿವೆ. ಚಿರಕುಂಡ ಮತ್ತು ಅಪ್ಪು ಇಬ್ಬರೂ ಒಳ್ಳೆಯ ಸ್ನೇಹಿತರಾಗಿದ್ದು ಚಿರುಕುಂಡ ಹದಿಹರೆಯದ ಒಳ್ಳೆಯ ಮೆದುಳಿನ ಸೂಕ್ಷ್ಮಮತಿ ದೂರಲೋಚಕ ಅಪ್ಪು ಒಳ್ಳೆಯ ಹೃದಯ ಉಳ್ಳದ ಇವನಿಗೆ ಅವನು ಅವನಿಗೆ ಇವನು ಅವಲಂಬನೆ ಇಬ್ಬರಿಗೂ ಮಾಸ್ತರರು ಆದರ್ಶ ಮಾಸ್ತರಿಗೂ ಶಿಷ್ಯರ ಮೇಲೆ ಅಷ್ಟೇ ಮಮತೆ ಇವರೆಲ್ಲರಿಗೂ ಸಮಾಜದ ಕಾಯಿಲೆಗೆ ಔಷಧ ಪಂಡಿತರಲ್ಲಿ ಗೌರವ ಮಾಸ್ತರರು ಪಂಡಿತರು ಆಡುವ ಮಾತುಗಳನ್ನು ಅಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವ ಈ ತರುಣ ಕ್ರಾಂತಿಕಾರಿಗಳಿಗೆ ಮಾಸ್ತರರು ಒಂದು ಸೆಳೆತ "ರೈತರಿಗೆ ಅನ್ಯಾಯವಾಗಿದೆ. ನಾವು ಗುಮಾಲರು ಹೋರಾಡಿ ಗುಲಾಮಗಿರಿಯ ಬೇಡಿ ಮುರಿಯಬೇಕು ಎಂದಷ್ಟೆ ಪಂಡಿತರ ಭಾಷಣದಿಂದ ಅರ್ಥವಾಗುವುದು ಪತ್ರಿಕೆ ಪುಸ್ತಕ ಓದುವ ಈ ತರುಣರಿಗೆ ಅದೇ ಕನಸು ಗುರಿ ಚಹದಂಗಡಿಯಲ್ಲಿ ಭೇಟಿಯಾಗುವ ದೊರಗು ಕೂದಲಿನ ಬೇಡಿ ಕಚ್ಚಿದ ತುಟಿಯು ದಪ್ಪ ಹುಬ್ಬಿನ ತಿವಿದು ನೋಡಬಹುದು. ಆಳಗಣ್ಣಿನ ದಾಂಡಿಗನ ಬಗ್ಗೆ ಈ ಇಬ್ಬರಿಗೆ ಮೊದ ಮೊದಲು ಅವಮಾನ, ಭಯ, ತಮ್ಮ ಗುಂಪಿನ ಸದಸ್ಯನೆಂದಾಗ ಎಲ್ಲಿಲ್ಲದ ಆತ್ಮೀಯತೆ, ಸ್ವಾತಂತ್ರ್ಯ, ರೈತಶೋಷಣೆ ಹೋರಾಟ ಪಂಡಿತ ಮಾಸ್ತರರ ಆಕರ್ಷಣೆ ಒಂದು ಕಡೆಯಾದರೆ, ವೈಯಕ್ತಿಕವಾದ ಸಮಸ್ಯೆಗಳು ಕೆಲವು ಇರುತ್ತವೆ. ಮಾಸ್ತರರ ಸಂಪರ್ಕದಿಂದ ಚಿರುಕುಂಡನಿಗೆ ಶೋಷಣೆಯ ಅರಿವು ಹುಟ್ಟುವಾಗಲೇ ಜಮೀನ್ದಾರ ನಂಬಿಯಾರನಿಂದ ಉಳುವ ನೆಲ ಕೈಬಿಡುವುದು. ಅನುಭವದ ಪಾಠವಾಗುತ್ತದೆ. "ರೈತ ಹೊಲ ಕಳೆದುಕೊಂಡು ಬಡವನಾಗುತ್ತಾನೆ. ಭಿಕಾರಿಯಾಗುತ್ತಾನೆ. ಆಮೇಲೆ ದೇಹಶ್ರಮ ಹೊರತಾಗಿ ಅವನಲ್ಲಿ ಏನೂ ಉಳಿಯೋದಿಲ್ಲ ಪಟ್ಟಣಕ್ಕೊ, ಎಲ್ಲಿಗೋ ಕೂಲಿಯಾಗಿ ಆ "ಶ್ರಮವನ್ನೇ ಆತ ಮಾರ್ತ್ತಾನೆ" ಎಂಬ ಮಾಸ್ತರರ ಮಾತು ಆತನ ಕುಟುಂಬದ ಸಂದರ್ಭದಲ್ಲಿ ತಾಳಿಯಾಗುತ್ತದೆ. ಪತ್ರಿಕೆ ಓದುವುದರ ಮೂಲಕ ರೈತರ ಜ್ಞಾನವರ್ಧನೆಗೆ ತೊಡಗುವ ಮಾಸ್ತರರೂ ರೈತರು ಮೃಗಗಳು ಅವಕ್ಕೆ ಅರ್ಥವಾಗುವುದು. ಬಾರುಕೋಲು ಭಾಷೆ ಅವರಿಗೆ ಸಹಿ ಹಾಕುವಷ್ಟು ಅಕ್ಷರ ಜ್ಞಾನವಿದ್ದರೆ ಸಾಕು ಹೆಬ್ಬೆಟ್ಟಿನ ರುಜು ಹಾಕಿಸಿ ಮೋಸ ಮಾಡುತ್ತಾರೆ ಎಂಬ ಅಪವಾದ ತಪ್ಪುತ್ತದೆ ಎಂದು ಭಾವಿಸುವ ಜಮೀನ್ದಾರ ನಂಬಿಯಾರರು ಎರಡು ವಿರುದ್ಧ ಧ್ರುವಗಳು ಒಂದು ಪ್ರತಿಗಾಮಿ, ಮತ್ತೊಂದು ಪ್ರತಿಗಾಮಿ ಧೋರಣೆ ಕಾದಂಬರಿಯ ಘರ್ಷಣೆ ಹುಟ್ಟುವುದು ಮುಖ್ಯವಾಗಿ ಇಲ್ಲಿಯೇ ಜಮೀನ್ದಾರನ ಮಗನಿಗೆ ಪಾಠ ಹೇಳಿಕೊಡಲು ಮಾಸ್ತರರನ್ನು ಕೇಳುವುದರ ಮೂಲಕ ರೈತರಿಗೆ ಪತ್ರಿಕೆಯನ್ನು ಓದಲು ತಪ್ಪಿಸುವ ಪ್ರಯತ್ನ

ವಿಧವೆ ದೇವಕಿಯನ್ನು ನಂಬಿಯಾರರ ಆಳಿನ ಅತ್ಯಾಚಾರ ಪ್ರಯತ್ನದಿಂದ ಅಪ್ಪು ಮತ್ತು ಕಣ್ಣ ರಕ್ಷಿಸಿದ್ದು ಉತ್ತರ ಮಲೆಯಾಳದ ರೈತರ ಸಮ್ಮೇಳನದಲ್ಲಿ ಭಾಗವಹಿಸಿದ್ದು ನಂಬಿಯಾರನಿಗೆ ಜನರು ಒಪ್ಪಿಸದೆ ನಡೆಯುವ ಅಪ್ಪು, ಜಾನಕಿಯರ ವಿವಾಹ ರೈತರ ಜಾಗೃತಿಯ ಫಲವಾಗಿ ಜನ್ಮ ತಾಳುವ ರೈತ ಸಂಘ ಗುಪ್ತಲೇಖನ ಹೀಗೆ ವೈಯಕ್ತಿಕ ಪ್ರತಿಭಟನೆ ಸಾಮೂಹಿಕವಾಗಿ ಕ್ರಾಂತಿಗೆ ಕಯ್ಯಾರು ಸಿದ್ಧವಾಗುತ್ತದೆ. ಜೊತೆ ಜೊತೆಯಲ್ಲಿಯೇ ನಂಬೂದರಿಯ ಬಂಡವಾಳ ಶಾಹಿ ದರ್ಪ ಒಕ್ಕಲು ಕೃಷ್ಣನಾರಯ್‌ನ ಅಂಗಳದ ಫಲಸನ್ನು ವಶಪಡಿಸಿಕೊಳ್ಳುವುದರಿಂದ ಹಿಡಿದು ಸರ್ಕಾರದ ವಿರುದ್ಧ ಹೋರಾಟವೆಂದು ಆರೋಪಿಸಿ ಪೋಲೀಸರನ್ನು ಕರೆಸುವುದಾವರೆಗೆ ಬೆಳೆಯುತ್ತದೆ.

ಚಿರುಕುಂಡ ಅಪ್ಪುವಿನ ಸಮರ್ಥ ನಾಯಕತ್ವ ರೈತ ಸಂಘಟನೆ ಬಲವಾಗಿ ಪೊಲೀಸ್ ಪಡೆ ಹಿಂದಿರುಗುತ್ತದೆ. ಮೊದಲ ಬಾರಿಗೆ ಬಂಡವಾಳ ಶಾಹಿ ಮತ್ತು ಸಾಮ್ರಾಜ್ಯಶಾಹಿ ಪ್ರವೃತ್ತಿಗೆ ಕೊಡಲಿ ಏಟು ಬೀಳುತ್ತದೆ.

ಮಾಸ್ತರರನ್ನು ತನ್ನ ಸ್ವಾಮ್ಯದಲ್ಲಿದ್ದ ಶಾಲೆಯಿಂದ ಹೊರಹಾಕುವುದು ರೈತಸಂಘ ಪರ್ಯಾಯ ವ್ಯವಸ್ಥೆ ಮಾಡುವ ಯೋಚನೆ ಕೈಗೊಂಡಾಗ ಬೇರೊಬ್ಬ ಮಾಸ್ತರರನ್ನು ಶಾಲೆ ತರುವ ಜಮೀನುದಾರನ ಹುನ್ನಾರ ನಡೆಯುತ್ತದೆ. ಪ್ರತಿಯಾಗಿ ರೈತ ಸಂಘದ ಪ್ರಚಾರ ಭಾಷಣ ಉಳುವವನೆ ಹೊಲದೊಡೆಯ ಘೋಷಣೆ ಸಂಘದ ಸ್ವಯಂ ಸೇವಕದಳದ ತರಬೇತಿ ಕಯ್ಯಾರು ತಾಲ್ಲೂಕು ರೈತ ಸಮ್ಮೇಳನದ ಸಿದ್ಧತೆ ಬಿರುಸಾಗಿ ಕಾದಂಬರಿ ಕ್ರಿಯೆಯಲ್ಲೂ ಚುರುಕು ಗೋಚರಿಸುತ್ತದೆ. ತಲಚೇರಿಯ ಯುವಕ ಅಬೂಬಕರ್ ರೈತ ಸಂಘದ ಸದಸ್ಯರ ಪ್ರಭಾತ ಫೇರಿ ನಡೆಸುವಾಗ ಪೋಲಿಸ್‌ಸುಬ್ಬಯ್ಯ ಪಡೆಯುವುದರಲ್ಲಿ ಬಂಡವಾಳ ಶಾಹಿ ಮತ್ತು ಸಾಮ್ರಾಜ್ಯಶಾಹಿ ಶಾಮೀಲು ಆಗುವುದು ಪೊಲೀಸ್ ಸುಬ್ಬಯ್ಯ ಅಬೂಬಕರ್ ಕೆನ್ನೆಗೆ ಹೊಡೆದಿದ್ದರಿಂದ ಗುಂಪು ತಿರುಗಿಬಿದ್ದು ಅವನನ್ನು ನದಿ ಬೀಳುವಂತೆ ಮಾಡಿ ಸಾಯಿಸುವುದು ಕಾದಂಬರಿ ಕ್ರಿಯೆಗೆ ಸಂದ ಮುಖ್ಯ ತಿರುವು.

ಕಯ್ಯಾರಿನ ರೈತರು ಸಶಸ್ತ್ರ ಬಂಡಾಯವೆದ್ದು ಪೊಲೀಸನನ್ನು ಕೊಲೆ ಮಾಡಿದರು ಎಂದು ಆಳುವ ಸರ್ಕಾರಕ್ಕೆ ವರದಿ ಮಾಡುವುದರ ಮೂಲಕ ಪರಿಸ್ಥಿತಿಯ ಬಿಕ್ಕಟ್ಟನ್ನು ಇನ್ನೂ ಹೆಚ್ಚಿಸಿ ರೈತರ ಸಂಘಟನೆಯ ದಮನಕ್ಕೆ ಪ್ರಯತ್ನಿಸಿದ ಸ್ವಾರ್ಥವೊಂದನ್ನೆ ಮತ್ತು ಗುರಿಯಾಗಿಟ್ಟುಕೊಂಡು ಯಾವ ಸಿದ್ಧಾಂತಕ್ಕೂ ಕಟ್ಟಿ ಬೀಳದೆ ಪರಿಸ್ಥಿತಿಯ ಲಾಭವನ್ನು ನಂಬಿಯಾರವರು ಪಡೆಯುತ್ತಾರೆ.

ಪೋಲೀಸರ ಕಯ್ಯಾರಿನ ಮೇಲಿನ ದಾಳಿ ಕ್ರಾಂತಿಕಾರಿ ಮುಖಂಡರುಗಳ ಬಂಧನ ಧ್ವಜಸ್ತಂಭದ ಮುರಿತ, ಗುಡಿಸಲುಗಳಿಗೆ ಬೆಂಕಿ ಅಸಹಾಯಕ ಹೆಣ್ಣುಗಳ ಅತ್ಯಾಚಾರ ಪೋಲಿಸರ ಚಿತ್ರಹಿಂಸೆ ಚಿರುಕಂಡ, ಕುಞಂಬು ಮುಂತಾದವರ ಬಂಧನಕ್ಕೆ ಒಳಗಾಗಿದ್ದು, ಅಪ್ಪು, ಅಬೂಬಕರ್ ಮತ್ತು ಮಾಸ್ತರರ ಬಂಧನಗಳು ಸ್ವಾತಂತ್ರ್ಯ ಹೋರಾಟದ ವಿವಿಧ ಮಜಲುಗಳನ್ನು ತಿಳಿಸುತ್ತವೆ.

ಸೆರೆಮನೆ ನ್ಯಾಯಾಲಯದ ವಿಚಾರಣೆಯ ನಾಯ್ಯ ರಕ್ಷಣಾ ಸಮಿತಿಯವರ ಬಿಡುಗಡೆಯ ಯತ್ನ ಇವು ಕಾದಂಬರಿಯಲ್ಲಿ ಪ್ರಮುಖ ಘಟನೆಗಳಾಗಿ ಬಂದರೂ ಮುಖ್ಯ ಉದ್ದೇಶದಲ್ಲಿ ಗಮನಾರ್ಹ ಪಾತ್ರವಹಿಸುವುದಿಲ್ಲ. ಆದರೆ ಹೋರಾಟಗಾರರ ಅಂತಿಮ ಸಂದರ್ಶನಕ್ಕಾಗಿ ಬರುವ ಹೆಂಡತಿ ತಾಯಿ–ತಂದೆ–ಸೋದರರ ಸಂಭಾಷಣೆಗಳೂ ಹೃದಯ ಸ್ಪರ್ಶಿಯಾಗಿವೆ.

ರಾಜದ್ರೋಹದ ಚಟುವಟಿಕೆಯ ಅಪರಾಧಕ್ಕಾಗಿ ಮಾಸ್ತರರು. ಅಪ್ಪು ಚಿರುಕುಂಡ ಅಬೂಬಕರ್ ಮತ್ತಿತರರ ೧೮ ಮಂದಿಗೆ ಎರಡೆರಡು ವರ್ಷ ಕಠಿಣ ಸಜೆ, ಪ್ರಭು, ದಾಂಡಿಗ, ನಾಯರ್ ಮುಂತಾದ ೨೨ ಜರನ ಬಿಡುಗಡೆ ಪೋಲೀಸ್ ಕೊಲೆಯ ಅಪರಾಧಕ್ಕಾಗಿ ಅಪ್ಪು, ಚಿರುಕುಂಡ, ಕುಞಂಬು ಅಬೂಬಕರ್ ಇವರಿಗೆ ಮರಣದಂಡನೆ ಎಂಬ ನ್ಯಾಯಾಲಯದ ತೀರ್ಪು, ಆರ್ದ್ರತೆಗೆ ಪೋಷಕ ಭಾಗಗಳಾಗಿ ಬರುವ ಹಾಗೆ ಕ್ರಾಂತಿಯ ಹೋರಾಟ ನಿರ್ಣಾಯಕ ನಿಲುವಿಗೆ ತಲುಪುವ ಘಟ್ಟವಾಗಿದೆ. 'ಗಲ್ಲಿಗೇರುವ ಮೂಲಕ ಸಾವನ್ನು ಸ್ವರ್ಗವೆಂದು ಭಾವಿಸುವಲ್ಲಿ ಕಯ್ಯೂರು ವೀರರ ಆದರ್ಶವಿದೆ.

ನಾಡು ದಾಸ್ಯದಲ್ಲಿ ಬಿದ್ದಾಗ ರಾಷ್ಟ್ರಾಭಿಮಾನಿ ತಳೆಯಬೇಕಾದ ನಿಲುವಿನ ಅಪ್ರತ್ಯಕ್ಷ ಸೂಚನೆ ಇದೆ. ಇನ್ನು ಅಪ್ಪು ಎನ್ನುವ ಚಿರುಕುಂಡ ಅಮ್ಮ ಆಳಬೇಡಮ್ಮ ಮುಂದೆ ಒಂದು ದಿನ ನಮ್ಮ ರಾಜ್ಯ ಬರ್ತದೆ ಆಗ ಹಿರೇಮಗನ್ನ ಕಾಣಿಕೆಕೊಟ್ಟು ವೀರಮಾತೆಯಂತೆ ನಿನ್ನ ಪೂಜಿಸುತ್ತಾರೆ ಎನ್ನುವ ಮಾತು ಒಬ್ಬ ಸ್ವಾತಂತ್ರ್ಯ ಯೋಧನ ಮಾತು ಪ್ರಗತಿಶೀಲ ರಾಷ್ಟ್ರಾಭಿಮಾನದ ಪ್ರಗತಿಶೀಲ ನೀತಿಗೆ ಅನುಗುಣವಾದ ಒಂದು ಮಾತಿಗಿದೆ.

ನೀನು ಮುಂದೆ ಯಾರನ್ನಾದರೂ ಎಂದು ಹೆಂಡತಿಗೆ ಹೇಳುವ ಅಪ್ಪುವಿನ ಮಾತುಗಳು ಪ್ರಗತಿಶೀಲರ ರಾಷ್ಟ್ರಾಭಿಮಾನದ ಆಶಾವಾದಿತ್ವ ಮುಕ್ತ ಪ್ರಗತಿ ಶೀಲನೀತಿಗೆ ಅನುಗುಣವಾದ ಅಂಶಗಳಾಗಿದೆ.

ಯಾವ ಬಲತ್ಕಾರವೂ ಇಲ್ಲದೆ ಸ್ವ-ಪ್ರೇರಣೆಯಿಂದಲೇ ಚಿರುಕುಂಡ ಅಪ್ಪು ಮುಂತಾದ ನಾಲ್ವರು ನೇಣುಗಂಬ ಏರುವುದು ಸಾಮ್ರಾಜ್ಯಶಾಹಿ ನಾಶವಾಗಲಿ; ಕ್ರಾಂತಿಗೆ ಜಯವಾಗಲಿ ಎನ್ನುತ್ತಿರುವಾಗಲೇ ನೇಣು ಬಿಗಿದು ಸ್ವರ ಗಂಟಲಲ್ಲೆ ನಿಲ್ಲುವುದು ಇವುಗಳು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರರ ಮನ ಮುಟ್ಟುವ ಸನ್ನಿವೇಶಗಳಾಗಿವೆ.

ಅನೇಕ ಬಾರಿ ಮನಮಿಡಿಸುವ ಉದ್ದೇಶದಿಂದಲೇ ಪ್ರಜ್ಞಾ ಪೂರ್ವಕವಾಗಿ ಸನ್ನಿವೇಶಗಳನ್ನು ಯೋಜಿಸುವ ಹಾಗೆ ಕಾಣಿಸುತ್ತದೆ ಕಾದಂಬರಿಯ ಬಹುತೇಕ ಘಟನೆಗಳು ಈ ಮಾತಿಗೆ ಪುಷ್ಟಿಯೊದಗಿಸುತ್ತದೆ ಅನ್ಯಾಯ ದಬ್ಬಾಳಿಕೆ ಅಮಾನವೀಯತೆಯ ಬಗೆಗಿನ ವಿವರಗಳು ನಮ್ಮ ವಿಚಾರವನ್ನು ಕೆರಳಿಸುತ್ತಾವೆಯೇ ಹೊರತು ಆಳಕ್ಕಿಳಿದು ಗಾಢ ಪರಿಣಾಮವನ್ನುಂಟು ಮಾಡುವುದಿಲ್ಲ ಇದಕ್ಕೆ ಕಾರಣ ಸಂದರ್ಭವನ್ನು ಮುಂದು ಮಾಡುವ ಉತ್ಸಾಹವಿದ್ದು ಅವು ಮೇಲಿನ ವಿವರಣೆ ಅಥವಾ ಹೇಳಿಕೆಗಳಾಗಿ ಉಳಿಯುವುದು ನೆಲ ತಣ್ಣಗಾಯಿತು ಗಾಳಿ ಅತ್ತ ಸುಳಿಯಲು ನಿರಾಕರಿಸಿ ಮರಗಿಡಗಳು ಸ್ತಬ್ಧವಾದವು ನೀರವವಾಯಿತು. ಪ್ರಕೃತಿ ಅಂಗಳದಲ್ಲಿ ಮಗುವನ್ನೆತ್ತಿ ಕುಳಿತ ಜಾನಕಿ ಆಶಾಕವನ್ನೇ ದಿಟ್ಟಿಸಿದಳು ದೂರದ ಪಶ್ಚಿಮದಲ್ಲಿ ನಾಲ್ಕು ನಕ್ಷತ್ರಗಳು ಒಂದೇ ಸಮನಾದ ಪ್ರತಿಭೆಯಿಂದ ಬೆಳಗುವುದು ಕಂಡಿತು.

ಚಿರಸ್ಮರಣೆ ಕಾದಂಬರಿಯು ಕಯ್ಯೂರಿನ ಹುತ್ತಾತ್ಮರಿಗೆ ಜನತೆಯ ಶ್ರದ್ಧಾಂಜಲಿಯಲ್ಲಿ ಮಾತ್ರವಲ್ಲ ಪ್ರಕೃತಿಯ ನೋವಿನಲ್ಲೂ ಪಾಲ್ಗೊಂಡಿತೆಂಬ ಆಶಯವಿದೆ. ಮಾಸ್ತರರ ಶಾಲೆಯಲ್ಲಿ ನಡೆಸಿದ್ದ ಮಾವಿನ ಮರವನ್ನು ನಂತರ ಜಮೀನ್ದಾರರ ನಂಬಿಯಾಕರು ಕಡಿಸಿದ್ದು ಕ್ರಾಂತಿಯ ವೈಫಲ್ಯಕ್ಕೆ ಸಂಕೇತವಾಗಬಹುದಾದರೂ ವಾಚ್ಯತೆ ಮತ್ತು ಮಿಡಿಸುವ ಗುಣದ್ದೇ ಮೇಲುಗೈ ಇದು ಕಾದಂಬರಿಯ ಗುಣವನ್ನು ತಿಳಿಸುತ್ತದೆ. ರಾಷ್ಟ್ರಾಭಿಮಾನ ಗುಲಾಮಶಾಹಿ ಪ್ರತಿರೋಧದಲ್ಲಿ ನಾಡು ಮುಳುಗಿದ್ದಾಗ ಹೊರಬಂದ ಕೃತಿ. ಚಿರಸ್ಮರಣೆ ಕಾದಂಬರಿಯಲ್ಲಿ ಮೆಚ್ಚಬೇಕಾದ ಅಂಶ ಅಲ್ಲಿನ ಪಾತ್ರ ನಿರ್ವಹಣೆ ಅಂತಃಕರಣ ಮಿಡಿಸುವ ಘಟನೆಗಳ ಅನುಸಂಧಾನದಲ್ಲಿ ಬರುವ ಪ್ರಜ್ಞಾಪೂರ್ವಕವಾದ ಕಾಳಜಿ ಪಾತ್ರ ನಿರ್ಮಾಣದ ಸಂದರ್ಭದಲ್ಲಿ ತಲೆಹಾಕದೆ ತೀರಸಹಜವಾಗಿ ಅನುಮಾನ ಮೂಡುತ್ತವೆ ದೈನಂದಿನ ಬದುಕಿನಲ್ಲಿ ಯಾರನ್ನೋ ಕಂಡು ಸಂಭಾಷಿಸಿದ ಹಾಗೇ ನಮ್ಮ ನಡುವೆ ಇರುವ ಹಲವರಲ್ಲಿ ಒಬ್ಬರಾಗಿ ಅವು ನಡೆದುಕೊಳ್ಳುತ್ತವೆ. ಸೈದ್ಧಾಂತಿಕವಾಗಿ ನಂಬಿದ್ದನ್ನು ಕೊನೆಯವರೆಗೂ ಪ್ರತಿಪಾದಿಸುತ್ತಾ ಹೋರಾಟದ ವಿಫಲತೆಯ ಸಂದರ್ಭದಲ್ಲೂ ಮುಂಬರುವ ಬೆಳಕಿಗೆ ಆಶಾವಾದಿಯಾಗುವ ತಮ್ಮ ಆತ್ಮೀಯ ಸಲಹೆಗಳಿಂದ

ಪ್ರಿಯವಾಗುತ್ತಾರೆ. ಮಾಸ್ತರರು ಬದುಕು ಮತ್ತು ಸಾವಿನಲ್ಲಿ ಕಾರ್ಯದರ್ಶಿಯಾಗಿಯೇ ಕಂಡ ಚಿರುಕುಂಡ, ಕ್ರಾಂತಿಯ ಕಿಚ್ಚು ನಾದದಂತೆ ಎಚ್ಚರವಹಿಸುವ ಅಪ್ಪು, ಕುಞಂಬು ಅಬೂಬಕರ್ ಎಂಥ ದುರ್ಬರ ಸನ್ನಿವೇಶದಲ್ಲೂ ಇಂಪಾದ ಕಂಠದಿಂದ ಆಡಿ ಉಲ್ಲಾಸಗೊಳಿಸುತ್ತಿದ್ದ ಕಣ್ಣ ಹಾಸ್ಯ ಪ್ರವೃತ್ತಿಯಿಂದ ಉಷ್ಣತೆಯಲ್ಲೂ ತಣಿಸುವ ದಾಂಡಿಗ ಬಾಲಸಂಘದ ಎಳೆಯ ಕುಟ್ಟಿ ಕೃಷ್ಣ ಕಾದಂಬರಿಯ ಆವರಣದಲ್ಲಿ ಸ್ಮರಣೀಯರಾಗುತ್ತವೆ.

ಹೋರಾಟದ ಬಿಸಿಯಲ್ಲಿ ದೇವಕಿ, ಕಣ್ಣ ಜಾನಕಿ, ಅಪ್ಪು, ಚಿರುಕುಂಡರ ವಿವಾಹದಂತಹ ಸಂಗತಿಗಳು ಗೌಣವಾಗುತ್ತವೆ. ಆತ್ಮೀಯ ಮಾತುಕತೆಯ ಅನುಭವ ಕೊಡುವ ಕಯ್ಯೂರು ವಿವರಣೆ ಮನಸಳೆಯುತ್ತದೆ. ಹೊಸದುರ್ಗ ನಿಲೇಶ್ವರ, ಚರ್ವತ್ತೂರು ತ್ರಿಕರಪುರ ಸ್ಥೂಲ ಕೇಂದ್ರಗಳಾಗಿ ಪರಿಚಿತ ಪ್ರದೇಶಗಳಾಗುತ್ತವೆ.[೨]

ಜಮೀನ್ದಾರ ಮತ್ತು ರೈತರ ಗುಲಾಮ ಮತ್ತು ಗುಲಾಮರೊಡೆಯ ನಡುವಿನ ಸಂಘರ್ಷವನ್ನು ಸಮರ್ಥವಾಗಿ ಚಿತ್ರಿಸುವ ಚಿರಸ್ಮರಣೆ ಎಲ್ಲರಿಗೂ ಎಲ್ಲಾ ಕಾಲದಲ್ಲೂ ಆಸಕ್ತವಾಗಿ ಕಾಣಿಸುತ್ತದೆ.

ಹೀಗೆ ಚಿರಸ್ಮರಣೆ ಕಾದಂಬರಿಯು ಬಂಡವಾಳಶಾಹಿ ಮತ್ತು ಸಾಮಾಜ್ಯಶಾಹಿ ವಿರುದ್ಧದ ಹೋರಾಟವನ್ನು ಒಂದೇ ಬಾರಿಗೆ ತರುವಲ್ಲಿ ಚಿರಸ್ಮರಣೆ ಯಶಸ್ವಿಯಾಗಿದೆ. ಚಿರಸ್ಮರಣೆಯಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಹಲವಾರು ವಿಚಾರಗಳು ಹಾಸುಹೊಕ್ಕಾಗಿವೆ.

ಅಡಿಟಿಪ್ಪಣಿ

೧. ಡಾ. ಬೆಳ್ಳೂರು ವೆಂಕಟಪ್ಪ ಪ್ರಗತಿಶೀಲ ಕಥನ, ನಿರಂಜನ ಕಥಾ ಸಾಹಿತ್ಯ, ೨೦೧೧, ಪು. ೨೦-೨೧

೨. ಶ್ರೀಕಂಠ ಕೂಡಿಗೆ, ನಿರಂಜನ ಚಿರಸ್ಮರಣೆ, ಪು. 757, 760

ಅಧ್ಯಾಯ –೫

ಕಟ್ಟೀಮನಿಯವರ ಬರೆದಿರುವ 'ಮಾಡಿಮಡಿದವರು', ನಿರಂಜನ ಅವರು ಬರೆದಿರುವ 'ಚಿರಸ್ಮರಣೆ' : ತೌಲನಿಕ ಅಧ್ಯಯನ

ಬಸವರಾಜ ಕಟ್ಟೀಮನಿಯವರ 'ಮಾಡಿಮಡಿದವರು' ಕಾದಂಬರಿಗಳ ಆಶಯ ಒಂದೇ ಅದು ಸ್ವಾತಂತ್ರ್ಯ ಆದರೆ ಈ ಎರಡು ಕೃತಿಗಳಲ್ಲಿ ವ್ಯಕ್ತವಾದ ವಿಚಾರಗಳಲ್ಲಿ ಭಿನ್ನತೆಯನ್ನು ನೋಡಬಹುದು.

'ಮಾಡಿಮಡಿದವರು' ಕಾದಂಬರಿಯ ಸ್ಥೂಲ ಕಥೆಯಾಗಿದ್ದು, ಈ ಕಥಾನಕದಲ್ಲಿ ಬರುವ ಚಳುವಳಿಯು ರೋಮಾಂಚನಕಾರಿ ಸಂಘಟನೆಗಳು ಗಟ್ಟಿ ಧ್ಯೇಯೋದ್ಧೇಶದ ನಿಷ್ಠುರ ಪಾತ್ರಗಳು ಕುತೂಹಲಕಾರಿ ಸನ್ನಿವೇಶಗಳು ಹೆಣ್ಣಿನ ಕೈಯಲ್ಲಿ ಆಗಲಾಗದ ಹಳ್ಳಿಯ ಮುದುಕ ಮುದುಕಿಯರಲ್ಲೂ ಮಿಂಚಿನ ಸ್ವಾತಂತ್ರ್ಯದ ಕೆಚ್ಚು ಜಾತಿಮತಗಳನ್ನೇಬ್ಬಿಸಿ ರಾಷ್ಟ್ರೀಯತೆ ಭಾವೈಕ್ಯತೆ ಇವೆಲ್ಲವನ್ನು ಅತ್ಯಂತ ಸಂಯಮದಿಂದ ಮತ್ತು ಅನುಭವ ಪೂರ್ಣವಾಗಿ ಚಿತ್ರಿಸಲಾಗಿದೆ.

ಸಂಘಟಿತವಾದ ಪ್ರಯುತ್ನ ಸ್ವಾತಂತ್ರ್ಯ ಸಂಪಾದನೆಯು ಸಮರ್ಥ ಮಾರ್ಗವಾಯಿತೆಂಬುದನ್ನು ಸಾರುವ ಕೃತಿ ಇದಾಗಿದೆ. ಸ್ವಾತಂತ್ರ್ಯ ಸಂಘಟನೆಗೆ ಹಳ್ಳಿಯ ಜನರೇ ಬೆನ್ನೆಲುಬಾಗಿ ನಿಂತರೆಂಬುದನ್ನು ಖಚಿತಪಡಿಸುತ್ತದೆ ಜನತೆಯನ್ನು ಪ್ರೇರಿಪಿಸಲು ಅವರ ಜನಪದ ಪ್ರಕಾರವಾದ ಲಾವಣಿಯು ಇಲ್ಲಿ ಸಮರ್ಥಮಾದ್ಯಮವಾಗಿತ್ತು ಎಂಬುದನ್ನು ನೆನಪಿಸಬಹುದು.

ಇಡೀ ಸ್ವಾತಂತ್ರ್ಯ ಹೋರಾಟಕ್ಕೆ ಈ ಕಾದಂಬರಿಯಲ್ಲಿ ಗ್ರಾಮೀಣ ಪರಿಸರವೇ ಪ್ರೇರಕ ಶಕ್ತಿಯಾಗಿರುತ್ತದೆ.

ಚಳುವಳಿ ನಡೆಸಬೇಕಾದ ರೀತಿ ಮತ್ತು ಅಹಿಂಸೆಯ ಮಿತಿ–ಇವೆರಡು ವಿಚಾರಗಳ ಬಗ್ಗೆ ಒಂದು ಸಣ್ಣ ತಾತ್ವಿಕ ವಿವೇಚನೆ ಈ ಕಾದಂಬರಿಯಲ್ಲಿ ಈ ವಿಚಾರವು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಮಾಡಿಮಡಿದವರು ಕಾದಂಬರಿಗೆ ಎಂಥ ರಾಜಕೀಯ ವ್ಯವಸ್ಥೆ ಬೇಕು ಯಾವುದು ಬೇಡ ಎಂಬ ಚಿಂತನೆಗೆ ಎಡೆಮಾಡಿಕೊಟ್ಟಿಲ್ಲ ಈ ಕಾರಣಕ್ಕಾಗಿ ಕಾದಂಬರಿಯ ಉದ್ದೇಶ ಬಹುವಿಸ್ತಾರವಾದುದು ಎಂದು ತಿಳಿಯಬಹುದು ಹೋರಾಟವೆಂದರೆ ರಾಷ್ಟ್ರೀಯತೆ ಎಂಬ ಕಲ್ಪನೆ ಗಾಢವಾಗಿದ್ದ ಸಮಯದಲ್ಲಿ ಹಾಗೂ ದೇಶದ ವಿಮುಕ್ತಿಯೊಂದೇ ಅಗತ್ಯವಾಗಿದ್ದ ಸಂದರ್ಭದಲ್ಲಿ ಈ ಕಾದಂಬರಿಯ ಉದ್ದೇಶ ಅಂದರೆ 'ಮಾಡಿಮಡಿದವರು' ಕಾದಂಬರಿ ಉದ್ದೇಶಕ್ಕೆ ವ್ಯಾಪಕ ಅರ್ಥ ಸಹಜವಾಗಿಯೇ ಪ್ರಾಪ್ತವಾಗಿದೆ.

ಬಸವರಾಜ ಕಟ್ಟೀಮನಿಯವರು ತಮ್ಮ ಮಾಡಿಮಡಿದವರು ಕಾದಂಬರಿಯಲ್ಲಿ ಭಾರತದ ಸ್ವಾತಂತ್ರ್ಯವೆಂದರೆ ಸರ್ವಾಂಗೀಣ ಮುನ್ನಡೆಯೆಂದು ಅದಕ್ಕಾಗಿ ಇಲ್ಲಿ ಸಮಾಜವಾದಿ ಸಿದ್ಧಾಂತದ ರಾಜಕೀಯ ವ್ಯವಸ್ಥೆಯ ಮೇಲೆ ಮಾಡಿ ಮಾಡಿದವರು ಕಾದಂಬರಿಯನ್ನು ರಚಿಸಿದರು.

ಸ್ವಾತಂತ್ರ್ಯ ಹೋರಾಟದ ಆವರಣವನ್ನು ಅದರ ಎಲ್ಲಾ ಪೂರ್ವಪರಗಳೊಂದಿಗೆ ತೆರೆದಿಡುವ ಕಟ್ಟೀಮನಿಯುವರು ಅಂದಿನ ದೇಶ ದ್ರೋಹಿಗಳ ಕುಕೃತ್ಯಗಳನ್ನು ಬಯಲಿಗೆಳೆದಿದ್ದಾರೆ. ಅದೇ ರೀತಿ ಹಲವಾರು ದೇಶ ದ್ರೋಹಿಗಳನ್ನು ಕಟ್ಟೀಮನೀಯವರು ವಾಸ್ತವವಾಗಿ ಚಿತ್ರಿಸಿದ್ದಾರೆ.

ವಾಸ್ತವ ಚಿತ್ರಣ ನೀಡುವ ಮಾಡಿಮಡಿದವರು ಒಂದು ಉತ್ತಮ ಸಾಹಿತ್ಯ ಕೃತಿಯಾಗಿದ್ದು, ಕಟ್ಟೀಮನಿಯವರ ಅಸದೃಶ ಪಾತ್ರ ಚಿತ್ರಣದಿಂದ ಮತ್ತು ಸಮರ್ಪಕವಾದ ಸನ್ನಿವೇಶಗಳ ನಿರ್ಮಾಣದಿಂದ ಸ್ವಕೀಯ–ಪರಕೀಯ ಭಾವನೆಗಳಿಂದ ಮುಕ್ತವಾದ ಪಾತ್ರಗಳಂತೆ ಚಿತ್ರತವಾಗಿದೆ.

ಗ್ರಾಮೀಣ ಭಾಷೆ ಹಾಗೂ ಸತ್ವ ಎರಡನ್ನು ಏಕಕಾಲಕ್ಕೆ ಮೇಳಗೂಡಿಸಿಕೊಂಡಿರುವ 'ಮಾಡಿಮಡಿದವರು' ಕಾದಂಬರಿ ಅತ್ಯಂತ ಸರಳವಾಗಿ ಸಹಜ ಓದಿಸಿಕೊಂಡು ಹೋಗುವ ಗುಣವನ್ನು ಹೊಂದಿದೆ. ಏಕಮುಖದಲ್ಲಿ ಸಂಚರಿಸುವ ಪ್ರವಾಹದಂತೆ ಕಾದಂಬರಿಯ ಗತಿಯಿದ್ದು ಅದು ಓದುಗನನ್ನು ತೇಲಿಸಿಕೊಂಡು ಹೋಗುತ್ತದೆ ಹೋರಾಟದ ವಸ್ತು ವೀರವತ್ತಾದ ಪಾತ್ರ, ಚಿತ್ರಣ, ಕುತೂಹಲ ಪೂರ್ಣ ಸನ್ನಿವೇಶ ಅರ್ಥಪೂರ್ಣ ಸಂಭಾಷಣೆ ಗ್ರಾಮೀಣ ಬದುಕು ಮತ್ತು ಭಾಷೆ ಓದುಗರ ಮನಸ್ಸನ್ನು ಸೂರೆಗೊಳ್ಳುವ ಶೈಲಿ ಈ ಎಲ್ಲಾ ಅಂಶಗಳಿಂದಾಗಿ ಮಾಡಿಮಡಿದವರು ಕಾದಂಬರಿ ಕನ್ನಡದ ಒಂದು ಉನ್ನತ ಕೃತಿಯಾಗಿದೆ.

ರಾಷ್ಟ್ರೀಯತೆಯ ಭಾವನೆಯನ್ನು ಜಾಗೃತಗೊಳಿಸುವಲ್ಲಿ ಕಟ್ಟೀಮನಿಯವರ ಮಾಡಿಮಡಿದವರು ಕಾದಂಬರಿ ಒಂದು ಮಹತ್ವದ ಆಕರವಾಗಿ ನಿಲ್ಲುತ್ತದೆ. ಇದು ಕಟ್ಟೀಮನಿಯವರ ಕಲಾತ್ಮಕ ಸಂಯಮದ ಪ್ರತಿರೂಪವಾದುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಈ ಸನ್ನಿವೇಶಕ್ಕೆ ಒಂದು ವಿಶಿಷ್ಟ ಸ್ಥಾನವಿದೆ ಎಂದು ಹೇಳಬಹುದು. ಮಾಡಿಮಡಿದವರು ಕಾದಂಬರಿಯ ಮೂಲ ಮುಖ್ಯ ತುಡಿತವೆಂದರೆ ಭಾರತದ ಬಂದ ವಿಮೋಚನೆ ವಸಾಹತುಶಾಹಿ ಆಡಳಿತ ಕೊನೆಗೊಂಡು ದೇಶ ಸ್ವತಂತ್ರವಾಗಿ ಸಮಾನತೆಯ ತತ್ವದ ಮೇಲೆ ಅದು ತನ್ನ ನೂತನ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕೆಂಬ ಹಂಬಲ ಮಾಡಿಮಡಿದವರು ಕಾದಂಬರಿಯಲ್ಲಿ ಸ್ಪಷ್ಟವಾಗಿದೆ. ಮಾಡಿಮಡಿದವರು ಕಾದಂಬರಿ ಬಂದ ವಿಮೋಚನೆಯ ಹೋರಾಟದ ಸಮರ್ಥ ಚಿತ್ರಣವನ್ನು ಚಿತ್ರಿಸುತ್ತಾ ಬಂದ ಕಟ್ಟೀಮನಿಯವರ 'ಮಾಡಿಮಡಿದವರು' ಕೃತಿ ರಾಷ್ಟ್ರೀಯತೆಯ ಧ್ಯೇಯಗಳಿಗನುಗುಣವಾಗಿ ಮೂಡಿಬಂದ ಈ ಕಾದಂಬರಿ ಸಾಹಿತ್ಯಿಕವಾಗಿ ಮಹತ್ವದ ಸ್ಥಾನಗಳಿಸಿದೆ.

ಕಟ್ಟೀಮನಿಯವರು ಮಾಡಿಮಡಿದವರು ಕಾದಂಬರಿಯಲ್ಲಿ ಕುಂದರ ನಾಡಿನ ಮೇಲಿನ ಅಭಿಮಾನದಿಂದಾಗಿ ಬಯಲು ಸೀಮೆಯ ಸಾತವ್ವಳನ್ನು ಹೇಡಿಯಂತೆ ಚಿತ್ರಿಸಲಾಗಿದೆ. ಆದರೆ ಇಲ್ಲಿ ಸಾಕವ್ವ ಹೇಡಿಯಾಗಿರದೇ ತನ್ನ ಮಗನ ಮೂಲಕ ಸ್ವಾತಂತ್ರ್ಯದ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಾಳೆ.

ಕಟ್ಟೀಮನಿಯವರು ಸ್ವಯಂ ನಿರ್ಮಿತ ವ್ಯಕ್ತಿ, ಹಳ್ಳಿಯ ಬಡರೈತರ ಮನೆಯಲ್ಲಿ ಜನ್ಮತಾಳಿ, ಕಷ್ಟದಿಂದ ಪ್ರೌಢಶಾಲೆಯನ್ನು ದಾಟಿ, ಮುಂದೆ ಓದಲು ಅನುಕೂಲವಿಲ್ಲದೆ, ಪತ್ರಿಕೋದ್ಯಮದ ಕಡೆಗೆ ವಾಲುತ್ತಾರೆ. ಸಂಯುಕ್ತ ಕರ್ನಾಟಕ ಬಂಧು, ಉಷಾ ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿದ್ದು, ಸಾಹಿತ್ಯಕ್ಕೆ ಪೂರ್ಣವೇಳೆಯನ್ನು ಬಳಸಿಕೊಳ್ಳುವ ಸಲುವಾಗಿ ಅಲ್ಲಿಂದ ನಿರ್ಗಮಿಸುತ್ತಾರೆ. ಗಾಂಧೀಜಿಯ ಕರೆಗೆ ಓಗೊಟ್ಟು, ೧೯೪೨ರ ಆಗಸ್ಟ್ ತಿಂಗಳಲ್ಲಿ ಚಳುವಳಿಯಲ್ಲಿ ಭಾಗವಹಿಸಿ, ಕೆಲವು ದಿನ ಸೆರೆಮನೆಯ ಅತಿಥಿಯಾಗುತ್ತಾರೆ.

ಕಟ್ಟೀಮನಿಯವರು ಬಡತನದ ಬರದಲ್ಲಿದ್ದರೂ ಒಂದು ರೀತಿಯಲ್ಲಿ ಪುಣ್ಯವಂತರು. ಅವರ ಮಗುತನದ ಕಾಲದಿಂದ ತಾಯಿ ಸಂಜೆಯ ವೇಳೆ ಜಾನಪದ ಮತ್ತು ಶರಣ ಶರಣೆಯರ ಕತೆಗಳನ್ನು ಹೇಳುತ್ತಾರೆ; ಮಗು ಆಸಕ್ತಿಯಿಂದ, ತದೇಕ ಚಿತ್ರದಿಂದ ಕೇಳುತ್ತಾನೆ; ಕಿತ್ತೂರು ಚೆನ್ನಮ್ಮ, ಅಕ್ಕಮಹಾದೇವಿಯವರ ಕತೆಗಳನ್ನು ಕೇಳುವಾಗ ಅವನು ರೋಮಾಂಚನಗೊಳ್ಳುತ್ತಾನೆ. ಅಷ್ಟೇ ಅಲ್ಲ, ಅವನ್ನೆಲ್ಲ ನೆನಪಿನಲ್ಲಿಟ್ಟುಕೊಂಡು ಗೆಳೆಯರ ಸಮೂಹದಲ್ಲಿ ಕಥನಿಸುತ್ತಾನೆ. ಹೀಗಾಗಿ ಅವನ ಸುಪ್ತ ಪ್ರತಿಭೆ ಜಾಗೃತಗೊಂಡು ಚಿಕ್ಕಂದಿನಲ್ಲಿಯೇ ಕತೆ ಹೇಳುವ ಮತ್ತು ಬರೆಯುವ ಕಲೆಗಳಲ್ಲಿ ಪಳಗುತ್ತಾನೆ. ೧೯೪೪ರಲ್ಲಿ 'ಕಾರವಾನ್' ಕಥಾ ಸಂಗ್ರಹ ಪ್ರಕಟವಾಗುತ್ತದೆ.

ಮಾಡಿಮಡಿದವರು, ಈ ಕಾಂದಬರಿಯನ್ನು ಮಾತ್ರ ರಚಿಸಿದ್ದರೂ ಅವರ ಕೀರ್ತಿ ಚಿರಸ್ಥಾಯಿಯಾಗಿ ಉಳಿಯುತ್ತಿತ್ತು. ರಾಷ್ಟ್ರೀಯ ಮನೋಭಾವ, ದೇಶಪ್ರೇಮಗಳೇ ಸಾಕಾರಗೊಂಡಂತಿರುವ ಆ ಕೃತಿಗಳನ್ನೋದಿದಾಗ ರೋಮಾಂಚನವಾಗುತ್ತದೆ. 'ಮಾಡಿ ಮಡಿದವರು' ಕಾದಂಬರಿಯ ವಿಶ್ವನಾಥ, ಹೇಮಾವತಿ, ಸಂಗಣ್ಣ, ಹಸನ್‌ಸಾಬಿ, ಶೇಖರ್ ನಾಡು ಎಂದೆಂದಿಗೂ ಮರೆಯದ ಚಿರಂಜೀವಿಗಳು.

ನಾಗರಿಕತೆಯ ಸೋಂಕಿಲ್ಲದ, ಶಕುನಿತನ, ಚೂಪುಗಾರಿಕೆ, ಕಾಪಟ್ಯ, ಕುತಂತ್ರ ಕುಟಿಲತೆ, ತಟವಟ ಸಂಚು ಹೊಂಚುಗಳಿಲ್ಲದ ಹಳ್ಳಿಯ ವಾತಾವರಣದಲ್ಲಿ ಹುಟ್ಟಿ, ಬೆಳೆದ ಬಸವರಾಜರು ನೇರ ನಡೆ ನುಡಿಯುಳ್ಳವರು, ಪ್ರಾಮಾಣಿಕರು, ಸತ್ಯನಿಷ್ಠರು; ನೈತಿಕೆ, ಆತ್ಮಪ್ರತ್ಯಯ, ಸ್ವಾಭಿಮಾನ ಬಂಡವಾಳವುಳ್ಳವರು; ಅವರ ಬಂಡವಾಳದಿಂದಾಗಿ ದೌಷ್ಟ್ಯವನ್ನು ವಂಚನೆಯನ್ನು, ಸೋಗಲಾಡಿತನ, ದುರಂಹಕಾರ, ದೌರ್ಜನ್ಯಗಳನ್ನು ಭ್ರಷ್ಟಾಚಾರವನ್ನು ಬಯಲು ಮಾಡುವ ಛಲ ಹಾಗೂ ಧೈರ್ಯ ಅವರ ಸಹಜಗುಣಗಳಾಗಿದ್ದವು.

ಸಾಮಾಜಿಕ ಅನಿಷ್ಟಗಳು ಹಾಗೂ ಆರ್ಥಿಕ ತಾರತಮ್ಯ ಇಂಡಿಯಾ ದೇಶದ

ದಾಸ್ಯಕ್ಕೆ ಮತ್ತು ಅವನತಿಗೆ ಕಾರಣವೆಂಬುದನ್ನವರು ಅರಿತಿದ್ದರು. ಶ್ರೀಮಂತರ, ಮೂಲಭೂತವಾದಿಗಳ ಹಾಗೂ ಸಂಪ್ರದಾಯ ಜಡರ ಮೌಢ್ಯದಿಂದೊಡಗೂಡಿದ ಅವಿವೇಕವನ್ನು, ರಾಜಕಾರಣಿಗ ಳ ಸ್ವಾರ್ಥಪರತೆ ಭ್ರಷ್ಟಚಾರಗಳನ್ನು ಮತ್ತು ಜರತಾರಿ ಜಗದ್ಗುರುಗಳ ಪ್ರಗತಿ ವಿರೋಧಿ ಧೋರಣೆ, ಅನೈತಿಕೆ, ಲಂಡತನಗಳನ್ನವರು ನಿರ್ಭಯವಾಗಿ ಬೆತ್ತಲೆಗೊಳಿಸುತ್ತಾರೆ. ರೈತರ ಕಾರ್ಮಿಕರ ಬಡತನಕ್ಕೆ ಜಾತೀಯಗಳನ್ನವರು ನಿರ್ಭಯವಾಗಿ ಬೆತ್ತಲೆಗೊಳಿಸುತ್ತಾರೆ. ರೈತರ ಕಾರ್ಮಿಕರ ಬಡತನಕ್ಕೆ ಜಾತೀಯತೆಯ ನಗ್ನನರ್ತನಕ್ಕೆ ರಾಜಕಾರಣಿಗಳು ಶ್ರೀಮಂತರು ಮಠಾಧಿಪತಿಗಳೇ ಕಾರಣ ಎಂಬ ಸತ್ಯವನ್ನು ಹೊರಗೆಡುತ್ತಾರೆ. ಹೆಣ್ಣು ಮಕ್ಕಳ ಶೀಲ ಭಂಗಕ್ಕೆ ಅವರ ಅಸಹಾಯಕತೆಗೆ, ಅವರ ವಿಚ್ಛಿದ್ರ ಜೀವನಕ್ಕೆ ಇವರೇ ಕಾರಣರೆಂದು ಕಟ್ಟಿಮಣಿ ನಿರ್ದಾಕ್ಷಿಣ್ಯವಾಗಿ ತಮ್ಮ ಕಾಂದಬರಿಗಳಲ್ಲಿ ಬಗೆಬಗೆಯಾಗಿ ಚಿತ್ರಿಸಿದ್ದಾರೆ. ಎಷ್ಟೇ ಇದ್ದರಾಗಿಲ್ಲ. ಸಾಮಾಜಿಕ ಬದ್ದತೆಯಿರುವ ಹಿಡಿ ಮಂದಿ ಸಾಹಿತಿಗಳಲ್ಲಿ ಇವರೂ ಒಬ್ಬರು. ಇಂಡಿಯಾ ದೇಶದ ಇಂದಿನ ಸ್ಥಿತಿಯಲ್ಲಿ ಸಾಮಾಜಿಕ ಬದ್ಧತೆಯಿಲ್ಲದ ಸಾಹಿತಿಗಳು ಪ್ರತಿಗಾಮಿಗಳೆಂದೇ ಹೇಳಬೇಕಾಗಿದೆ.

ಮಾಡಿಮಡಿದವರು ಕಾದಂಬರಿಯಲ್ಲಿ ಕಾಣುವ ಹಳ್ಳಿಯೇ ಬೇರೆ ವಿಶ್ವನಾಥ ಹೇಮಾಳ ಮೂಲಕ ವ್ಯಕ್ತವಾಗುವ ಹಳ್ಳಿ ನಗರಗಳ ನಡುವಿನ ವ್ಯತ್ಯಾಸ ಸರಳ ಅಭಿಪ್ರಾಯದ್ದಾಗಿದೆ. ಹಳ್ಳಿಮಂದಿ ಅಂದರೆ ಮಿಲಿಟರಿಯೊಳಗಿನ ಸೈನಿಕರು ಮಾಡುದಕ್ಕೂ ಬರೋದಿಲ್ಲ ಅದೆಲ್ಲ ಪಟ್ಟಣದ ಮಂದಿಯ ಸ್ವಭಾವ ನಿಜವಾದ ಹಿಂದುಸ್ತಾನ ಇರೋದು ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ನೋಡುವ ನಿಜ ಹಿಂದೂಸ್ತಾನ ಅಲ್ಲ. ವಿದೇಶೀಯರ ಕೆಟ್ಟ ಚಟಗಳನ್ನು ಕಲಿತುಕೊಂಡು ಅವುಗಳನ್ನು ಪೂರೈಸಿಕೊಳ್ಳೋದಕ್ಕಾಗಿ ದೇಶವನ್ನು ಲಕ್ಷ್ಯಕ್ಕೆ ತಂದುಕೊಳ್ಳದ ಜನ ತುಂಬಿದ್ದಾರೆ. ಇಲ್ಲಿ ಹಳ್ಳಿಗಳಲ್ಲಿ ಈ ರೋಗ ಇನ್ನೂ ಬಡಿದಿಲ್ಲ ಅಂತೆ ಅಲ್ಲಿಯವರು ಹುಲಿಗಳ ಹಾಗೇ ಹೋರಾಡುತ್ತಾರೆ. ನಿಜವಾಗಿಯೂ ಮಾಡಿಮಡಿಯುವ ಜನ ಅಂದರೆ ಹಳ್ಳಿಯವರೇ ಅಭಿಪ್ರಾಯಗಳ 'ಮಾಡಿಮಡಿದವರು' ಕಾದಂಬರಿಯನ್ನು ಅಧಃಪತನಕ್ಕೆ ತಳ್ಳಿದೆ ಕಟ್ಟೀಮನೀಯವರ ಸ್ಪಷ್ಟವಾಗಿ ಇರುವ ದೋಷಪೂರ್ಣ ಗ್ರಹಿಕೆ ಎಂದರೆ ಗ್ರಾಮ ನಗರಗಳು, ಗ್ರಾಮೀಣ ರೈತರು ನಗರದ ಕೂಲಿಕಾರರು ಇವು ಪರಸ್ಪರ ವಿರುದ್ಧ ಧ್ರುವಗಳೋ ಎಂಬಂಥ ಗ್ರಹಿಕೆ ದೋಷ ಪೂರ್ಣವಾದುದಾಗಿದೆ.

ಒಂದು ಸಮಗ್ರ ಆರ್ಥಿಕ ಸ್ಥಿತಿಯಲ್ಲಿ ಪರಸ್ಪರ ಅಂತರ್ ಸಂಬಂಧ ಹೊಂದಿದ ಘಟನೆಗಳೆಂಬುದನ್ನು ಗೌಣವಾಗಿವೆ ಅವು ಪ್ರತ್ಯೇಕ ಪ್ರಪಂಚಗಳೋ ಎಂಬಂಥ ಪರಿಭಾವಿಸುವಿಕೆ ಇಂತಹ ಕಡೆಯಲ್ಲಿ ಕಟ್ಟೀಮನಿಯವರು ಸಂಯದಿಂದ ವರ್ಣಿಸಿದ್ದಾರೆ. ಮಾಡಿಮಡಿದವರು ಕಾದಂಬರಿ ಉತ್ತಮ ಕಾದಂಬರಿಯಾಗಿರುತ್ತಿತ್ತು. ಮಾಡಿಮಡಿದವರು ಕಾದಂಬರಿ ಕೆಲವು ದೋಷಗಳಿಂದ ಕೂಡಿದ್ದರೂ ಸಮಾಜದ ಪೂರ್ಣಬದುಕು ರಾಜಕೀಯ ಅಗತ್ಯತೆ ಆರ್ಥಿಕ ಸ್ವಾತಂತ್ರ್ಯದ ಅನಿವಾರ್ಯತೆ ಹಳ್ಳಿ ನಗರಗಳ ನಡುವಿನ ತಾರತಮ್ಯ ಹಳ್ಳಿಗರ ಮುಗ್ಧತೆ, ಮೌಢ್ಯ ವಸಾಹತು ವಿರುದ್ಧದ ಹೋರಾಟ ಮುಂತಾದವುಗಳನ್ನು ಬಿಚ್ಚಿಡುತ್ತವೆ ಹೀಗೆ ಕಟ್ಟೀಮನಿಯವರ

'ಮಾಡಿಮಡಿದವರು' ಕಾದಂಬರಿಯಲ್ಲಿ ರಾಷ್ಟ್ರೀಯತೆಯ ಮನೋಭಾವನೆಯನ್ನು ಇಂದಿನ ಯುವ ಜನತೆಯಲ್ಲಿ ಬೆಳೆಸಲು ಶ್ರಮಿಸಿದ್ದಾರೆ.

ನಿರಂಜನರ ಸಾಹಿತ್ಯ ವೈವಿಧ್ಯಮಯವಾದುದು. ಭಾಷೆ-ಶೈಲಿ-ಕಲಾತ್ಮಕ ಅನನ್ಯತೆಗಳಿಗೆ ಸಂಬಂಧಿಸಿದ ಅಧ್ಯಯನವಿರುವಂತೆ ಅಲ್ಲಿ ಸಾಮಾಜಿಕ ಕಾಳಜಿಗಳೂ ಪ್ರಮುಖವಾಗಿವೆ. ಸಾಮಾಜಿಕ-ಆರ್ಥಿಕ-ರಾಜಕೀಯ ಅಸಮಾನತೆಗಳ ವಿರುದ್ಧ ದನಿಯೆತ್ತಿದ ನಿರಂಜನರು, ಇಂತಹ ಹೋರಾಟಗಳನ್ನು ಮಾರ್ಕ್ಸ್‌ವಾದಿ ಚಿಂತನೆಯ ನೆಲೆಯಲ್ಲಿ ಸಿದ್ಧಗೊಳಿಸುವುದರಿಂದ ಇಲ್ಲಿ ಸಾಹಿತ್ಯ-ಸಿದ್ಧಾಂತಗಳ ಸಮನ್ವಯದ ಚರ್ಚೆಯೂ ಅಗತ್ಯವೆನಿಸುತ್ತದೆ.

ಪ್ರಗತಿಶೀಲ ಲೇಖಕರಲ್ಲಿ ನಿರಂಜನರು ಸಾಮಾಜಿಕ ಪ್ರಜ್ಞೆಯನ್ನುಂಟು ಮಾಡುವ ಪ್ರಮುಖ ಲೇಖಕರಾಗಿದ್ದಾರೆ. ಅವರಲ್ಲಿ ದಟ್ಟವಾದ ಸಾಮಾಜಿಕ ಕಳಕಳಿಯಿದೆ. ಈ ಸಾಮಾಜಿಕ ಕಳಕಳಿ ಕೇವಲ ಕರುಣೆಯಿಂದ ಮಾತ್ರ ಹುಟ್ಟಿರದಾಗಿರದೆ, ಸಮಾಜ ವ್ಯವಸ್ಥೆಯ ಮೂಲ ಬೇರುಗಳನ್ನು ಹುಡುಕುವ ಸೈದ್ಧಾಂತಿಕ ನೆಲೆಯಿಂದ ಮೂಡಿ ಬಂದುದಾಗಿದೆ. ಹೀಗಾಗಿ ನಿರಂಜನರ ಕೃತಿಗಳಲ್ಲಿ ಬರುವ ಸಾಮಾಜಿಕ ಚರ್ಚೆ ತುಂಬಾ ಮುಖ್ಯವಾಗುತ್ತದೆ. ಅಂತೆಯೇ ಸಮಾಜದ ಪ್ರಮುಖ ಬೆಳವಣಿಗೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ವರ್ಗಸಂಘರ್ಷ, ಮಹಿಳಾಸಮಸ್ಯೆ, ಮಧ್ಯಮವರ್ಗದ ಜೀವನಚಿತ್ರಣ, ನೋವಿನನೆಲೆಗಳ ಅಭಿವ್ಯಕ್ತಿ, ಬಂಡಾಯದ ಧ್ವನಿ-ಹೀಗೆ ಸಮುದಾಯದ ವಿವಿಧ ಮಗ್ಗಲುಗಳನ್ನು ಕುರಿತಂತೆ ಇಲ್ಲಿ ವಿಶ್ಲೇಷಿಸಲಾಗಿದೆ. ನಿರಂಜನರ ಸಾಮಾಜಿಕ ಹೋರಾಟದಲ್ಲಿಯೇ ರಾಜಕೀಯಪ್ರಜ್ಞೆ ಕೂಡಿಕೊಂಡಿರುವುದರಿಂದ ರಾಜಕೀಯ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಇಲ್ಲಿಯೇ ಚರ್ಚಿಸಲಾಗಿದೆ.

ನಿರಂಜನರು ತ.ರಾ.ಸು. ಚರಿತ್ರೆಯನ್ನು ವೈಭವೀಕರಿಸಲಿಲ್ಲ. ಹೊಡೆತ ತಿನ್ನುವುದು, ಲಾಕಪ್ಪಿನಲ್ಲಿ ಸಾಯುವುದು, ಕೂಲಿಯಿಲ್ಲದೆ ಬಳಲುವುದು, ಕೆಲಸಕ್ಕಾಗಿ ಅಲೆಯುವುದು, ನೋವಿನಿಂದ ನರಳುವುದು ಈ ಎಲ್ಲ ಕ್ರಿಯೆಗಳಲ್ಲಿ ಏನೂ ಬದಲಾವಣೆಯಾಗದೇ ಇರುವುದನ್ನ ಗಮನಿಸಿದಾಗ ಈ ಸ್ವಾತಂತ್ರ್ಯ ಯಾರಿಗೆ ಬಂತು? ಎಲ್ಲಿಗೆ ಬಂತು? ಎಂಬಂತಹ ಪ್ರಶ್ನೆಗಳು ಮುಖ್ಯವಾಗುತ್ತವೆ. ಈ ಎಲ್ಲ ಪ್ರಶ್ನೆಗಳ ಹುಡುಕಾಟವಾಗಿ ನಿರಂಜನರ ಕಾದಂಬರಿಗಳಲ್ಲಿ ವರ್ಗಸಂಘರ್ಷ ಸ್ಫೋಟಿಸಿದೆ. ಬಿಳಿಯರು ಹೋದರು, ಕರಿಯರು ಅಧಿಕಾರ ಹಿಡಿದುಕೊಂಡರು. ಆದರೆ ಅದದ್ದೇನು? ದರ್ಪತೋರುವಲ್ಲಿ, ಅನ್ಯಾಯವೆಸಗುವಲ್ಲಿ, ಶೋಷಣೆ ಮಾಡುವಲ್ಲಿ ಏನೂ ವ್ಯತ್ಯಾಸವಿಲ್ಲವೆಂಬ ಸಂಗತಿಗಳನ್ನು ನಿರಂಜನರ ಕೃತಿಗಳು ಪರಿಣಾಮಕಾರಿಯಾಗಿ ಹಿಡಿದಿಡುತ್ತವೆ. ಸ್ವಾತಂತ್ರ್ಯ ದಿನಾಚರಣೆಯಂದೂ ಹಸಿವಿನಿಂದ ಸಾಯುವ ಸಹಸ್ರಾರು ಜನ, ಈ ದಿನದಂದೇ ಲಾಕಪ್ಪಿನಲ್ಲಿ ಅಸುನೀಗುವ ನೂರಾರು ಜನ-ಈ ದೇಶದ ಸ್ವಾತಂತ್ರ್ಯದ ಪೊಳ್ಳುತನಕ್ಕೆ ಸಾಕ್ಷಿಯಾಗಿದ್ದಾರೆ. ಇಂತಹ ಅನೇಕ ಪ್ರಸಂಗಗಳನ್ನು ನಿರಂಜನರು ತಮ್ಮ ಕಾದಂಬರಿಗಳ ಮೂಲಕ ಪರಿಣಾಮಕಾರಿಯಾಗಿ ಹೇಳಿದ್ದಾರೆ.

"ಕಯ್ಯಾರಿನ ನಾಲ್ವರು ರೈತ ಮಕ್ಕಳು ಹುತಾತ್ಮರಾಗುವುದಕ್ಕೆ ತುಸು ಮುನ್ನ ನಾನು

ಕಯ್ಯಾರಿಗೆ ಹೋಗಿದ್ದೆ. ಜನತೆಯ ಸಮರದಲ್ಲಿ ದೇಶದ ನಾನಾ ಕಡೆ ಜೀವ ತೇದವರ ಜತೆ ಒಂದು ವರ್ಷದ ಬಳಿಕ ಮತ್ತೊಮ್ಮೆ ಹೋದೆ. ಕಯ್ಯಾರು ದಿನಾಚರಣೆಯಲ್ಲಿ ಭಾಗವಹಿಸಲು ಈ ಎರಡು ಭೇಟಿಗಳ ವೇಳೆಯಲ್ಲೂ ನಾನಿದ್ದುದು ರಂಗದಮೇಲೆ" ಎಂದು ಅವರು 'ಚಿರಸ್ಮರಣೆ' ಕಾದಂಬರಿಯ ಪ್ರೇರಣೆಗಳನ್ನು ಕುರಿತು ಹೇಳಿದ್ದಾರೆ.

ಹೀಗೆ ನಲವತ್ತರ ದಶಕದಲ್ಲಿ ಸ್ಫೋಟಗೊಂಡ ರೈತಚಳವಳಿ ಕೇರಳದ ಮಲಬಾರ್ ಪ್ರಾಂತದಲ್ಲಿ ಆರಂಭಗೊಂಡು ಕಾಸರಗೋಡು, ಕರಿವಳ್ಳುರು, ಚಿರುಕ್ಕಲ್, ನೀಲೇಶ್ವರ ಮತ್ತು ಕಯ್ಯಾರು ಈ ಎಲ್ಲ ಕಡೆ ತೀವ್ರವಾಯಿತು. ಕೈಯೂರಕ್ಕೆ ಬಂದ ಮಾಸ್ತರರು ತಮ್ಮ ಶಿಷ್ಯಂದಿರಾದ ಅಪ್ಪು, ಚಿರಕುಂಡರ ಮೂಲಕ ಹಳ್ಳಿಯಲ್ಲಿ ಜಾಗೃತಿಯ ಪ್ರಯತ್ನಗಳು ನಡೆದವು. ಇದನ್ನು ಕಾದಂಬರಿಯ ಮೊದಲ ಭಾಗದಲ್ಲಿ ಕಾಣಬಹುದಾಗಿದೆ. ಪಿತೂರಿ ನಡೆಸಿದ ಜಮೀನ್ದಾರರು ಬ್ರಿಟಿಷ್ ದಬ್ಬಾಳಿಕೆಯ ಮೂಲಕ ರೈತನಾಯಕರಿಗೆ ಗಲ್ಲು ಶಿಕ್ಷೆಯನ್ನು ನೀಡುತ್ತಾರೆ. ಇದು ಕಾದಂಬರಿಯ ಕೊನೆಯ ಭಾಗದಲ್ಲಿ ಪರಿಣಾಮಕಾರಿಯಾಗಿ ಚಿತ್ರತವಾಗಿದೆ.

ಚಿಕ್ಕರೈತ ಕುಟುಂಬಗಳೇ ಹೆಚ್ಚಾಗಿದ್ದ ಕೈಯೂರದಲ್ಲಿ, ಬ್ರಾಹ್ಮಣನಾಗಿದ್ದ ನಂಬೂದರಿ ಹಾಗೂ ಶೂದ್ರನಾಗಿದ್ದ ನಂಬಿಯಾರ್ ಇಬ್ಬರೂ ಜಮೀನುದಾರರು ರೈತರನ್ನು ಜೀತದಾಳುಗಳನ್ನು ಶೋಷಣೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಕೈಯೂರಿಗೆ ಬಂದ ಮಾಸ್ತರರು ಊರಿನ ಆಶಾದೀಪವಾಗುತ್ತಾರೆ. ಬಂಡಾಯದ ಪ್ರಜ್ಞೆಯನ್ನು ಬೆಳೆಸಿದ ಅವರು, ರೈತ ಕಾರ್ಮಿಕರನ್ನು ಸಂಘಟಿಸುತ್ತಾರೆ. ಅಪ್ಪು, ಚಿರಕುಂಡದ ಜತೆ ಕೂಲಿಕಾರ ಅಬೂಬಕರ್ ಕೂಡಾ ಸೇರಿಕೊಳ್ಳುತ್ತಾರೆ. ಇವರೆಲ್ಲರ ಪ್ರಯತ್ನದ ಮೂಲಕ ರೈತ ಸಂಘಟನೆ ಬಲಗೊಳ್ಳುತ್ತದೆ. ರೈತಸಂಘಟನೆ ಬಲಗೊಂಡಂತೆಲ್ಲ ಜಮೀನುದಾರರ ಕ್ರೌರ್ಯ ಹೆಚ್ಚುತ್ತಾ ಹೋಗುತ್ತದೆ. ರೈತರು ನ್ಯಾಯ ಕೇಳಿದಾಗ ಜಮೀನುದಾರರು ಬ್ರಿಟಿಷ್ ಸರಕಾರಕ್ಕೆ ತಪ್ಪು ಮಾಹಿತಿ ನೀಡಿ "ಇದು ಸ್ವಾತಂತ್ರ್ಯ ಚಳುವಳಿ" "ಕಮ್ಯೂನಿಸ್ಟ್ ಹೋರಾಟ" ಎಂದೆಲ್ಲಾ ಪುಕಾರು ಕಳಿಸಿದಾಗ ಊರಲ್ಲಿ ಪೊಲೀಸರು ಪ್ರವೇಶಮಾಡುತ್ತಾರೆ. ಆಗ ಅನೇಕ ರೈತರು ಪೊಲೀಸರ ಹಿಂಸೆಗೆ ಒಳಗಾಗುತ್ತಾರೆ; ಕೆಲವರು ಭೂಗತರಾಗುತ್ತಾರೆ. ದೀರ್ಘಕಾಲ ನಡೆದ ಖೈದಿಗಳ ವಿಚಾರಣೆ ಕೊನೆಗೆ ಬಂಡಾಯದ ನಾಲ್ಕು ಹೋರಾಟಗಾರರ ಗಲ್ಲುಶಿಕ್ಷಯೆ ತೀರ್ಪಿನ ಮೂಲಕ ಕೊನೆಗೊಳ್ಳುತ್ತದೆ. ಕೊನೆಗೆ ಹುತಾತ್ಮರಿಗೆ ಸ್ಮರಣೆ ನಡೆಯುತ್ತದೆ. ಈ ಪ್ರಸಂಗ ಇಡೀ ದೇಶದ ಗಮನವನ್ನೇ ಸೇಳೆಯುತ್ತದೆ. ಇದಿಷ್ಟು 'ಚಿರಸ್ಮರಣೆ' ಕಾದಂಬರಿಯ ವಸ್ತುವಾಗಿದೆ.

ಈ ಕಾದಂಬರಿಗಳಲ್ಲಿ ರೈತರು ನಡೆಸುವ ಹೋರಾಟ ಜಮೀನುದಾರರರೊಂದಿಗಾದರೂ ಕೂಡ ನಂತರ ಇದು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆಸಿದ ಹೋರಾಟವು ಆಗುತ್ತದೆ. ಈ ಕಾದಂಬರಿಯಲ್ಲಿ ರೈತರು ಮತ್ತು ಕೂಲಿಕಾರರು ಕೂಡಿಕೊಂಡು ನಡೆಸುವ ಚಳವಳಿಯಲ್ಲಿನ ಘೋಷಣೆಗಳು ಗಮನಾರ್ಹವಾಗಿವೆ. "ಭೂಮಿ ಯಾರದು? ಭೂಮಿ ರೈತನದು! ಉಳ್ಳುವವನೇ ಹೊಲದೊಡೆಯ! ಹಳೆಯ ಸಾಲ ಮನ್ನಾ ಮಾಡಿ! ಜಮೀನ್‌ದಾರಿ ಪದ್ಧತಿ–ಅಳಿಸಿ ಹೋಗಲಿ! ಸಾಮ್ರಾಜ್ಯಶಾಹಿ ನಾಶವಾಗಲಿ!" ಇಂತಹ

ಘೋಷಣೆಗಳು ವರ್ಗಸಂಘರ್ಷದ ಪ್ರಮುಖ ಮಾದರಿಗಳಾಗಿವೆ. ಬ್ರಿಟಿಷ್ ಸರಕಾರವು ಅಪ್ಪು, ಚಿರಕುಂಡ, ಕುಞಂಬು, ಅಬೂಬಕರ್ ಈ ನಾಲ್ಕು ರೈತನಾಯಕರಿಗೆ ಮರಣದಂಡನೆಯ ಶಿಕ್ಷೆ ವಿಧಿಸಿದಾಗ ತೀವ್ರ ಆಘಾತಕ್ಕೊಳಗಾದ ಕೈಯೂರು, ಇಡೀ ದೇಶದ ಗಮನವನ್ನು ಸೆಳೆಯುತ್ತದೆ.

ಚರಿತ್ರೆಯನ್ನು ವಾಸ್ತವವಾದೀ ನೆಲೆಯಲ್ಲಿ ಕಾಣುವ ನಿರಂಜನರು 'ಕೈಯೂರ' ಹೋರಾಟದ ಮೂಲಕ ಚಳವಳಿಯ ಅನಿವಾರ್ಯತೆಯನ್ನು ಸ್ಪಷ್ಟಪಡಿಸಿದ್ದಾರೆ. ಈ ಕಾದಂಬರಿಯಲ್ಲಿ ರೈತನಾಯಕರಿಗೆ ಗಲ್ಲುಶಿಕ್ಷೆಯಾಗಿ ಅವರ ಹೋರಾಟಕ್ಕೆ ಹೊಡೆತಬಿದ್ದರೂ ಇಡೀ ದೇಶದ ಮೇಲೆ ಈ ಘಟನೆ ತೀವ್ರ ಪರಿಣಾಮವನ್ನುಂಟು ಮಾಡುತ್ತದೆ. ಇಂತಹ ತೀವ್ರತರವಾದ ಹೋರಾಟವನ್ನೊಳಗೊಂಡಿರುವ ಈ ಕೃತಿ ವರ್ಗಸಂಘರ್ಷದ ಪ್ರಮುಖ ದಾಖಲೆಯಾಗಿ ಕಾಣಿಸಿಕೊಳ್ಳುತ್ತದೆ. ತನ್ನ ಸಮಕಾಲೀನ ಚರಿತ್ರೆಯನ್ನು ಈ ಕೃತಿಯ ಮೂಲಕ ನಿರಂಜನರು ಪುನರ್ ಸೃಷ್ಟಿಸಿ ಯಶಸ್ವಿಯಾಗಿದ್ದಾರೆ. ಈ ಕಾರಣದಿಂದಲೇ 'ಚಿರಸ್ಮರಣೆ' ವರ್ಗಸಂಘರ್ಷದ ಪ್ರಮುಖ ಮಾದರಿಯಾಗಿ ಕಾಣಿಸುತ್ತದೆ.

ಇಲ್ಲಿ ವರ್ಗಸಂಘರ್ಷವನ್ನು ಮರೆಮಾಡುವ ದೇಶೀಪ್ರಭುತ್ವದ ನೆರಳು ಇಲ್ಲ. ಭೂಹೋರಾಟದ ಪ್ರಖರತೆಯ ಮುಂದೆ ರಾಷ್ಟ್ರಪ್ರೇಮ ಮೌನವಾಗುತ್ತದೆ. ಹೀಗಾಗಿ ಈ ಕಾದಂಬರಿಯಲ್ಲಿ ವರ್ಗಸಂಘರ್ಷದ ತಾತ್ವಿಕ ನೆಲೆಗಳು ಗಟ್ಟಿಯಾಗಿರುವುದನ್ನು ಕಾಣಬಹುದಾಗಿದೆ. ರಾಜ–ಧರ್ಮ–ರಾಷ್ಟ್ರದ ಪರಿಕಲ್ಪನೆಗಳನ್ನು ಮೀರಿ ಭೂಮಿಗಾಗಿ ನಡೆಯುವ ಇಲ್ಲಿನ ಹೋರಾಟ ವರ್ಗ ಸಂಘರ್ಷದ ಅತ್ಯುತ್ತಮ ಮಾದರಿಯಾಗಿ ಕಾಣಿಸಿಕೊಳ್ಳುತ್ತದೆ.

ನಿರಂಜನರವರ ಕಥಾ ಸಾಹಿತ್ಯದಲ್ಲಿ ವರ್ಗ ಸಂಘರ್ಷದ ಗತಿ ತಾರ್ಕಿಕತೆ ಎದ್ದು ಕಾಣುವ ಅಂಶ ಅವರ ಕಥಾ ಸಾಹಿತ್ಯದಲ್ಲಿ ಶೋಷಕ ಶಕ್ತಿಗಳ ವಿರುದ್ಧದ ಹೋರಾಟ ಸ್ಥಾಯಿಯಾಗಿದೆ. ಬಿಡುಗಡೆ ಸಂಚಾರಿಯಾಗಿದೆ ಹೆಣ್ಣು ಲೈಂಗಿಕ ಶೋಷಣೆಗೊಳಗಾಗುವ ಸ್ಥಿತಿಯನ್ನು ನಿರಂಜನರು ಪುರುಷ ಪ್ರಧಾನ ವ್ಯವಸ್ಥೆ ಮತ್ತು ಬಂಡವಾಳಶಾಹಿ ಎರಡೂ ನೆಲೆಯಲ್ಲೂ ಶೋಧಿಸಿದ್ದಾರೆ.

ಪ್ರಗತಿಶೀಲ ಲೇಖಕರ ಪೈಕಿ ಎಡ ಪಂಥೀಯ ಸಿದ್ಧಾಂತಕ್ಕೆ ಬದ್ಧರಾಗಿಯೂ ಸತ್ವಯುತವಾಗಿ ಬರೆದವರಲ್ಲಿ ನಿರಂಜನರು ಪ್ರಮುಖರು ಪುರೋಹಿತಶಾಹಿ ಸಾಮ್ರಾಜ್ಯಶಾಹಿ ಜಮೀನ್ದಾರ ವರ್ಗ, ಬಂಡವಾಳಶಾಹಿ ಮುಖಗಳ ಕ್ರೌರ್ಯವನ್ನು ನಿರಂಜನರು ಬಚ್ಚಿಟ್ಟಿದ್ದಾರೆ. ಇನ್ನೊಂದು ಮಗ್ಗುಲಿನಿಂದ ಶೋಷಿತರ ಹೋರಾಟ ಸಂಘರ್ಷ ಬಿಡುಗಡೆಯ ಪ್ರಕ್ರಿಯೆಯಗಳು ಜರುಗುತ್ತವೆ.

ನಿರಂಜನರವರ ಚಿರಸ್ಮರಣೆಯ ವಸ್ತು ಸ್ವಾತಂತ್ರ ಪೂರ್ವದ್ದು ಉತ್ತರ ಕರ್ನಾಟಕದ ಕಾಸರಗೋಡಿನ ಚಿಕ್ಕಹಳ್ಳಿ ಕಯ್ಯೂರು ಎಂಬಲ್ಲಿ ನಡೆದ ಶ್ರಮಿಕ ಹೋರಾಟದ ಚಿತ್ರಣವು ಇಲ್ಲಿ ವ್ಯಕ್ತವಾಗಿದೆ. ವಿದ್ಯಾರ್ಥಿ ದೆಸೆಯಲ್ಲಿಯೇ ಆಳುವ ಸರ್ಕಾರಕ್ಕೆ ಅಹಿಂಸಾತ್ಮಕ ಚಳುವಳಿ

ಕಣ್ಣು ಓರೆಸುವ ಸಾಧನವಾಗಿ ಪರಿಣಮಿಸಿದೆ. ಈ ಆಂದೋಲನದಲ್ಲಿ ಕ್ರಾಂತಿಕಾರಿ ಕಮ್ಯೂನಿಸ್ಟ್ ಮಾದರಿಯಾದ ಚಳುವಳಿಯಾಗಿದೆ.

ಜಮೀನುದಾರಿಕೆ ಮತ್ತು ಸಾಮ್ರಾಜ್ಯಶಾಹಿ ನೀತಿಯ ಮೂಲಕ ಆಗುವ ಕಯ್ಯಾರು ರೈತರ ಶೋಷಣೆ ಅದಕ್ಕೆ ಪ್ರತಿಯಾಗಿ ನಡೆಯುವ ಹೋರಾಟದ ಹಿಂದೆ ಕಮ್ಯೂನಿಸ್ಟ್ ಧೋರಣೆಯ ಸಾಮಾನ್ಯ ನೆರಳು ಕಾಣಿಸುತ್ತದೆ.

ಶ್ರಮಜೀವಿ ವರ್ಗದ ಪ್ರಭುತ್ವ ಸ್ಥಾಪಿಸಿ ಬಂಡವಾಳಶಾಹಿಯುನ್ನು ಕಿತ್ತೆಸೆಯುವ ಖಾಸಗಿ ಆಸ್ತಿ ಇಲ್ಲದ ವರ್ಗರಹಿತ ನವಸಮಾಜ ನಿರ್ಮಾಣವನ್ನು ಕಮ್ಯೂನಿಸ್ಟ್ ಮ್ಯಾನಿಪೆಸ್ಟೊ ಮೂಲಕ ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್ ಘೋಷಿಸಿದರು. ಇಂಥ ಕಾರ್ಮಿಕ ವರ್ಗದ ಚಳುವಳಿಯ ಆಗಾಧ ಅನುಭವದ ಮಾರ್ಕ್ಸ್‌ವಾದ ಎನ್ನಿಸಿಕೊಂಡಿತು. ಇದರ ಪರಿಣಾಮವಾಗಿ ಪಾಳೆಯಗಾರಿಕೆ ಪದ್ಧತಿ ಪ್ರಬಲವಾಗಿದ್ದ ಜರ್ಮನಿ ಮತ್ತು ಝಾರ್‌ಶಾಹಿ ರಷಿಯಾದಂತಹ ದೇಶಗಳಲ್ಲಿ ವೈಜ್ಞಾನಿಕ ಸಮಾಜವಾದವನ್ನು ಯಶಸ್ವಿಯಾಗಿ ತರಲು ಸಾಧ್ಯವಾಯಿತು ಎಲ್ಲಾ ದೇಶಗಳ ದುಡಿಮೆಗಾರರೇ ಒಂದಾಗಿರಿ ಎಂಬ ಕಮ್ಯೂನಿಸ್ಟ್ ಒಂದು ಆಶಯವು ಚಿರಸ್ಮರಣೆಯಂತಹ ಕೃತಿಯಲ್ಲಿ ಈ ಬಗೆಯ ಮನೋಭಾವನೆ ಎಂದ ಮಾತ್ರಕ್ಕೆ ಅದು ಕಮ್ಯೂನಿಸ್ಟ್ ತತ್ವಗಳ ಪ್ರತಿಪಾದನೆ ಮಾಡುತ್ತದೆ ಎಂದೋಈ ತತ್ವ ಪ್ರತಿಪಾದನೆಯಷ್ಟೇ ಪ್ರಧಾನವಾಗಿರುವ ಕೃತಿಯೆಂದೇ ಭಾವಿಸಲಾಗದು. ಕಮ್ಯೂರಿನಲ್ಲಿ ನಡೆಯುವ ವರ್ಗ ಹೋರಾಟ ಯಾವುದೇ ಅರ್ಥಪೂರ್ಣ ಸಾಮಾಜಿಕ ಪರಿವರ್ತನೆಯಲ್ಲೂ ಅಪೇಕ್ಷಣೀಯವೇ ಪರಕೀಯವಾಗದ ಆವರಣ. ಸಚಿತ್ರವಾಗಿ ವಿವರಗಳಲ್ಲಿ ಮೂಡುವ ಕಯ್ಯಾರು ಕಾದಂಬರಿಯಲ್ಲಿ ಸಂಘರ್ಷ ಕೇಂದ್ರವಾಗಿ ನಿಲ್ಲುತ್ತದೆ ಕಯ್ಯಾರು ಭಾರತದ ಉಳಿದ ಯಾವುದೇ ಹಳ್ಳಿಯ ಚಿತ್ರಣವಾಗಬಹುದಾದ್ದರಿಂದ ಅದು ಸಾಧಾರಣೀಕರಣ ಗುಣವನ್ನು ಹೊಂದಿದೆ.

'ಚಿರಸ್ಮರಣೆ' ಕಾಂದಬರಿಯಲ್ಲಿ ಹಳ್ಳಿಯ ಬದುಕಿನ ಜಮೀನುದಾರಿ ವ್ಯವಸ್ಥೆಯ ಸಂದರ್ಭದ ಮೂಲಕ ವರ್ಗಸಂಘರ್ಷ, ಹಣ, ಸಂಪತ್ತು, ಅಧಿಕಾರ, ದರ್ಪಗಳು ಮಾತ್ರ ಮುಖ್ಯವಾಗುತ್ತದೆ. ತಮ್ಮ ತಮ್ಮ ಸ್ವಾಥಕ್ಕಾಗಿ ಹೆಣೆದುಕೊಳ್ಳುವ ಬಲೆಗಳೇ ಪ್ರಧಾನವಾಗುತ್ತವೆ. ಶ್ರೀಕಂಠನ ಸಾಮೀಪ್ಯವನ್ನು ಹೊಂದಿ, ಅವನ ಅಸರೆಯಲ್ಲಿದ್ದ ಚಂದ್ರು, ಅದೇ ಇನ್ನೊಬ್ಬ ಸಹಪಾಠಿ ನಾರಾಯಣನ ನೋವಿಗೆ, ಶೋಷಣೆಗೆ ಕಾರಣವನ್ನು ತಿಳಿದುಕೊಂಡರೂ ಮೌನ ವಹಿಸಬೇಕಾಗುತ್ತದೆ.

ನಿರಂಜನರು ಎಡಪಂಥೀಯ ವಿಚಾರಗಳಿಗೆ ಬದ್ಧರಾದ ಲೇಖಕರಾಗಿದ್ದರು. ಹೀಗಾಗಿ ಅವರು ಸಮಾಜವನ್ನು ನೋಡುವ ದೃಷ್ಟಿಕೋನವು ವಿಶಿಷ್ಟವಾಗಿದೆ. ಅಲ್ಲಿ ವರ್ಗ ಸಂಘರ್ಷವೇ ಅತ್ಯಂತ ಪ್ರಧಾನ ಸಂಗತಿಯಾಗುತ್ತದೆ. ವರ್ಗದ ಪರಿಕಲ್ಪನೆಗಳನ್ನು ಕುರಿತಂತೆ ಅನೇಕ ವ್ಯಾಖ್ಯಾನಗಳಿದ್ದರೂ ಒಂದೆರಡನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದಾಗಿದೆ.

"ಇದುವರೆಗೂ ಆಗಿ ಹೋಗಿರುವ ಎಲ್ಲ ಸಮಾಜದ ಇತಿಹಾಸವೂ ವರ್ಗ ಹೋರಾಟದ ಇತಿಹಾಸವೇ ಆಗಿದೆ" ಎಂದು ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ ಸ್ಪಷ್ಟಪಡಿಸುತ್ತದೆ. ಸಮಾಜ ವ್ಯವಸ್ಥೆಯಲ್ಲಿ ಅನೇಕ ಗುಂಪುಗಳಿದ್ದರೂ ಅವು ಮುಖ್ಯವಾಗಿ ಎರಡು ವರ್ಗಗಳಾಗಿ ಸಂಘರ್ಷಕ್ಕಿಳಿಯುತ್ತವೆಂಬುದು ಕಮ್ಯೂನಿಷ್ಟರ ಸಿದ್ಧಾಂತವಾಗಿದೆ. ಇಂತಹ ಸಂಘರ್ಷದಲ್ಲಿ ಉತ್ಪಾದನಾ ವ್ಯವಸ್ಥೆ ಬದಲಾಗುತ್ತದೆ. ಹೀಗಾಗಿ ಆರ್ಥಿಕ ತಳಹದಿಯೇ ವರ್ಗ ಹೋರಾಟದ ಮೂಲ ಆಶಯವಾಗುತ್ತದೆ. ಶ್ರಮದ ಸುಲಿಗೆಯಿಂದ ವರ್ಗಸಮರ ಪ್ರಾರಂಭವಾಗುತ್ತದೆ. ರೈತರ ಶ್ರಮದ ಫಲವನ್ನು ಭೂಮಾಲೀಕರ ವರ್ಗಪಡೆದರೆ, ಕಾರ್ಮಿಕರ ಶ್ರಮದ ಫಲವನ್ನು ಮಿಲ್ ಮಾಲೀಕವರ್ಗ ಪಡೆಯುತ್ತದೆ. ಇಂತಹ ವರ್ಗಗಳು ಪರಸ್ಪರ ತಮ್ಮ ತಮ್ಮ ಹಿತಾಸಕ್ತಿಗಳಿಗಾಗಿ ಜಗ್ಗಾಟ ನಡೆಸಿದಾಗ ಸಂಘರ್ಷ ಪ್ರಾರಂಭವಾಗುತ್ತದೆ.

ಮಾರ್ಕ್ಸ್, ಮೊದಲು ರೈತರ ಕ್ರಾಂತಿಯಲ್ಲಿ ನಂಬಿಕೆಯುಳ್ಳವರೇ ಆಗಿದ್ದರು. ಕ್ರಿ.ಶ. ೧೮೪೮ರ ಫ್ರಾನ್ಸ್ ಕ್ರಾಂತಿಯ ಸಂದರ್ಭದಲ್ಲಿ ರೈತರು, ಕಾರ್ಮಿಕರೊಡನೆ ಶಸ್ತ್ರ ಹಿಡಿಯಲಿಲ್ಲ. ಹೀಗಾಗಿ ರೈತರ ಕ್ರಾಂತಿಯ ಬಗೆಗೆ ಮಾರ್ಕ್ಸ್ ನಂಬಿಕೆ ಕಳೆದುಕೊಂಡರು. ಆದರೆ ಎಲ್ಲರೂ ರೈತರ ಕ್ರಾಂತಿಯನ್ನು ಸಂಪೂರ್ಣವಾಗಿ ನಿರಾಕರಿಸದೆ, ಕೃಷಿಕಾರ್ಮಿಕರಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಲೆನಿನ್‌ರ ಪ್ರಕಾರ ರೈತರೂ ಕ್ರಾಂತಿಕಾರಿಗಳೇ ಆಗಿ ಕಾಣುತ್ತಾರೆ. ಚೀನಾದಲ್ಲಿ ಮಾವೊ ಅವರ ಮುಂದಾಳತ್ವದಲ್ಲಿ ನಡೆದ ಕ್ರಾಂತಿ ರೈತಕ್ರಾಂತಿಯೇ ಆಗಿದೆ. ಕ್ಯಾಥಲೇನ್ ಗಾಫ್, ಇರ್‌ಫಾನ್ ಹಬೇಬ ಹಾಗೂ ನಂಬೂದರಿಪಾಡ್–ಈ ಮೊದಲಾದವರು ರೈತರ ಹೋರಾಟಗಳ ಬಗೆಗೆ ನಂಬಿಕೆಯುಳ್ಳವರಾಗಿದ್ದಾರೆ. ಭಾರತೀಯ ರೈತರು ಕ್ರಾಂತಿಕಾರಿಗಳೆಂಬುದಕ್ಕೆ ತೆಲಂಗಣಾ ಹೋರಾಟ, ನಕ್ಸಲಬಾರಿ ಚಳವಳಿ, ಕೈಯೂರ ಬಂಡಾಯದಂತಹ ಅನೇಕ ಹೋರಾಟಗಳು ಇಂದು ಸಾಕ್ಷಿಯಾಗಿ ನಿಂತಿವೆ.

ಭಾರತ ಭೂಮಿಯ ಪ್ರಕೃತಿಯ ಸೊಬಗು ಅಲ್ಲಿನ ವೀರಗಾಥ, ಉತ್ಸವದ ಜನ ಅತಿಥ್ಯ ಸಂಘದ ಕಟ್ಟಡ ಅವರ ಆಸ್ತಿ ಆ ಊರಿನ ವಿಶಿಷ್ಟತೆಯನ್ನು ಎತ್ತಿ ತೋರಿಸುತ್ತದೆ.

ಕಾದಂಬರಿಯಲ್ಲಿ ಮೆಚ್ಚಬೇಕಾದ ಅಂಶ ಅಲ್ಲಿನ ಪಾತ್ರ ನಿರ್ವಹಣೆ ಅಂತಃಕರಣ ಮಿಡಿಸುವ ಘಟನೆಗಳ ಅನುಸಂಧಾನದಲ್ಲಿ ಬರುವ ಪ್ರಜ್ಞಾಪೂರ್ವಕವಾದ ಕಾಳಜಿ ಪಾತ್ರ ನಿರ್ಮಾಣದ ಸಂದರ್ಭದಲ್ಲಿ ತೆರೆಹಾಕದೆ ತೀರ ಸಹಜವಾಗಿ ಅವು ಮೂಡುತ್ತವೆ. ದೈನಂದಿನ ಬದುಕಿನಲ್ಲಿ ಯಾರನ್ನೋ ಕಂಡು ಸಂಭಾಷಿಸಿದ ಹಾಗೇ ನಮ್ಮ ನಡುವೆ ಇರುವ ಹಲವರಲ್ಲಿ ಒಬ್ಬರಾಗಿ ನಡೆದುಕೊಳ್ಳುತ್ತವೆ.

ಕಾಲ ದೇಶದ ಅಂಕೆಯಲ್ಲದೆ. ವರ್ಗ ಸಂಘರ್ಷ ಏಕರೂಪವಾಗಿರುತ್ತದೆ ಎಂಬುದನ್ನು ನಿರಂಜನರವರು ತೋರಿಸಿಕೊಟ್ಟಿದ್ದಾರೆ.

ಉಳುವವನೇ ಹೊಲದೊಡೆಯ ಸಾಮ್ರಾಜ್ಯ ಶಾಹೀ ನಾಶವಾಗಲೀ ಇಂಕ್ವಿಲಾಬ್, ಜಿಂದಾಬಾದ್ ಜಮೀನ್ದಾರಿಕೆ ಅಳಿಯಲ್ಲಿ ಇವು ಚಿರಸ್ಮರಣೆಯಲ್ಲಿ ಕಂಡುಬರುವ ಪ್ರಮುಖ

ಘೋಷಣೆಳಾಗಿರುತ್ತವೆ. ಕಯ್ಯಾರಿನ ಬಂಡಾಯಕ್ಕೆ ಜಮೀನ್ದಾರರ ದಬ್ಬಾಳಿಕೆಯೇ ಪ್ರೇರಣೆಯಾಗುತ್ತದೆ.

ಜಮೀನ್ದಾರರ ಮತ್ತು ರೈತರ ಗುಲಾಮತ್ವ ಗುಲಾಮರೊಡೆಯರ ನಡುವಿನ ಸಂಘರ್ಷ ಕಾದಂಬರಿ ಕನ್ನಡ ಸಾಹಿಯದಲ್ಲೆ ಕಳಸ ಪ್ರಾಯವಾದ ಕೃತಿಯಾಗಿದೆ. ಕಾಲ ದೇಶ ಭೌಗೋಳಿಕ ಪರಿಸರದ ಕನ್ನಡ ನಾಡಿನ ಎಷ್ಟೇ ದೂರವಿದ್ದರೂ ಅಲ್ಲಿನ ರೈತರು ಎದುರಿಸುವ ಸಮಸ್ಯೆ ಈ ನೆಲದ ರೈತರು ಎದುರಿಸುವಂತಹದ್ದೇ ಆಗಿಬಿಡುವಂತೆ ಕಾದಂಬರಿ ಓದುಗರಿಗೆ ಆಪ್ತವಾಗುತ್ತವೆ. ಮನುಷ್ಯ ಮನುಷ್ಯನನ್ನು ಪ್ರೀತಿಸುವ ಸ್ಥಿತಿಯನ್ನು ನಿರ್ಮಿಸುತ್ತದೆ. ದುಡಿವ ಜನರನ್ನು ಸಂಘಟಿಸುವ ಕೆಲಸವನ್ನು ಮಾಡುತ್ತದೆ.

ಹೀಗೆ ನಿರಂಜನವರ ಕೃತಿ ರಾಜಸತ್ತೆ, ಪುರೋಹಿತ ಶಾಹಿ ಯಾವತ್ತೂ ಸಮಾಜವನ್ನು ಶೋಷಿಸುತ್ತವೆ ಎಂಬ ವಾಸ್ತವವನ್ನು ಅರಿವಿಗೆ ತರುತ್ತವೆ ಹಾಗಾಗಿ ಚಿರಸ್ಮರಣೆ ಯಾವ ಕಾಲಕ್ಕೂ ಪ್ರಸ್ತುತವಾಗಿದೆ.

ಚಿರಸ್ಮರಣೆ ಕೃತಿಯಲ್ಲಿ ವಾಚ್ಯತೆ ಮತ್ತು ಮಿಡಿಸುವ ಗುಣಗಳು ಕಾದಂಬರಿ ಗುಣವಾಗಿದ್ದರೂ ಸಹ ಅದೊಂದು ದೋಷವಾಗಿದೆ.

ಪ್ರಬಲ ಹೋರಾಟದ ಚೇತನಶಕ್ತಿಯಾದರೂ ಕೂಡ ಅವನ ಬಗ್ಗೆ ಕಾದಂಬರಿಯಲ್ಲಿ ಅಂತಹುದೇನು ಕಂಡು ಬರುವುದಿಲ್ಲ.

ಸಾಹಿತ್ಯದಲ್ಲೂ ಬದುಕಿನಲ್ಲೂ ಪ್ರಗತಿಶೀಲತೆಯನ್ನೂ ಎತ್ತಿಹಿಡಿಯುತ್ತಾ ಬಂದವರು ನಿರಂಜನ. ಜನತೆಯ ವಿಮೋಚನೆಯ ಹೋರಾಟದಲ್ಲಿ ಸ್ವಯಂ ಪಾಲುಗೊಂಡು ಅದರ ಅನುಭವವನ್ನು ಅರಗಿಸಿಕೊಂಡ ನಿರಂಜನ ಕ್ರಾಂತಿಕಾರಿ ಸಾಹಿತಿಗಳ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಲೇಖಕ ವ್ಯವಸ್ಥೆಯ ಪರವೋ ವಿರೋಧವೋ ಎಂಬ ಆಯ್ಕೆಯ ಪ್ರಶ್ನೆ ಬರುವ ಮುನ್ನವೇ ನಿರಂಜನರು ಹೋರಾಟದ ದಾರಿಯನ್ನು ಆಯ್ಕೆ ಮಾಡಿಕೊಂಡಿದ್ದರು. ಬಾಳಿನಲ್ಲಿ ಕಂಡ ಕಡು ಕಷ್ಟದ ದಿನಗಳು, ಸಾಮಾಜಿಕ ಆರ್ಥಿಕ ಅಂತರಗಳು ಅವರಿಗೆ ಇಂಥ ನಿಲುವನ್ನು ತೆಗೆದುಕೊಳ್ಳಲು ಪ್ರೇರಣೆಯಾಗಿರಬಹುದು.

ನಿರಂಜನರನ್ನು ಪ್ರಗತಿಶೀಲ ಸಾಹಿತಿ ಎಂದು ಗುರುತಿಸಲಾಗುತ್ತದೆ. ಆದರೆ ಈ ಲೇಖಕ ಪ್ರಗತಿಶೀಲ ಚಳುವಳಿಯಲ್ಲಿ ಮುಖಂಡರೆನಿಸಿಕೊಂಡಿದ್ದವರೊಂದಿಗೆ ಸದಾ ಸೆಣಸಬೇಕಾಯಿತು. ಲೈಂಗಿಕ ವಿಚಾರಗಳ ಮುಕ್ತ ಚಿತ್ರಣವೇ ಪ್ರಗತಿಶೀಲತೆಯಲ್ಲ ಎಂದು ಆಗ ನಿರಂಜನ ಗಟ್ಟಿಯಾಗಿ ವಾದಿಸಿದರು. ಪ್ರಗತಿಶೀಲ ಚಳುವಳಿಯಲ್ಲಿ ಕಡೆಗಣಿಸಲ್ಪಟ್ಟ ನಿರಂಜನ ಸಾಹಿತ್ಯದಲ್ಲಿ ಗೆದ್ದರು.

ಪ್ರಗತಿಶೀಲ ಸಾಹಿತ್ಯಕ್ಕೆ ಅಪರೂಪದ ಕಾಣಿಕೆ ಸಂದಾಯವಾದದ್ದು ಬಸವರಾಜ

ಕಟ್ಟೀಮನಿ ಮತ್ತು ನಿರಂಜನರಿಂದ. ಕಟ್ಟೀಮನಿಯವರು 'ಜ್ವಾಲಾಮುಖಿಯ ಮೇಲೆ' ಕೃಷಿಯಲ್ಲಿ ತಮ್ಮ ಪರಿಸರದ ಬದುಕನ್ನು ಗಾಢವಾಗಿ ಅನುಭವಿಸಿ ಚಿತ್ರಿಸಿದ್ದಾರೆ. ಅವರ ಪಾತ್ರಗಳು ಉತ್ತಮ ಬದುಕಿಗಾಗಿ ಹಂಬಲಿಸುವುದನ್ನು ಕಾಣುತ್ತೇವೆ. ಶೋಷಕ ಶೋಷಿತ ಸಂಬಂಧಗಳು ಅಲ್ಲಿ ದಾಖಲಾಗುತ್ತವೆ. ನಿರಂಜನರ 'ಚಿರಸ್ಮರಣೆ' ಇನ್ನೂ ಮುಂದುವರಿದ ಹಂತದ ಚಿತ್ರಣ. ಕಟ್ಟೀಮನಿಯವರಲ್ಲಿ ಚಿತ್ರಿತವಾದ ವರ್ಗ ಸಂಬಂಧಗಳು ನಿರಂಜನರಲ್ಲಿ ಮುಖಾ ಮುಖಿಯಾಗುತ್ತವೆ. ಕಟ್ಟೀಮನಿಯವರ ಪಾತ್ರಗಳಿಗಿಲ್ಲದ ಸೈದ್ಧಾಂತಿಕ ಪ್ರಬುದ್ಧತೆ ನಿರಂಜನರ ಪಾತ್ರಗಳಲ್ಲಿ ತುಂಬಿ ತುಳುಕುತ್ತದೆ. ಜ್ವಾಲಾಮುಖಿಯಲ್ಲಿ ನೋವುಣ್ಣುವ ಪಾತ್ರಗಳು ಚಿರಸ್ಮರಣೆಯಲ್ಲಿ ನೊವಿನ ಕಾರಣಗಳನ್ನು ವೈಜ್ಞಾನಿಕವಾಗಿ ಅರಿತುಕೊಂಡಿವೆ. ಈ ಲೇಖಕರಿಬ್ಬರಿಗೂ ದಕ್ಕಿದ ಜೀವನಾನುಭವದ ಹಿನ್ನೆಲೆಯಲ್ಲಿ ಎರಡೂ ಕೃತಿಗಳ ಸಾಚಾತನವನ್ನು ತಮ್ಮತಮ್ಮ ದೃಷ್ಟಿಯಿಂದ ನೋಡುವುದು ಅಚಾರಿತ್ರಿಕವಾಗುತ್ತದೆ. ಆದರೆ ಕ್ರಾಂತಿಕಾರಿ ಹೋರಾಟವೊಂದರ ನಿಕಟ ಸಂಪರ್ಕವಿಟ್ಟುಕೊಂಡು, ಆ ಅನುಭವವನ್ನು ಪಡೆದುಕೊಂಡ ವಿಶೀಷ್ಟತೆಯುಳ್ಳ ಕೆಲವೇ ಕನ್ನಡ ಲೇಖಕರಲ್ಲಿ ನಿರಂಜನ ಅಗ್ರಮಾನ್ಯರು. ಆದ್ದರಿಂದಲೇ 'ಚಿರಸ್ಮರಣೆ ಬಂಡಾಯ ಸಾಹಿತ್ಯದ ಅತ್ಯುತ್ತಮ ಪ್ರತಿನಿಧಿ.

ಬ್ರಿಟೀಷರನ್ನು ಈ ನೆಲದಿಂದ ಕಾಲ್ತೆಗೆಯುವಂತೆ ಮಾಡುವುದೇ ಜನಮನದ ಪ್ರಬಲ ಆಕಾಂಕ್ಷೆ ಆಗಿದ್ದ ಕಾಲದಲ್ಲಿ ಹಲವು ಜನಪರ ಶಕ್ತಿಗಳು ಇನ್ನೂ ಅರ್ಥಪೂರ್ಣವಾದ ಹಂಬಲಕ್ಕಾಗಿ ಹಾತೋರೆಯುತ್ತಿದ್ದವು. ಆಂಗ್ಲ ವಸಾಹತು ಶಾಹಿಯಿಂದ ಭಾರತೀಯ ಬಂಡವಾಳ ಸಮಾಜದ ಅಮೂಲಾಗ್ರ ಬದಲಾವಣೆಯನ್ನು ಹಾರೈಸುತ್ತಿದ್ದವು. ಆಂಗ್ಲರನ್ನು ಓಡಿಸುವುದರ ಜೊತೆಗೆ ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ಒದ್ದೋಡಿಸುವುದು ಇವರ ಗುರಿಯಾಗಿತ್ತು. ಈ ಕ್ರಾಂತಿಕಾರಿ ಪ್ರಜ್ಞೆ ಕಯ್ಯೂರಿನಲ್ಲಿ ಪ್ರತಿಫಲಗೊಂಡ ಕಥೆಯೇ 'ಚಿರಸ್ಮರಣೆ'.

ಹೊಸ ಸಮಾಜದ ರಚನೆಗಾಗಿ ಹೋರಾಡುತ್ತಿರುವ ಕಯ್ಯೂರು ಗ್ರಾಮದ ಜನತೆ ತನ್ನೆಲ್ಲ ಮಾನವೀಯ ವಿವರಗಳೊಂದಿಗೆ ಇಲ್ಲಿ ಚಿತ್ರಸಲ್ಪಟ್ಟಿದ್ದಾರೆ. ಈ ಹೋರಾಟದ ದುರಂತ ಅತ್ಯಂತ ಮಾನವೀಯ ವಿವರಗಳೊಂದಿಗೆ ಇಲ್ಲಿ ಚಿತ್ರಿಸಲ್ಪಟ್ಟಿದ್ದಾರೆ. ಈ ಹೋರಾಟದ ದುರಂತ ಅತ್ಯಂತ ಅನುಕಂಪದಿಂದ ದಾಖಲಾಗಿದೆ. ಆಳುವ ಪ್ರಭುತ್ವದ ರಾಕ್ಷಸ ಶಕ್ತಿಯು ಹೊಸಕಿ ಹಾಕಿದ ಕೆಂಪು ಗುಲಾಬಿಯ ಬಗ್ಗೆ ಕಣ್ಣೀರು ಮಿಡಿಯುವುದರೊಂದಿಗೆ ಈ ಕಥೆ ಮುಗಿಯುವುದಿಲ್ಲ. ಭರವಸೆಯ ಬೆಳಕಿನ ಕಿರಣ ಎಲ್ಲಿಂದಲೋ ನುಗ್ಗಿ ಬರುತ್ತಿರುವುದನ್ನು ನಾವು ಕಾಣುತ್ತೇವೆ. ನಿರಂಜನರಲ್ಲಿ ಮಡುಗಟ್ಟಿರುವ ಗಾಢವಾದ ಚಾರಿತ್ರಿಕ ಪ್ರಜ್ಞೆಯೇ ಇದಕ್ಕೆ ಕಾರಣ. ಆದ್ದರಿಂದಲೇ 'ಚಿರಸ್ಮರಣೆ' ಆಕ್ರಂದನವಲ್ಲ. ಸಂಕಟದ ಹತಾಶ ಚಿತ್ರಣವೂ ಅಲ್ಲ. ಬದಲಾವಣೆಯನ್ನು ಮಿಡಿಯುವ ಮಾನವೀಯ ಕಲಾಕೃತಿ.

ಚಿರಕುಂಡ ಮತ್ತು ಅಪ್ಪು ಇನ್ನೂ ಚಿಕ್ಕವರು. ಇವರಲ್ಲಿ ಹೊಸ ವಿಚಾರದ ಕಿಡಿ ಹೊತ್ತಿಸಿದರು ಅವರು ಮಾಸ್ತರರು. ಹುಡುಗರಿಬ್ಬರೂ ಬೆಳಿಗ್ಗೆ ಎದ್ದವರೇ ಮಾಸ್ತರು ಬರಹೇಳಿದ್ದ

ಸ್ಥಳಕ್ಕೆ ಹೋಗುತ್ತಾರೆ. ನೀರನ್ನು ದಾಟಿ ಟೀ ಅಂಗಡಿಯೊಂದಕ್ಕೆ ಬಂದಾಗ ಬಾಲಕರಿಗೆ ಹೊಸ ಪ್ರಪಂಚದ ಪರಿಚಯವಾಗುತ್ತದೆ. ಅಲ್ಲಿಯವರೆಗೂ ಶಾಬ್ದಿಕವಾಗಿದ್ದ ಕ್ರಾಂತಿಯು ಮನುಷ್ಯನ ರೂಪದಲ್ಲಿ ಜೀವಂತವಾಗಿ ಕಾಣಿಸಿಕೊಳ್ಳುತ್ತದೆ. ಚಹಾ ಅಂಗಿಯವನು ಹುಡುಗರ ಬಳಿ ದುಡ್ಡಿಲ್ಲದಿದ್ದರೂ ಟೀ ಮಾಡಿಕೊಡುತ್ತಾನೆ. ಮೊದಲ ಬಾರಿಗೆ ನೋಡಿದರೂ ಗುರುತಿಸಿ ಅವರ ಹೆಸರನ್ನು ಹೇಳುತ್ತಾನೆ. ಅಪ್ಪು, ಚಿರಕುಂಡರಿಗೆ ಜಗತ್ತು ಮಾನವೀಯವೂ, ವಿಶಾಲವೂ ಆಗಿರುವುದು ಮನವರಿಕೆಯಾಗುವುದಷ್ಟೇ ಅಲ್ಲ, ತುಳಿಯುವವರ ವಿರುದ್ಧ ಹೋರಾಡುವ ಶೋಷಿತರ ಹೃದಯವಂತಿಕೆಯ ಸ್ಪರ್ಶವಾಗುತ್ತದೆ. ಬಾಳಿನಲ್ಲೇ ಮೊದಲ ಸಲ, ಈ ಬಡ ಹುಡುಗರಿಬ್ಬರೂ ತಮ್ಮ ಪ್ರಾಮುಖ್ಯತೆಯನ್ನೂ ಸಮಾಜ ಬದಲಾವಣೆಯಲ್ಲಿ ತಾವು ನಿರ್ವಹಿಸಬೇಕಾಗಿರುವ ಮಹತ್ತರ ಪಾತ್ರವನ್ನೂ ಅರ್ಥ ಮಾಡಿಕೊಳ್ಳುತ್ತಾರೆ. ರೈತನ ತೋಟದಲ್ಲಿ ಪಂಡಿತರು ಪತ್ರಿಕೆಯನ್ನು ಅಡ್ಡ ಹಿಡಿದು ಮುಖ ಮರೆಸಿಕೊಂಡಾಗ ನಿಗೂಢವಾಗಿ ಕಾಣುತ್ತಿದ್ದ ಕ್ರಾಂತಿಕಾರಿ ಬದುಕಿನ ಸಾಹಸಮಯತೆಯ ರುಚಿಯನ್ನೂ ಅವರು ಅನುಭವಿಸುತ್ತಾರೆ. ಪಂಡಿತರ ಭಾಷಣದಿಂದ ಚೈತನ್ಯವಂತರಾದ ಈ ಪುಟ್ಟ ಕ್ರಾಂತಿಕಾರಿಗಳು ಕಯ್ಯಾರಿಗೆ ಹಿಂದಿರುಗುತ್ತಾರೆ. ಕ್ರಾಂತಿಕಾರಿ ವಿಚಾರಧಾರೆ ಚಿರಕುಂಡನ ಮನೆಯಲ್ಲೇ ಪರೀಕ್ಷೆಗೆ ಒಳಗಾಗುವ ಪರಿಸ್ಥಿತಿ ಬಂದದ್ದು ಆಕಸ್ಮಿಕವಾದರೂ ಅಸಹಜವಲ್ಲ. ಚಿರಕುಂಡನ ತಂದೆ ಅಂದಿನ ರಾತ್ರಿಯಿಂದ ಜಮೀನ್ದಾರನ ಒಕ್ಕಲಾಗಿ ಮಾರ್ಪಡುತ್ತಾನೆ.

ಕಯ್ಯೂರಿನ ಬಡಜನತೆಯಲ್ಲಿ ಮೊಳಕೆಯೊಡೆದು ಹೆಮ್ಮರವಾದ ವರ್ಗ ಪ್ರಜ್ಞೆ ಆಳುವ ವರ್ಗದ ನಿದ್ದೆಯನ್ನು ಕಸಿದುಕೊಂಡಿತು. ಮೂಢನಂಬಿಕೆಯಲ್ಲಿ ಮಲಗಿದ್ದ ಜನ ಪ್ರಪಂಚದ ಹುಟ್ಟು, ಬೆಳವಣಿಗೆಯನ್ನು ವೈಜ್ಞಾನಿಕವಾಗಿ ಚಿಂತಿಸತೊಡಗಿದರು. ಭೂಸ್ವಾಮಿಗಳ ಎದುರು ತಗ್ಗಿ ಬಗ್ಗಿ ನಡೆಯುತ್ತಿದ್ದ ದಲಿತರು ತಲೆಯೆತ್ತಿ ನಡೆಯುವಂತಾದರು. ಕ್ರಾಂತಿಕಾರಿ ವಿಚಾರಧಾರೆ ಶೋಷಿತರಲ್ಲಿ ಮೂಡಿಸಿದ ಅದಮ್ಯ ಆತ್ಮವಿಶ್ವಾಸವನ್ನು ನಾವಿಲ್ಲಿ ಕಾಣುತ್ತೇವೆ. ತುಳಿತಕ್ಕೆ ಒಳಗಾದವರಿಗೆ ಸಿಕ್ಕಿದ ಹೋರಾಟದ ಶಿಕ್ಷಣ ಅವರನ್ನಷ್ಟೇ ಬದಲಿಸಲಿಲ್ಲ. ಸಮಾಜವನ್ನೇ ಬದಲಿಸುವ ಸಾಧನವಾಗಿ ಅವರು ಪರಿವರ್ತನೆಗೊಂಡರು. ಕೃತಿಯಲ್ಲಿ ಈ ಎಲ್ಲ ವಿವರಗಳು ಜೀವಂತವಾಗಿ ನಿರೂಪಣೆಯಾಗಿವೆ. ಇಂಥ ವಸ್ತುವನ್ನುಳ್ಳ ಯಾವುದೇ ಬರವಣಿಗೆ ಒಂದು ಸಿದ್ಧಾಂತದಂತೆ ನಮಗೆ ಕಾಣಿಸಿಬಿಡಬಹುದು. ಓದಿದ ಓಟ ಕಡಿಮೆಯಾಗುವ ಸಂಭವವೇ ಇಲ್ಲ. ಬದುಕು ಮತ್ತು ಸಿದ್ಧಾಂತ ಅರ್ಥಪೂರ್ಣ ಸಾಮರಸ್ಯವನ್ನ ಸಾಧಿಸಿದ ಅಪೂರ್ವ ಸನ್ನಿವೇಶವನ್ನು ನಾವಿಲ್ಲಿ ಕಾಣುತ್ತೇವೆ. ಕಯ್ಯೂರು ಹೋರಾಟದ ಬದುಕಿನ ಪುನಃ ಸೃಷ್ಟಿಯಲ್ಲಿ ಲೇಖಕರು ಯಶಸ್ವಿ ಆಗಿರುವುದು ಈ ಕಾರಣದಿಂದಲೇ.

ಪತ್ರಿಕೆ ಓದುವುದರಿಂದ ಆರಂಭವಾದ ಜನಜಾಗೃತಿ ಕಯ್ಯೂರು ರೈತರು ಪ್ರಾಂತ ರೈತ ಸಮ್ಮೇಳನದಲ್ಲಿ ಭಾವಹಿಸುವವರೆಗೂ ಮುಂದುವರಿಯುತ್ತದೆ. ರೈತ ಸಂಘದ ಸ್ಥಾಪನೆಯಲ್ಲಿ ಇದಕ್ಕೆ ಬಹಿರಂಗವಾದ ಸಂಘಟಿತ ಸ್ವರೂಪ ಬರುತ್ತದೆ. ಈ ಜಾಗೃತಿಯ ಬೆಳವಣಿಗೆ ಭೂಮಾಲೀಕರಲ್ಲಿ ಭಯದ ಬೀಜಗಳನ್ನು ಬಿತ್ತಿತ್ತು. ರೈತರ ಬೆಳಗಿನ ಮೆರವಣಿಗೆಯನ್ನು

ತಡೆಯಲು ಬಂದ ಪೋಲೀಸು ಸುಬ್ಬಯ್ಯ ಹೊಳೆಯಲ್ಲಿ ಮುಳುಗಿ ಸತ್ತ ನಂತರ ಕಾದಂಬರಿಗೆ ಹೊಸ ತಿರುವು ಬರುತ್ತದೆ. ಜನಜಾಗೃತಿಗೆ ಪ್ರತಿಕ್ರಿಯೆಯಾಗಿ ಆಳುವ ವರ್ಗದ ದಮನದ ಅಧ್ಯಾಯ ಆರಂಭವಾಯಿತು. ವಿಚಾರಣೆಯ ನಾಟಕದ ನಂತರ ನಾಲ್ವರು ಕಯ್ಯೂರು ವೀರರಿಗೆ ಮರಣ ದಂಡನೆಯಾಗುತ್ತದೆ. 'ಭಾರತ ಮಾತಾಕಿ ಜೈ' 'ಮಹಾತ್ಮ ಗಾಂಧೀಕಿ ಜೈ' ಈ ಘೋಷಣೆಗಳು 'ಇನ್ಕಿಲಾಲ್ ಜಿಂದಾಬಾದ್' ಸ್ವರೂಪವನ್ನು ಪಡೆದ ಪ್ರಕ್ರಿಯೆಯ ವಸ್ತುನಿಷ್ಠ ನಿರೂಪಣೆ ಇಲ್ಲಿದೆ. ಸುಲಿಗೆಗಾರ ವರ್ಗ ಈ ಕ್ರಾಂತಿಯ ಸೊಲ್ಲನ್ನು ದಮನ ಮಾಡಿದ ದುರಂತ ಹೃದಯವನ್ನು ಕಲಕುತ್ತದೆ.[೧]

ಕಾದಂಬರಿಯಲ್ಲಿ ಬರುವ ಮಾಸ್ತರು ಕನ್ನಡದಲ್ಲೇ ಒಂದು ವಿಶಿಷ್ಟ ಪಾತ್ರ ಮಾಸ್ತರಿಕೆಯ ಮುಖವಾಡ ಹಾಕಿದ ಈ ಕ್ರಾಂತಿಕಾರಿಯ ಸೌಜನ್ಯಶೀಲತೆ, ಕಷ್ಟ–ಸಹಿಷ್ಣುತೆ ಓದುಗರಲ್ಲಿ ಅಭಿಮಾನ, ಅನುಕಂಪಗಳನ್ನು ಹುಟ್ಟಿಸುತ್ತದೆ. ಧಾಂಡಿಗನ ಪಾತ್ರ ಸೃಷ್ಟಿ ಲೇಖಕರ ಹಾಸು ಪ್ರಜ್ಞೆಗೆ ಸಾಕ್ಷಿ. ಕ್ರಾಂತಿಕಾರಿಯಾದವನು ಸದಾ ಮುಖ ಗಂಟಿಕ್ಕಿಕೊಂಡಿರಬೇಕು ಎಂಬುದಕ್ಕೆ ಇಲ್ಲಿಯ ಎಲ್ಲ ಪಾತ್ರಗಳೂ ಅಪವಾದ. ಧಾಂಡಿಗನಂತೂ ನೂರಕ್ಕೆ ನೂರರಷ್ಟು ಭಿನ್ನ ಅಪ್ಪು ಚಿರಕುಂಡರ ಪಾತ್ರಗಳೂ ನಮ್ಮ ಮನಸ್ಸಿನಲ್ಲಿ ಹಲವು ಕಾಲ ನಿಲ್ಲುತ್ತವೆ. ಸಾತ್ವಿಕ ಆವೇಶದಿಂದ ಆರಂಭವಾದ ಅವರ ನಿಷ್ಠೆ ಕ್ರಾಂತಿಕಾರಿ ವೈಚಾರಿಕತೆಯ ನೆಲೆಯನ್ನು ಮುಟ್ಟಿ ಗಟ್ಟಿಗೊಂಡ ಬಗೆ ಮನೋಜ್ಞವಾಗಿ ಚಿತ್ರತವಾಗಿದೆ. ಕ್ರಾಂತಿಕಾರಿ ಲೇಖಕನಿಗೆ ಸಿದ್ಧಾಂತದ ಕೃತಿ ರಚನೆ ಸಾಧ್ಯ. ಇಂಥ ಸಾಮರ್ಥ್ಯ ಇಲ್ಲಿ ಸುಪುಷ್ಟವಾಗಿ ಪ್ರಕಟಗೊಂಡಿದೆ.

ಕೆಲವೇ ದಶಕಗಳ ಹಿಂದೆ ನಡೆದ ಕಯ್ಯೂರು ರೈತರ ಹೋರಾಟಕ್ಕೆ ಕಾದಂಬರಿಯ ರೂಪು ಕೊಟ್ಟು ಕನ್ನಡ ಓದುಗರೆಲ್ಲರ ಕೃತಜ್ಞತೆಗೆ ನಿರಂಜನರು ಪಾತ್ರರಾಗಿದ್ದಾರೆ. ರೈತ ಹೋರಾಟಗಾರರು, ಕ್ರಾಂತಿಕಾರಿ ಬರಹಗಾರರು ಮಾತ್ರವಲ್ಲ, ಮಾನವೀಯತೆಯ ಬಗೆಗೆ ಕಿಂಚಿತ್ತಾದರೂ ಕಾಳಜಿಯುಳ್ಳ ಎಲ್ಲರೂ ಓದಬೇಕಾದ ಕೃತಿ ಇದು.[೨]

ಹೀಗೆ ಕಾದಂಬರಿ ಇಷ್ಟೆಲ್ಲಾ ಗುಣ ದೋಷಗಳನ್ನು ಹೊಂದಿದ್ದರೂ ಚಿರಸ್ಮರಣೆ ತನ್ನ ಮಿತಿಯಲ್ಲಿ ಒಂದು ಸಫಲಯತ್ನ ಎನಿಸಿಕೊಂಡಿದೆ.

ಮಾಡಿಮಡಿದವರು ಸಮಾಜವಾದದ ನೆಲೆಗಟ್ಟಿನ ಮೇಲೆ ನಿಂತಿದೆ. ಆದರೆ ಚಿರಸ್ಮರಣೆ ಕೃತಿಯು ಮಾರ್ಕ್ಸ್‌ವಾದದ ನೆಲೆಗಟ್ಟಿನ ಮೇಲೆ ನಿಂತಿದೆ ಅದೇ 'ಮಾಡಿಮಡಿದವರು'.

ಕಾದರಂಬರಿಯಲ್ಲಿ ಜನತೆ ಬ್ರಿಟಿಷರ ವಿರುದ್ಧ ಸಂಘಟಿತರಾಗಿ ಸ್ವಾತಂತ್ರ್ಯ ಪಡೆಯಲು ಹೋರಾಡಿದರು ಆದರೆ ಚಿರಸ್ಮರಣೆಯಲ್ಲಿ ಸ್ವಾತಂತ್ರ್ಯದ ಚಳುವಳಿಯ ಜೊತೆಜೊತೆಗೆ ಬಂಡವಾಳಶಾಹಿಗಳ ವಿರುದ್ಧ ದಂಗೆ ಎದ್ದರು ಅಲ್ಲದೇ ಈ ಎರಡು ಕಾದಂಬರಿಗಳು ಅಹಿಂಸಾ ತತ್ವದಲ್ಲಿ ಸಾಮ್ಯತೆಯನ್ನು ಒಳಗೊಂಡಿದ್ದು ಈ ಎರಡು ಕೃತಿಗಳ ಸ್ವಾತಂತ್ರ್ಯ ಸಂಗ್ರಾಮದ ಭಿನ್ನತೆ. ಸಾಮತ್ಯತೆಗಳ ವಿಮರ್ಶಾತ್ಮಕ ವಿಶ್ಲೇಷಣೆಯನ್ನು ಈ ಅಧ್ಯಯನ ಒಳಗೊಂಡಿರುತ್ತದೆ.

ಅಡಿಟಿಪ್ಪಣಿ

೧. ಡಾ. ಶ್ರೀಕಂಠ ಕೊಡಿಗೆ, ನಿರಂಜನ ಚಿರಸ್ಮರಣೆ, ಪು. ೭೫೭-೭೬೦.

೨. ಡಾ. ಸಿದ್ದಲಿಂಗಯ್ಯ , ಜನಸಂಸ್ಕೃತಿ ೨೦೦೭, ಪು. ೨೩೦-೨೩೩

ಅಧ್ಯಾಯ-೬

ಉಪಸಂಹಾರ

ಮಾಡಿಮಡಿದವರು ಹಾಗೂ ಚಿರಸ್ಮರಣೆ ಕಾದಂಬರಿಗಳು ಸ್ವಾತಂತ್ರ್ಯದ ಬಗೆಗಿನ ಚಿಂತನೆ ಹಾಗೂ ಜನರು ಸ್ವಾತಂತ್ರ್ಯಕ್ಕಾಗಿ ಸಂಘಟನೆಗೊಂಡ ರೀತಿ ಗಾಂಧೀಜಿಯವರ ತತ್ವಕ್ಕೆ ಮನಸೋತ ರೀತಿಯನ್ನು ತಿಳಿಸಲಾಗಿದೆ. ನಿರಂಜನ ಚಿರಸ್ಮರಣೆ ರೈತರ ಶೋಷಣೆಯನ್ನು ಖಂಡಿಸಿದ ರೀತಿಯ ವಿವಿರವಾದ ಮಾಹಿತಿಯನ್ನು ಈ ಕೃತಿಯು ನೀಡಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರ ಬದುಕನ್ನು ಇಂದಿನ ಜನತೆ, ನೆನಪಿನಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ.

ಚಿರಸ್ಮರಣೆ, ಕಾದಂಬರಿ, ಶೋಷಿತ ವರ್ಗಗಳ ಅಕ್ಷರ ಕಲಿಯುವ ಅಪೇಕ್ಷೆಯನ್ನು ಒತ್ತಿ ಹೇಳುತ್ತದೆ. ಅಕ್ಷರ ಜಾನದಿಂದ ಶೋಷಿತವರ್ಗದಿಂದ ದೂರವಾಗಬಹುದು ಎಂದು ಹೇಳುತ್ತದೆ. ಅದೇ ರೀತಿ ಚಿರಸ್ಮರಣೆ ಕೃತಿ ದಾಸ್ಯದ ಮುಕ್ತಿಗೆ ಅಕ್ಷರಜ್ಞಾನದ ಅವಶ್ಯಕತೆ ಇದೆ ಎಂದು ಎಂಬುದನ್ನು ಒತ್ತಿ ಹೇಳಿದೆ.

ಚಿರಸ್ಮರಣೆ ಕೃತಿಯು ಇಂದಿನ ವರ್ಗ ಸಂಘರ್ಷಗಳಿಗೆ ಎಚ್ಚರಿಕೆ ಸಂದೇಶವನ್ನು ಕಳಿಸುತ್ತಾ ಬಂಡವಾಳ ಶಾಹಿಗಳು ಎಚ್ಚೇತ್ತುಕೊಳ್ಳಲು ಆಗೆಯೇ ಶೋಷಿತವರ್ಗ ತನ್ನತನವನ್ನು ಉಳಿಸಿಕೊಳ್ಳಲು ಮಾಡಬಹುದಾದ ಕಾರ್ಯವನ್ನು ಒತ್ತಿಹೇಳಿದೆ.

ಕಟ್ಟಿಮನೀಯವರು ಮಾಡಿ ಮಡಿದವರು ಕಾದಂಬರಿ ಹಳ್ಳಿ ಜನರ ಮುಗ್ಧತೆ ಜೀವನ ಪ್ರೀತಿ, ತ್ಯಾಗ ಸಾಹಸ ಪ್ರಮಾಣಿಕತೆ ಮುಂತಾದವುಗಳನ್ನು ಹೊಗಳುವ, ವರ್ಣಿಸುವ ಕೆಲಸ ಮಾಡಿದಾರೆ. ಅದೆ ರೀತಿ ಇಂದಿನ ನಗರ ಜನರ ಮೋಸ ಕಪಟವನ್ನು ಬಿಚ್ಚಿಡುತ್ತಾರೆ. ಹಳ್ಳಿನಗರಗಳ ವ್ಯತ್ಯಾಸ ವರ್ಗ ಸಂಘರ್ಷದ ಪರಿಕಲ್ಪನೆಯಲ್ಲಿ ತಿಳಿಸುತ್ತಾ, ಹಳ್ಳಿಗಳು ಭಾರತಕ್ಕೆ ಎಷ್ಟು ಮುಖ್ಯ ಎಂಬುದನ್ನು ಒತ್ತಿ ಹೇಳಿದ್ದಾರೆ.

ಹಳ್ಳಿ ನಗರ ವ್ಯತ್ಯಾಸಗಳು ವ್ಯತ್ಯಾಸವನ್ನು ತಿಳಿಸುತ್ತಾ ಹಳ್ಳಿಯ ಅಭಿವೃದ್ಧಿಗೆ ಪರೋಕ್ಷವಾಗಿ ಎಚ್ಚರಿಸಿದ್ದಾರೆ. ಹೋರಾಟದ ಆವರಣವನ್ನು ಅತ್ಯಂತ ಸಮರ್ಥವಾಗಿ ಚಿತ್ರಿಸಿದ ಮಾಡಿಮಡಿದವರು ಕಾದಂಬರಿ ಬೇರೆವೆ ನನ್ನು ಬಯಸದ ಹಾಗೇ ಓದುಗನಲ್ಲಿ ಉತ್ಸಾಹ ಉರ್ರೈಸುತ್ತದೆ ಅದೇ ಕಟ್ಟೀಮನಿಯವರು ಈ ಕಾದಂಬರಿ ರಚನೆಯಲ್ಲಿ ಅತ್ಯಂತ ತಾಳ್ಮೆಯಿಂದ ಸಮರ್ಥ ಅಭಿವ್ಯಕ್ತಿಯನು ಸಾಧಿಸಿದ್ದಾರೆ. ಈ ಕಾದಂಬರಿಯು ಅದ್ಭುತವೆನ್ನಬ ಹುದಾದ ಅಭಿವ್ಯಕ್ತಿಯನ್ನು ಸಾಧಿಸಿದ್ದು, ಕಟ್ಟೀಮನಿಯವರ ಸೃಜನಶೀಳ ಪ್ರತಿಭೆಗೆ ಒಂದು ಸಾಕ್ಷಿಯಾಗಿ ನಿಲ್ಲುತ್ತದೆ.

ಹೇಗೆ ಈ ಎರಡೂ ಕೃತಿಗಳು ವಸ್ತುವಿನ ಕಾಲಘಟ್ಟದ ಬದುಕಿನ ಚಿತ್ರಣದ ಮೂಲಕ ಪ್ರತಿಪಾದಿಸುವ ಜೀವನ ತತ್ವವನ್ನು ವಿಶ್ಲೇಷಿಸುತ್ತಾ ಪ್ರಸ್ತಕ ಕೃತಿಗಳ ಮೌಲ್ಯ ನಿರ್ಣಯದ ಪ್ರಯತ್ನವನ್ನು ಈ ಅಧ್ಯಯನವು ಒಳಗೊಂಡಿದೆ.

ಗ್ರಂಥಋಣ

೧. ನಿರಂಜನ – 'ಚಿರಸ್ಮರಣೆ'
ಪ್ರಕಾಶನ
ಡಿ.ವಿ.ಕೆ. ಮೂರ್ತಿ
ಮೈಸೂರು.
ಮುದ್ರಣ : ೨೦೧೩

೩. ಬಸವರಾಜ ಕಟ್ಟೀಮನಿ – 'ಮಾಡಿಮಡಿದವರು'
ಸ್ವಪ್ನ ಬುಕ್‌ಹೌಸ್,
೩ನೇ ಮುಖ್ಯರಸ್ತೆ, ಗಾಂಧಿನಗರ,
ಬೆಂಗಳೂರು – ೫೬೦ ೦೦೯.
ಮುದ್ರಣ : ೨೦೧೧

ಪರಾಮರ್ಶನ ಗ್ರಂಥಗಳು

೧. ಡಾ. ಬಸವರಾಜ ಸಬರದ – 'ಸಾಹಿತ್ಯ ಸಿಂಚನ'
ಪಲ್ಲವಿ ಪ್ರಕಾಶನ,
ವಿಶ್ವವಿದ್ಯಾನಿಲಯ ಅಂಚೆ,
ಗುಲ್ಬರ್ಗಾ– ೫೮೫ ೧೦೬.
ಮುದ್ರಣ : ೨೦೧೩.

೨. ದೇ.ಜ.ಗೌ. – 'ನಮ್ಮ ನಿಮ್ಮ ಬಳಗ'
ಸ್ವಪ್ನ ಬುಕ್‌ಹೌಸ್,
ವಿಶ್ವವಿದ್ಯಾನಿಲಯ ಅಂಚೆ,
ಗುಲ್ಬರ್ಗಾ– ೫೮೫ ೧೦೬.
ಮುದ್ರಣ : ೨೦೧೧.

೩. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, – ಇತಿಹಾಸ ಅಂತಿಮ ಎಂ.ಎ.,
ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸ
೧೮೮೫ ರಿಂದ ೧೯೪೭)

೪. ಡಾ. ಬೆಳ್ಳೂರು ವೆಂಕಟಪ್ಪ – 'ಪ್ರಗತಿಶೀಲ ಕಥನ'
ಎಂ.ಮೀನಾಕ್ಷಿ ರಮೇಶ್
ಧಾತ್ರಿ ಪುಸ್ತಕ,
ನಂ. ೧೭೦, ೩ನೇ ಸಿ ಕ್ರಾಸ್,
ವಿನಾಯಕ ಲೇಔಟ್, ನಾಗರಬಾವಿ,
೨ನೇ ಹಂತ, ಬೆಂಗಳೂರು – ೫೬೦ ೦೭೨.
ಮುದ್ರಣ : ೨೦೧೧

೫. ರಾಜಪ್ಪ ದಳವಾಯಿ – 'ಕನ್ನಡ ಸಾಹಿತ್ಯ ಕೋಶ'
ದಳವಾಯಿ ಪ್ರಕಾಶನ,
ಅಧ್ಯಾಪಕರ ನಿವಾಸಗಳು,
ಜ್ಞಾನಭಾರತಿ, ಬೆಂಗಳುರು ವಿಶ್ವವಿದ್ಯಾನಿಲಯ,
ಬೆಂಗಳೂರು – ೫೬೦ ೦೫೬.
ಮುದ್ರಣ : ೧೯೯೬

೬. ಡಾ. ಬಸವರಾಜ ಸಾದರ – 'ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು'
ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ,
ಸರಸ್ವತಿ ಗೋದಾಮ,
ಗುಲ್ಬರ್ಗಾ – ೫೮೫ ೧೦೧.
ಮುದ್ರಣ : ೨೦೦೦

೭. ಶ್ರೀಕಂಠ ಕೊಡಿಗೆ – ನಿರಂಜನ 'ಚಿರಸ್ಮರಣೆ'

೮. ಡಾ.ಸಿದ್ದಲಿಂಗಯ್ಯ – 'ಜನಸಂಸ್ಕೃತಿ'
ಮಲ್ಲೇಪುರಂಜಿ.ವೆಂಕಟೇಶ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವಿದ್ಯಾನಿಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ಮುದ್ರಣ ೨೦೦೭